# RESEARCH

# FIELD DATA

## "Qualitative Study to Identify the Mental Health Impacts of poor access to Sanitation among Women and person with Disabilities"

**Area:**

Hospet

Bellary District
Karnataka

**Researcher:**

Ganesh ck

10th Batch fellow
sochara

There Cannot be Health Without Mental Health

Sanitation & Mental Health
rural
& women's perspective

## CONTENTS

1, In-depth Interviews

2, Focus Group Discussions

3, Case Studies

## TARGET GROUPS

1, Adolescents group

2, Middle age women group

3, Person with Disability

## FIELD AREAS

1, Marayammanahalli

2, nagenahalli

3, Danapura

4, SL chowki and chithwadigi (slums)

5, Bhayaluvaddigeri

6, Kampli

7, Ramasagara

## ಹದಿಹರೆಯದವರೊಂದಿಗಿನ ಸಂದರ್ಶನದ ಸಾರಾಂಶ

**ಹೆಸರು : ಅರ್ಪಿತ ಪಿ.ಯು.ಸಿ ಪ್ರಥಮ ನಾಗೇನಹಳ್ಳಿ..**

ನಾನು ಪಿಯು.ಸಿ ಫಸ್ಟ್ ಓದುತ್ತಿದ್ದು, ನಾನು ನಮ್ಮ ಮನೆಗೆ ಬರೋದು ವೀಕ್ಲಿ ಒಂದು ಸಲ (ವಾರಕ್ಕೊಮ್ಮೆ) ಈ ತರ ಬರೋಕ್ಕೆ ಕಾರಣ ನಾನು ಹಾಸ್ಟೆಲ್‌ನಲ್ಲಿದ್ದೀನಿ.ಮತ್ತೆ ಕಾಲೇಜು ತುಂಬಾ ದೂರ ಅಂತ ಅಂಬೋದು. ಆದರೆ ನಂಗೆ ಮಾತ್ರ ಗೊತ್ತು ಸಾರ್ ನಮ್ಮ ಮನೇಲಿ ಶೌಚಾಲಯ ಕೂಡ ಇಲ್ಲಾ ಇಲ್ಲಿ ಬಂದ್ರೆ ಎಲ್ಲಿಗೆ ಹೋಗ್ಬೇಕು ಯಾವ ಕಡೆ ಹೋಗ್ಬೇಕು ಅಂತ ಗೊತ್ತಾಗ್ತಿರ್ಲಿಲ್ಲಾ, ಸಾರ್. ನನ್ನ ಚಿಕ್ಕ ವಯಸ್ಸಿನಿಂದ ನಾನ್ ಹಾಸ್ಟೆಲ್ ನಲ್ಲಿ ಬೆಳೆದಿದ್ದೆ.ಅಲ್ಲಿ ಟಾಯ್ಲೆಟ್ ಇರ್ತಿತ್ತು. ಆಗ ನಾನುತುಂಬಾ ಆರಾಮಾಗಿ ಹೋಗ್ತಿದ್ದೆ. ಆದೆ ಈಗ ಮನಗೆ ಬಂದ್ರೆ ತುಂಬಾನೇ ಹಿಂಸೆ ಆಗ್ತಿದೆ.

ಯಾಕೆಂದ್ರೆ ನಮ್ದೂ ದೊಡ್ಡೂರು. ಊರ ತುಂಬಾ ಯುವಕರು ಅವರು ಜಾಸ್ತಿ ಅಂದ್ರೆ ಊರಾಚೆಗೆ ನಿಂತಿರ್ತಾರೆ. ನಾವೇನನ್ನು ಶೌಚಾಲಯಕ್ಕೆ ಹೋಗ್ಬೇಕಂದೆ ಅವರು ನೋಡ್ದಂಗೆ ಹೋಗ್ಬೇಕು ನೋಡಿದ್ರೆ ಅವಮಾನ. ಈ ಥರ ಚಿತ್ರ ಹಿಂಸೆ ಸಾರ್. ಅದಕ್ಕೆ ನಂಗೆ ಮನೆಗೆ ಹೋಗ್ಬೇಕಂದ್ರೆ ತಲೆ ನೋವು ಬೇಸರ ಹೀಂಗೆ ಒಂದು ಸಲ ನಾನು ನನ್ ಫ್ರೆಂಡ್ಸ್ ಕರ್ಕೊಂಡು ಬಂದಿದ್ದೆ. ನಮ್ಮನೆಗೆ ಅವತ್ತು ಹಬ್ಬ ಇತ್ತು. ನಮ್ಮನೇಲಿ ನಮ್ಮ ಅಮ್ಮವರು ತುಂಬಾ ತಿಂಡಿ ಮಾಡಿದ್ರು ಚೆನ್ನಾಗಿ ತಿಂದಿದ್ದು ವಿಶೇಷವಾಗಿ ನಮ್ಮ ಫ್ರೆಂಡ್ ಅವಳಿಗೆ ಹೊಸ ರೀತಿ ತಿಂಡಿಗಳು ಇವು. ಆದ್ರೆ ಏನಾಯ್ತೋ ಗೊತ್ತಿಲ್ಲ.ನಮ್ಮಿಬ್ಬರಿಗೂ ಮೋಷನ್ ಶುರುವಾಯ್ತು ನೈಟಲ್ಲಿ. ನಮ್ಮನೇಲಿ ಬೇರೆ ಶೌಚಾಲಯಿಲ್ಲ. ನಾನು ಅವಳನ್ನ ಕರ್ಕೊಂಡು ಹೊರಗಡೆ ಹೋಗಿ, ಹೋಗಿ ಬರ್ತಿದ್ದೆ. ಎಷ್ಟು ಸಲ ಅಂತ ಹೋಗೋದುಸ ುಮಾರು 40 ಸಲ ಹೋಗಿದ್ವಿ ಕಡೆಗೆ ಅಲ್ಲೋ ಆಚೆಕಡೆ ಕುಂತಿದ್ವಿ ನಮ್ಗೆ ಹೊಟ್ಟೆನೋವು ತಡ್ಕೋಳೋಕ್ತಾಗ್ತಿಲ್ಲಾ ಸಾರ್. ನಮ್ಮಮ್ಮನವರು ಏನೇನೋ ಮಾಡಿದ್ರು ಆದ್ರೆ ಏನೋ ಆಗ್ಲಿಲ್ಲಾ ಅವತ್ತಂತೂತುಂಬಾ ಅತ್ತಿದ್ದೀವಿ.ನಾನು ಮತ್ತು ನನ್ನ ಫ್ರೆಂಡ್ ಯಾಕಂದ್ರೆ ನೈಟ್‌ನಲ್ಲಿ ಭಯ ಅದು ಬೇರೆ ಮನೆಯಿಂದ ದೂರ.

ಯಾಕಪ್ಪ ಇವಳನ್ನು ಕರ್‍ಕೊಂದು ಬಂದೆ ನಮ್ಮನೇಗ ಅಂಥ ಬಿಕ್ಕಿ ಬಿಕ್ಕಿ ಅತ್ತೀದ್ದೀನಿ. ನಂತರ ಮೂರನೇ ದಿನ ಬೆಳಗ್ಗೆ ನಾವಿಬ್ರೂ ಟಾಯ್ಲೆಟ್ ಗೆ ಹೋಗಿ ಬರ್‍ತೀದ್ವಿ, ರೋಡಲ್ಲಿ.ನಿಂತಿದ್ದ ಯುವಕರು ಯಾವುದೋ ಹೊಸ ಆಕಳು ಬಂದಿದೆ.ಊರಿಗೆ ಒಂದು ನಿಮಿಷ ಮುಂದು ಬರ್‍ಬೇಕಿತ್ತು ಮಿಸ್ ಆಯಿತು. ಎಲ್ಲ ಮುಗಿಸಿಕೊಂಡು ಬರ್‍ತಿದ್ದಾರೆ. " ಅಂತ ಚುಡಾಯಿಸಿದ್ರು ಸಾರ್. ಅಷ್ಟೆ ನಮ್ಮ ಫ್ರೆಂಡ್ ನಮ್ಮನೀಗೆ ಬರೋದಿ ಬಿಟ್ಟುಬಿಟ್ಟಳು. ಮತ್ತು ಈ ಘಟನೇನಾ ಅವಳುನಮ್ಮ ಹಾಸ್ಟೆಲ್ ನಲ್ಲಿ ಎಲ್ಲರಿಗೂ ಹೇಳಿದ್ದಳು. ನಂಗಂತೂ ತುಂಬಾನೇ ಬೇಜಾರು ಆಯ್ತು. ಯಾಕಂದ್ರೆ ಅವರೆಲ್ಲ ಯಾವ ತರ ಹೋಗ್ತೀರೇ ನೀವುಡ್ಯೆಲಿ ಅಲ್ಲಿ ಅಂತಾ ಕೇಳಿದ್ರು.

ಅದ್ರಲ್ಲೂ ಇವರ್ಮನೇಲಿ ಒಳ್ಳೆ ಟಿ.ವಿ.ಶೋಕೇಸ್, ಗಾಡಿ, ಎಲ್ಲಾ ಇದೆ.ಆದ್ರೆ ಶೌಚಾಲಯಮತ್ರ ಇಲಾ ಅಂತಾ ಅಂದ್ರು ಆದ್ರೆ ಎಲ್ಲಾ ಇರೋ ನಮ್ಮನೇಲಿ ಶೌಚಾಲಯ ಆಂದ್ರೆ ಒಂದುಅನಿಷ್ಟ ಮತ್ತು ದುರ್ವಾಸನೆ ಅನ್ನೋ ನಂಬಿಕೆ ಇದೆ ಅಂತ ಅವರಿಗೆ ಗೊತ್ತಿರ್ಲಿಲ್ಲಾ. ಅದೇ ನನ್ನ ಹೇಳಿದ್ರೆ "ನೀವು ಯಾವ ಕಾಲದ ಜನ ಅನ್ತಾರೆ" ಅದಕ್ಕೆ ನಾನೇನು ಹೇಳ್ಳಿಲ್ಲಾ ಸುಮ್ನೆ ಇದ್ದೆ ಆದಾದ ಮೇಲೆ ನಾನು ಮನೆಯವರತ್ರ ಈಘಟನೆಯನ್ನಾ ಹೇಳಿದೆ. ಅದಕ್ಕೆ ಅವರಂದ್ರೂ ಇನ್ಮೇಲೆ ನೀನು ಯಾರ್‍ನೂ ಕರ್‍ಕೊಂಡು ಬರ್‍ಬೇಡ ಅಂತ. ಏನು ಊರಲ್ಲಿ ನೀನೊಬ್ಬಳೇ ಹೆಣ್ಣುಮಗು ಬೇರ್‍ಯಾರುಹೋಗ್ತಾ ಇಲ್ವಾ ಹೊರಗಡೆ ಅವರಂತೆ ನೀನು ಹೋಗಿಬಾ ಸುಮ್ನೆ ನೀವೇನೋ ಚೇಷ್ಟೆ ಮಾಡಿರ್‍ತೀರಿ ಅದಕ್ಕೆ ಅವರುಏನೋ ಅಂದಿರ್‍ತಾರೆ.ಅಂತ ನಮ್ಮಲ್ಲಿ ಲೋಪ ಗುರ್ತಿಸ್ತಾರೆ ಹೊರತು ಶೌಚಾಲಯ ಕಟ್ಟಬೇಕು. ನಮ್ಮ ಮಗು ಸಮಸ್ಯೆ ಏನು ಅಂತ ಅರ್ಥ ಮಾಡಿಕೊಳ್ಳಲಿಲ್ಲ. ಸಾರ್. ನಾನೆಷ್ಟು ಹೇಳಿದ್ರುಅದು ವ್ಯರ್ಥ ಅಂತ ನಂಗೂ ಅನ್ನಿಸಿತ್ತು. ಸಾರ್. ತುಂಬಾ ದು:ಖ ಪಟ್ಟೀದೀನಿ. ಆಮೇಲೆ ಇದ್ದಕ್ಕಿದ್ದಂತೆ ನಾನು ವಾರದಲ್ಲಿ ನಮ್ಮೂರಿಗೆ ಹೋಗದನ್ನಕಡಿಮೆ ಮಾಡ್ದೆ ಯಾಕಂತಾ ನಮ್ಮ ನೆ ಯಾರು ಕೇಳದ್ರು ಅವರ ಮುಂದೆ ಅತ್ತುಕೊಂಡೆ ಕೊನೆಗೆ ನಂಗೋಸ್ಕರ ರೆಸೆಂಟ್ ಆಗಿ ಶೌಚಾಲಯ ಕಟ್ಟಿಸಿದ್ದಾರೆ.ಸಾರ್.

ನಮ್ಮ ಪಕ್ಕದ ಮನೇಲಿ ನಾವುಕಟ್ಟಿಸಿದ ಶೌಚಾಲಯ ನೋಡಿ ಅವರು ಕೂಡ ಕಟ್ಟಿಸಿದ್ರು .ಈಗ ನಾವೆಲ್ಲಾ ಅದನ್ನು ಬಳಸ್ತಿದ್ವಿ, ಆದರೆ ಇನ್ನೂ ತುಂಬಾ ಹುಡುಗೀರು ಈಗ್ಲೂಆಚೆಕಡೆ ಬಯಲು ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಈಗ್ಲೋ ಕೂಡಾ ಹುಡುಗರು ರೇಗಿಸೋದು. ಭಯ ಅಂತ ಮಾನಸಿಕ ಹಿಂಸೆಗಳನ್ನುಅನುಭವಿಸುತ್ತಾ ಇದ್ದಾರೆ. ಸಾರ್.

## ಹದಿಹರೆಯದ ವಯಸ್ಸಿನವರೊಂದಿಗಿನ ಸಂದರ್ಶನದ ಸಾರಾಂಶ :

**ಹೆಸರು : ಶಿಲ್ಪ ನಾಗೇನಹಳ್ಳಿ.**

ನಾನು ಈಗ ದ್ವಿತೀಯ ಪಿ.ಯು.ಸಿ ಓದುತ್ತಿದ್ದು 'ಸಖಿ'ಸಂಸ್ಥೆಯೊಂದಿಗೆ ಗುರ್ತಿಸಿಕೊಂಡಿರುತ್ತೇನೆ. ನಾನು ಕಳೆದ 2 ವರ್ಷಗಳಿಂದ ಒಂದು ರೀತಿಯ ಹೇಳಲಾಗದ ಮಾನಸಿಕ ಖಿನ್ನತೆಗೆ ಒಳಗಾಗಿದ್ದೆ ಅದಕ್ಕೆ ಕಾರಣ ನನ್ನ ಶೌಚದ ಸ್ಥಿತಿ ನಮ್ಮ ಊರಿನಲ್ಲಿ ಶೌಚಾಲಯದ ಕೊರತೆ (ಸಮಸ್ಯೆ) ತುಂಬಾ ಇದೆ. ನಾನು ಮತ್ತು ನಮ್ಮ ಸುತ್ತಮುತ್ತಲಿನ ಹೆಣ್ಣುಮಕ್ಕಳು ಅದರಲ್ಲೂ, ಹದಿಹರೆಯದವರ ಸ್ತಿತಿಯ ಬಗ್ಗೆ ಹೇಳತೀರದು. ಏಕೆಂದರೆ ನಾವು ಈಗ ತಾನೇ ಯೌವ್ವನಕ್ಕೆ ಪಾದಾರ್ಪಣೆಮಾಡಿದ್ದು, ನಮ್ಮ ಮೇಲೆ ಸಮಾಜ ಮತ್ತು ಊರಿನ ಯುವಕರು ಮತ್ತು ಮದುವೆಯಾಗಿರುವ ಗಂಡಸರು ಕೂಡಾ ಕೆಟ್ಟ ದೃಷ್ಟಿಯಿಂದ ನೋಡುವುದನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ನಾವು ಶೌಚಕ್ಕೆ ಹೋಗುವುದು ಮುಂಜಾನೆ ಮತ್ತು ಸಾಯಂಕಾಲದ ವೇಳೆಯಲ್ಲಿ, ದಿನಪೂರ್ತಿ ಮನೆಯಲ್ಲಿರುವ ನಾವು ಹೊರಗೆ ಹೋಗುವ ಮತ್ತು ದೈರ್ಯದಿಂದ ಒಂದೆಡೆ ಕುಳಿತು ಶೌಚ ಮಾಡುವ ನೆಮ್ಮದಿ ಇರುವುದಿಲ್ಲ.

ಸಾಯಂಕಾಲದ ವೇಳೆಯ್ಲಲಿ ಹೆಚ್ಚಾಗಿ ಹದಿಹರೆಯುವ ವಯಸ್ಸಿನವರಾದ ನಾವು ಶೌಚಕ್ಕೆ ಹೊದಾಗ ಅನೇಕ ಯುವಕರು ನಮ್ಮನ್ನು ಛೇಡಿಸುವುದು ಮತ್ತು ನಮ್ಮನ್ನು ಹಿಂಬಾಲಿಸುವುದು ನಮ್ಮ ಮುಂದೆ ಕೆಟ್ಟ ಕೆಟ್ಟ ಪದಗಳನ್ನು, ಶಬ್ದಗಳನ್ನು ಬಳಸುವುದು ಮತ್ತು ನಾವು ಹೋಗುವ ದಾರಿಯುದ್ದಕ್ಕೂ ನಿಲ್ಲುವುದು ಕೇಕೆ ಹಾಕುವುದನ್ನು ಮಾಡುತ್ತಾರೆ. ಇದೆಲ್ಲವನ್ನು ಆವು ಸಹಿಸಿಕೊಳ್ಳಬೇಕು ಮತ್ತು ತಿರುಗಿ ಅವರ ವಿರುದ್ದ ಮಾತನಾಡಲು ಆಗುತ್ತಿಲ್ಲ. ಏಕೆಂದರೆ ನಾವು ಹೇಳಿಕೊಳ್ಳಲಾಗದ ಸ್ಥಿತಿಯಲ್ಲಿರುತ್ತೇವೆ. ಏನಾದರೂ ಅಂದುಕೊಳ್ಳಲಿ ನಮ್ಮ ಕೆಲಸ ನಾವು ಮುಗಿಸಿಕೊಂಡು ಹೋದರೆ ಸಾಕೆಂದೆನಿಸುತ್ತದೆ. ಅದಲ್ಲದೆ ಅನೇಕ ಬಾರಿ ನಾನು ಶೌಚ ಮಾಡುವ ಸ್ಥಳದ ಹುಡುಗರು ಕೂಡ ಮುಂಚಿತವಾಗಿಯೇ ಹೋಗಿ ಕುಳಿತಿರುತ್ತಾರೆ. ಮಾತಾಡದಂತೆ ಒಮ್ಮೆಲೆ ದಿಢೀರನೆ ಎದ್ದು ಮುಂದೆ ಬರುತ್ತಾರೆ. ಆ ಸನ್ನಿವೇಶದಲ್ಲಿ ನನಗೆ ತೀವ್ರ ರೀತಿಯ ದುಖಃ ನಾಚಿಕೆ, ಮೋವೇದನೆಗೆ ಒಳಗಾಗುತ್ತಿದ್ದ ಎ ನಮ್ಮನ್ನು ಆ ಸ್ಥಿತಿಯಲ್ಲಿ ಕಂಡ ಯುಇವಕರು ಮುಗುಳ್ನಗುತ್ತಾ

ಮತ್ತು ಆ ವಿಷಯವನ್ನು ಪದೇ ಪದೇ ನಾವು ಎದುರಾದಗ ಅವರ ಸ್ನೇಹಿತರೊಡನೆ ಹೇಳಿಕೊಳ್ಳುತ್ತಾ ತುಂಬಾ ಮಾನಸಿಕ ಹಿಂಸೆ ಕೊಡುತ್ತಿರುತ್ತಾರೆ.

ಹಲವು ಬಾರಿ ನಾನು ಬೈಯ್ದಿದ್ದೇನೆ ಅವರನ್ನು ಅದಕ್ಕೆ ಅವರು ಅವರ ಸ್ನೇಹಿತರು ನಮ್ಮ ಆಡು ಬಾಷೆಯಲ್ಲಿ "ಊರಿನಲ್ಲಿರುವ ಆಕೆ ಶೌಚಾ ಮಾಡಲು ಬಾರದೆ ಇರಲು ಸಾದ್ಯವೇ ಬಂದೆ ಬರಬೇಕು ಆಗ ನೋಡಿಕೊಳ್ಳೋಣ" ಎಂದು ನಮಗೆ ಎದುರಿಸುತ್ತಿದರು. ಅದ್ದರಿಂದ ರಾತ್ರಿಯ ಹೊತ್ತು & ಮುಂಜಾನೆಯ ವೇಳೆಯಲ್ಲಿ ಶೌಚ ಮಾಡಬೇಕಾದರೆ ಭಯಬೀತರಾಗಿ ಹಿಂದೆ ಮುಂದೆ ನೋಡಿಕೊಂಡು ಮಾಡಬೇಕಾಗುತ್ತದೆ. ಕೆಲವೊಂದು ಸಲ ಮದುವೆಯಾಗಿರುವ ಗಂಡಸರು, ಬೇಕಾಗಿಯೇ ಬ್ಯಾಟರಿಯನ್ನೇ ನಮ್ಮ ಕಡೆಗೆ ಹಾಕುವುದು ಆ ಸಂದರ್ಭದಲ್ಲಿ ದಿಡೀರನೆ ಎದ್ದು ನಿಂತು ನಂತರ ಕುಳಿತು ಈ ರೀತಿಯ ಹಿಂಸೆಗೆ ಮನೋವೇದನೆಗೆ ಒಳಗಾಗುತ್ತಿದೆ. ಇತ್ತ ಮನೆಯಲ್ಲಿ ಶೌಚಾಲಯ ಕಟ್ಟಿಸಿಕೊಡಿ ಎಂದರೆ ಅದಕ್ಕೆ ಕಾರಣಗಳು ನೂರಾರು ಹೇಳುತ್ತಾರೆ. ಅದಕ್ಕೆ ಹೆಚ್ಚು ಹಣ ಬೇಕು ನಮ್ಮಲ್ಲಿ ಅದು ಇಲ್ಲ ಮತ್ತು ಇಷ್ಟು ದಿನ ನಿಮ್ಮಮ್ಮ ನಿಮ್ಮಕ್ಕ ಹೊರಗೆ ಹೋಗುತ್ತಿಲ್ಲವೇ ನೀನು ಮಾತ್ರ ಯಾಕೆ ಈ ರೀತಿ ಕೇಳುತ್ತಿರುವೆ ನಿನ್ನ ಪಾಡಿಗೆ ನೀನು ಸುಮ್ಮನೆ ಹೋಗಿ ಬಾ ಬೆರೆಯವರ ಬಗ್ಗೆ ನೀನೇಕೆ ತಲೆ ಕೆಡಿಸಿಕೊಳ್ತಿಯಾ ಎಂದು ಗದರಿಸುತ್ತಾರೆ ನಮ್ಮ ಮನೆಯಲ್ಲಿ.

ಆದ್ದರಿಂದ ಯಾರಾದರೂ ಏನನ್ನು ಅಂದುಕೊಳ್ಳಲಿ ಎಂದು ನಾವು ಹೋಗಿ ಬರುತ್ತಿದ್ದೇವೆ ಅಚೆ ಕಡೆ ಅದು 1 ಕಿ.ಮೀ ದೂರ ಹೋಗಬೇಕು ಅದರೂ ರಾತ್ರಿ ವೇಳೆ ಬೀದಿನಾಯಿ, ಮತ್ತು ಹಾವು, ಚೇಳು ಗಳ ಕಾಟ ಬೇರೆ. ಒಟ್ಟಾರೆ ನಮ್ಮ ಮನೆಯಲ್ಲಿ ನಾನು ನಮ್ಮ ಅಕ್ಕ ಮತ್ತು ನಮ್ಮಮ್ಮ ತುಂಬಾ ಹೇಳತೀರದ ಸಮಸ್ಯೆಗಳು ಅನುಭವಿಸುತ್ತಿದ್ದೇವೆ. ನನಗಂತೂ ತುಂಬಾ ಮಾನಸಿಕ ಹಿಂಸೆಯಾಗುವುದು ಕಾಲೇಜಿನಿಂದ ಬಂದ ತಕ್ಷಣ ಶೌಚಕ್ಕೆ ಹೋಗಬೇಕೆಂದಿನಿಸುತ್ತಿತ್ತು ಆದರೆ ಸಮೀಪದಲ್ಲಿ ಹೋಗಲು ಜಾಗವಿಲ್ಲ, ಮತ್ತು ಸುತ್ತಲೂ ಗಂಡಸರ ಇರುತ್ತಿದ್ದರು ಆದ್ದರಿಂದ ನೀರನ್ನು ಕೂಡ ಮಿತವಾಗಿ ಕುಡಿಯುತ್ತಿದ್ದೆ. ಏಕೆಂದರೆ ಶೌಚಾಲಯದ ಕೊರತೆ. ದಿನಕ್ಕೆ 'ಒಂದೂವರೆ ಲೀಟರ್' ನೀರು ಕುಡಿಯುತ್ತಿದ್ದ ಕಾಲೇಜಿಗೆ ಹೋದರೆ ಎರಡು ಲೀಟರ್ ಎರಡೂವರೆ ಲೀಟರ್ ಕುಡಿಯುತ್ತಿದ್ದ ಏಕೆಂದರೆ ಕಾಲೇಜಿನಲ್ಲಿ ಶೌಚಾಲಯವಿರುತ್ತಿತ್ತು.

ನಮ್ಮೂರಿನಲ್ಲಿ ಸರ್ಕಾರಿ ಶೌಚಾಲಯವಿದೆ. ಆದರೆ ಅದು ಹಳೆಯರೀತಿಯ ಒಣ ಶೌಚಾಲಯ (ಡ್ರೈ ಟಾಯ್ಲೆಟ್) ಅದನ್ನು ಬಳಸಲಾಗುವುದಿಲ್ಲ ಒಂದು ವೇಳೆ ಬಳಸಲು ಹೋದರೆ ಅಲ್ಲೂ ಕೂಡ ಭಯ ಸುತ್ತಲೂ ಗೋಡೆ ಯಾರಾದರೂ ಬಂದರೆ ಏನಾದರು ಮಾಡಿದರೆ ಮತ್ತು ಅದರಲ್ಲಿ ವಿಪರೀತ ದುರ್ವಾಸನೆ ಅದರಲ್ಲೂ ಈ ಹಂದಿಗಳ ಕಾಟ ಜಾಸ್ತಿ ಅವು ಒಳಗಿನಿಂದ ದೂರುತ್ತಿರುತ್ತವೆ ಮತ್ತು ಭಯ ಉಟ್ಟಿಸುತ್ತಿರುತ್ತವೆ. ಈ ಶೌಚಾಲಯ ಕೂಡ ಊರಿನಿಂದ ತುಂಬಾ ದೂರ ಅಲ್ಲಿಗೆ ಹೋಗಬೇಕಾದರೆ ರಾತ್ರಿ ಹೊತ್ತು ತುಂಬಾ ಭಯ ಒಳ್ಳೆ ಭೂತ ಭಂಗಲೆಯಂತಿರುತ್ತದೆ. ಮೊದಲೇ ಊರಿನಲ್ಲಿ ಭೂತ ದೆವ್ವಗಳು ಶೌಚಾಲಯದಲ್ಲಿರುತ್ತವೆ ಎಂದು. ಈ ಎಲ್ಲಾ ಘಟನೆಗಳಿಂದ ಶೌಚಾಲಯ ಇಲ್ಲದಿರುವುದರಿಂದ ನಮಗೆ ಆತಂಕವಾಗಿದೆ. ಮತ್ತು ಇದೊಂದು ಹೇಳಲಾಗದ ಮತ್ತು ಅನುಭವಿಸಲಾಗದ ಮಾನಸಿಕ ಹಿಂಸೆ (ಸಮಸ್ಯೆ) ಯಾಗಿದೆ.

## ಹದಿಹರೆಯದ ವಯಸ್ಸಿನವರೊಂದಿಗಿನ ಸಂದರ್ಶನದ ಸಾರಾಂಶ :

**ಹೆಸರು : ಫಾತೀಮಾ, ಕಂಪ್ಲಿ.**

ನಾನು ಪ್ರಥಮ ಪಿ.ಯು.ಸಿ ಓದುತ್ತಿದ್ದು 'ಸಖಿ'ಸಂಸ್ಥೆಯೊಂದಿಗೆ ಗುರ್ತಿಸಿಕೊಂಡಿರುತ್ತೇನೆ. ನಾನು ಕೂಡಾ ಶೌಚಾಲಯದ ಅಭಾವದಿಮದ ತೀವ್ರ ರೀತಿಯಲ್ಲಿ ನೊಂದಿದ್ದೇನೆ. ಮತ್ತು ಆ ಸಮಸ್ಯೆಯನ್ನು ಅನುಭವಿಸಿದ್ದೇನೆ. ನಮ್ಮ ಊರಿನಲ್ಲಿ ಸರ್ಕಾರಿ ಶೌಚಾಲಯವಿದ್ದು ಪಕ್ಕದಲ್ಲೇ ಬಂದು ತಿಪ್ಪೇಗುಂಡಿ ಇರುತ್ತಿತ್ತು ಆ ತಿಪ್ಪೆ ಗುಂಡಿಗಳಲ್ಲಿ ಗಂಡಸರು ಮದುವೆಯಾಗಿರುವವರು ಮತ್ತು ಯುವಕರು ಬಂದು ಶೌಚಾಲಯಕ್ಕೆ ಕುಳಿತಿರುತ್ತಿದ್ದರು. ಆ ಗುಂಡಿಗಳ ಪಕ್ಕದಲ್ಲೇ ಈ ಶೌಚಾಲಯವಿದೆ. ನಾವು ಅಲ್ಲಿಗೆ ಹೋಗಬೇಕಾದರೆ ಈ ಎಲ್ಲಾ ದಾರುಣಗಳನ್ನು ನೋಡಿಕೊಂಡು ಹೋಗಬೇಕಾಗುತ್ತದೆ. ವಿಶೇಷವೆಂದರೆ ನಾವು ನೋಡಿದಾಗ ಅಥವಾ ನಾವು ಬರುವಾಗ ಆ ಗಂಡಸರು ಎದ್ದುಕೂಡ ನಿಲ್ಲುವುದಿಲ್ಲ, ಆದರೆ ನಾವು ಮಾತ್ರ ಮುಜುಗರಕ್ಕೆ ಬಳಗಾಗುತ್ತಿದ್ದೇವು. ಮತ್ತೆ ಒಂದು ವಹಿಳೆ ಬೆಳಗಿನ ಜಾವ ಶೌಚಾಲಯಕ್ಕೆ ಹೋಗಬೇಕಾದರೆ ಊರಿನ ಸ್ವಲ್ಪ ಬಾಗದ ಮಹಿಳೆಯರು ಸರ್ಕಾರಿ ಸೌಚಾಲಯಕ್ಕೆ ಬರುತ್ತಿದ್ದರು ಆಗ ಅಲ್ಲಿ ಸಾಲು ರೀತಿಯಲ್ಲಿ ನಿಲ್ಲಬೇಕಿತ್ತು. ಅದನ್ನು ಕಾಣುವ ಯುವಕರು ಗಂಡಸರು ಫೋಟೋ ತೆಗೆಯುವುದು ಮತ್ತು ಜೋರಾಗಿ ನಗುವುದು ಮತ್ತು (ಇಂಡೈರೆಕ್ಟ್) ಆಗಿ ತಡ್ಕೊಳಕ್ಕೆ ಅಗಲ್ವ ಎಂದು ಛೇಡಿಸುತ್ತಿದ್ದರು.

ಹಲವು ಬಾರಿ ನಮ್ಮ ಫೋಟೋಗಳನ್ನು ಕೂಡಾ ತೆಗೆದುಕೊಂಡಿದ್ದಾರೆ. ನಾವು ಶೌಚಲಯದ ಎದುರು ನಿಂತಾಗ ಬಂದು ವೇಳೆ ಆಚೆಕಡೆ ಹೋಗಬೇಕಂದ್ರ ಆ ಸಮಸ್ಯೆಯಂತೂ ಹೇಳತೀರದ್ದು. ಸರ್ಕಾರಿ ಶೌಚಾಲಯ ದಲ್ಲನಾ ನೆಮ್ಮದಿಯಿಂದ ಕೂರಲು ಸಾದ್ಯ ಆದರೆ ಬಯಲಿಗೆ ಹೋದರೆ ಮಾತ್ರ ನೆಮ್ಮದಿಯಿಲ್ಲ ಯಾರು ಯಾವಾಗ ಬರುವರೋ ಯಾವ ಕಡೆಯಿಂದ ಬರುವರೋ ಎಂದು ಭಯದಿಂದ ಮಾಡಬೇಕು. ಒಂದು ವೇಳೆ (ಮೋಷನ್) ಆದರೆ ಅಂತೂ ಜೀವ ತೆಗೆದುಕೊಂಡಂತೆ ಏಕೆಂದರೆ ಎಷ್ಟು ಬಾರಿ ಹೋಗಲು ಸಾದ್ಯ ಈ ಸಮಸ್ಯೆಗಳ ನಡುವೆ ಆಚೆಗೆ. ನನಗಂತೂ ದೊಡ್ಡ ಮಾನಸಿಕ ಹಿಂಸೆಯೇ ಆಗಿತ್ತು ದಿನ ನಿತ್ಯವೂ ನನಗೆ ಭಯವಾಗೋದು. ನಾನು ಎಲ್ಲರಂತೆ ಸರಿಯಾಗಿ ಊಟ ಮಾಡಿಲ್ಲ ಮತ್ತು ಮಾಡೋ ಊಟದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ (ಎಣ್ಣೆ, ಕಾರ, ಹುಳಿ) (ಮೋಷನ್) ಆಗುವ ಸಾದ್ಯತೆಗಳಿರುತ್ತವೆಂದು ನಮ್ಮಮ್ಮ ಹೇಳುತ್ತಿದ್ದರು.

ಅದ್ದರಿಂದ ಊಟದಲ್ಲೂ, ಕೂಡ ನನಗೆ ಭಯವಾಗುತ್ತಿತ್ತು ಮತ್ತು ನನಗೆ ಗೊತ್ತಿಲ್ಲದಂತೆ ನನಗೆ ಆಗಾಗ ಕಿಚ್ಚೊಟ್ಟೆ ನೋವು ಬರುತ್ತಿತ್ತು, ಡಾಕ್ಟರ್‌ನ್ನು ಬೇಟಿ ಮಾಡಿದಾಗ ಗ್ಯಾಸ್ಟ್ರಿಕ್ಟ್ ಸಂಬಂದಿಸಿದೆಯೆಂದು ಹೇಳಿದರು. ನನಗೆ ತುಂಬಾ ಭಯವಾಯಿತು ಯಾಕೆ ಸರಿಯಾಗಿ ಮತ್ತು ಸಮವಾದ ಊಟ ಮಾಡುತ್ತಿಲ್ಲಾ ಎಂದು ಕೇಳಿದರು ಆದರೆ ನಾನು ಏನಂತಾ ಹೇಳಿಕೊಳ್ಳಲಿ ನನ್ನ ಸಮಸ್ಯೆಯನ್ನು ಅವರ ಮುಂದೆ ನಮ್ಮ ತಾಯಿಯ ಬಳಿ ನನ್ನ ಸಮಸ್ಯೆಯ ಬಗ್ಗೆ ಹೇಳಿದೆ. ಕೆಲವು ಬಾರಿ ನಮ್ಮ ತಾಯಿ ನನ್ನ ಜೊತೆ ಶೌಚಾಲಯಕ್ಕೆ ಬರುತ್ತಿದ್ದಳು. ನಮ್ಮ ಊರಿನ ಕಡೆ ಬೀದಿ ನಾಯಿಗಳ ಕಾಟ ತುಂಬಾ ಜಾಸ್ತಿ ರಾತ್ರಿಯ ವೇಳೆಯಲ್ಲಂತೂ ಜನರನ್ನು ಅಟ್ಟಿಸಿಕೊಂಡು ಬರುತ್ತವೆ. ಅದ್ದರಿಂದ ನನಗೆ ತುಂಬಾ ಭಯವಾಗೋದು ಅದಲ್ಲದೆ ನಾನು ಹಲವು ಘಟನೆಗಳು ನನಗೆ ನೆನಪಾಗುತ್ತಿದ್ದವು. ಶೌಚಾಲಯಕ್ಕೆ ಹೋದ ಹುಡುಗಿಯ ಮೇಲೆ ಅತ್ಯಾಚಾರ ಕಗ್ಗೊಲೆ ಮತ್ತು ಆತ್ಮಹತ್ಯೆಯಂತಹ ಅಂಶಗಳು. ದಿನದ ಸಮಯದಲ್ಲಿ ಅರಾಮಾಗಿರುತ್ತಿದ್ದೆ ಆದರೆ ರಾತ್ರಿಯ ಹೊತ್ತಿನಲ್ಲಿ ಮಾತ್ರ ನೀರು ಹೆಚ್ಚು ಕುಡಿಯುತ್ತಿರಲಿಲ್ಲ ಮತ್ತು ಮಿತ ಭೋಜನ ಮತ್ತು ಹಲವು ಬಾರಿ ಊಟ ಕೂಡ ಮಾಡದೆ ಮಲಗಿರುವ ರಾತ್ರಿಗಳಿವೆ ಇದಕ್ಕೆಲ್ಲಾ ಕಾರಣ ಸೂಕ್ತ ಶೌಚಾಲಯ

ಇಲ್ಲದಿರುವುದೇ ಆಗಿದೆ. ನಾನು ಕೂಡ ಹಲವು ಬಾರಿ ನಮ್ಮ ತಾಯಿಯ ಬಳಿ ಹೇಳಿದೆ ಅಮ್ಮ ನಮಗೆ ಒಂದು ಶೌಚಾಲಯ ಬೇಕು ಒಂದು ಕಟ್ಟಿಸಿಕೊಳ್ಳೋಣ ಎಂದು ಆದರೆ ಆಕೆ ನೋಡಮ್ಮ ನಮ್ಮ ಹತ್ರ ಅಷ್ಟೊಂದು ದುಡ್ಡು ಇಲ್ಲ ಮತ್ತೆ ನಿಮ್ಮಪ್ಪನು ಒಂದು ಬಾರಿ ಕೇಳು ಎಂದು ಹೇಳಿದಳು.

ನಮ್ಮ ಅಪ್ಪನನ್ನು ಕೂಡ ಕೇಳಿದೆ ಅದಕ್ಕೆ ಆತನು ಕೂಡ ಇದೇ ಉತ್ತರ ಕೊಟ್ಟ ಮತ್ತೆ "ಏನಮ್ಮ 5 ನಿಮಷ ಹೋಗಿ ಬಂದ್ರೆ ಆಯ್ತು" ಅದಕ್ಕೆಲ್ಲಾ ಯಾಕೆ ಇಷ್ಟೊಂದು ರಾದ್ಧಾಂತ ಮಾಡ್ತೀಯಾ ಅಂದ್ರು ಕಡೆಗೆ ಸಖಿ ಸಂಸ್ಥೆಯೊಂದಿಗೆ ಸೇರಿ ನಾವೇ ಮಿತಿಯಾದ ಹಣದಲ್ಲಿ ಒಂದು ಚಿಕ್ಕ ಶೌಚಾಲಯ ಕಟ್ಟಿಕೊಂಡಿದ್ದೇವೆ ಈಗ ನನಗೆ ಸಮಸ್ಯೆ ಇಲ್ಲ ಆದರೆ ಈ ಸಮಸ್ಯೆ ಇನ್ನೂ ನಮ್ಮ ಊರಿನಲ್ಲಿದೆ. ತುಂಬಾ ಜನ ಸಖಿ ಸಂಸ್ಥೆ ಮತ್ತು 'ಪ್ರಹ್ಲಾದ'ರವರ ಸಲಹೆ ಮತ್ತು ಸಹಾಯಗಳ ಮೇರೆಗೆ ಶೌಚಾಲಯ ಕಟ್ಟಿಕೊಂಡಿದ್ದಾರೆ. ಮತ್ತು ಬಳಸುತ್ತಿದ್ದಾರೆ. ಆದರೆ ಅನೇಕ ಜನ ಇನ್ನೂ ಬಯಲು ಶೌಚಾಲಯವನ್ನು ಅವಲಂಭಿಸಿದ್ದಾರೆ. ಅವರು ಇನ್ನೂ ಸಮಸ್ಯೆಯಲ್ಲಿ ನಲುಗುತ್ತಿದ್ದಾರೆ.

**ಕಟ್ಟಿಸದಿರಲು ಮುಖ್ಯ ಕಾರಣವೆಂದರೆ**

- ಕಿತ್ತು ತಿನ್ನುವ ಬಡತನ
- ಸಮಸ್ಯೆಯು ಮಹಿಳೆಯರಿಗಾದ್ದರಿಂದ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ ಕುಟುಂಬ
- ಜಾಗದ ಕೊರತೆ
- ನೀರಿನ ಸಮಸ್ಯೆ
- ಕೆಲವೊಂದು ಸಂಪ್ರದಾಯ ಕಟ್ಟಲೆಗಳು ಶೌಚಾಲಯ ಊರಿನೊಳಗೆ / ಮನೆಯ ಬಳಿ ಅನಿಷ್ಟ.

## ಹದಿಹರೆಯದವರೊಂದಿಗಿನ ಸಂದರ್ಶನದ ಸಾರಾಂಶ :

**ಹೆಸರು : ಅಂಜಿನಮ್ಮ**

ನಾನು ಪ್ರಥಮ ಪಿ.ಯು.ಸಿ. ಓದುತ್ತಿದ್ದೇನೆ. ನನಗೆ ಸ್ವಚ್ಛತೆ ಎಂದ್ರೆ ತಿಳಿದದ್ದು 'ಸಖಿ'ಗೆ ಬಂದ್ಮೇಲೆ ಯಾಕಂದ್ರೆ ನಂಗೆ ನಮ್ಮೂರಲ್ಲಿ ಇರೋ ಸಮಸ್ಯೆಗಳು ಮಾಮೂಲಾಗಿ ಬಿಟ್ಟಿವೆ. ಕಸ, ಕಲುಷಿತ ನೀರು, ಚರಂಡಿ ಮತ್ತು ಶೌಚಾಲಯ ಈ ಯಾವು ನಮ್ಮೂರಲ್ಲಿ ನೆಟ್ಟಗಿ ಇಲ್ಲ. ಯಾಕಂದ್ರ ಜನರು ಯಾರು ಅದರ ಬಗ್ಗೆ ತಲೆ ಕೆಡಸಿಕೊಂಡಿಲ್ಲಾ ಅವು ನೆಟ್ಟಗಿ ಇಲ್ಲದಿದ್ರು ನಾವು ಬದುಕಬಹುದು ಬಿಡು ಎಂದು ಕೊಂಡಿದ್ದಾರೆ. ಹೇಳ್ಬೇಕಂದ್ರ ನಮ್ಮ ಮನೇಲೂ ಶೌಚಾಲಯ ಇಲ್ಲ ಈಗಲೂ ನಾವು ಆಚೆಗೆ ಹೋಗ್ತಿದ್ದೇವೆ ನಮ್ಗೆ ಶೌಚಾಲಯ ಕಟ್ಟಿಸಿಕೊಳ್ಳೊಕೆ ಜಾಗ ಇಲ್ಲ ಯಾಕಂದ್ರೆ ನಮ್ಗೆ ನಮ್ಮನೇನೆ ಸ್ವಲ್ಪ ಇದೆ. ಅದೂ ಬೇರೆ ನಮ್ಮನೇಲಿ 12 ಜನ ಇದ್ದೀವಿ ಎಲ್ಲರಿಗೂ ಶೌಚಾಲಯ ಅಂದ್ರೆ ತಮಾಷೆನಾ ಅಂತಾರೆ ನಮ್ಮಪ್ಪ ಅದರೆ ನನ್ನ ವಿಷಯಕ್ಕೆ ಬಂದ್ರ ಶೌಚಾಲಯ ಬೇಕೇ ಬೇಕು ಸಾರ್ ಯಾಕಂದ್ರೆ ನಮ್ಮ ಮನೇಲಿ ನಮ್ಮ ಅಮ್ಮ ಮತ್ತು ನಾವು ವಯಸ್ಸಿನ ಹುಡುಗಿಯರು ಆಚೆಗೆ ಹೋಗಿ ಬರೋದು ಅಷ್ಟೊಂದು ಬಳ್ಳೆದಲ್ಲ ಯಾಕಂದ್ರ ನಮ್ಮೂರಲ್ಲಿ, ಹಂದಿಗಳು ಸಾಕ್ತಾರೆ ಜಾಸ್ತಿ. ಜಾಸ್ತಿ ಅಂದ್ರೆ ಅಷ್ಟಿಷ್ಟಲ್ಲ ತುಂಬಾನೇ ಜಾಸ್ತಿ ಊರ ಸುತ್ತಾ ತಿರುಗಡುತ ಇರ್ತಾವೆ.

ನಾವು ಶೌಚ ಮಾಡಲು ಆಚೆಗೆ ಬಂದೆವೆಂದರೆ ಸಾಕು ಅವು ಅಲ್ಲಿಗೆ ಬಂದು ಬಿಡುತ್ತೇವೆ ಮತ್ತು ಇಂತ ಕಡೆ ಯಾರೋ ಕುಳಿತಿದಾರೆ ಅಂತ ಬೇರೆಯವರಿಗೆ ಅವೇ ತೋರಿಸಿಬಿಡ್ತಾವೆ. ಅದರಿಂದ ನಮಗೆ ತುಂಬಾ ಹಿಂಸೆನೇ ಆಗಿದೆ ಈ ಬಯಲು ಶೌಚಮಾಡುವುದು. ಅದರಲ್ಲೂ ಮತ್ತೊಂದಂದ್ರೆ ನಮ್ಮೂರಲ್ಲಿ ಯುವಕರು ಹೆಚ್ಚು ಅವರು ಯಾವಾಗಲೂ ಊರಿನಿಂದಾ ಆಚೆಗೆ ಬಂದು ನಿಲ್ಲೋದು ಬಾಡಿಕೆ ನಾವು ಶೌಚಕ್ಕೆ ಹೋಗಬೇಕಾದರೆ ಅವರು ನಮ್ಮನ್ನು ದಿಟ್ಟಿಸಿ ನೋಡುವುದು ಮತ್ತು ನಾವು ಎಲ್ಲಿ ಕೂತ್ಕೋಳ್ತಿವಿ ಅಂತ ನೋಡ್ತಾ ಇರ್ತಾರೆ ಅದಂತೂ ತುಂಬಾ ಹಿಂಸೆಯಾಗಿದೆ.

ನಾನಂತೂ ತುಂಬಾನೇ ಬೈದಿದ್ದೀನಿ ಅವರ್ನ ಮತ್ತು ಬಂದು ನಮ್ಮಣ್ಣಂಗೆ ಹೇಳಿದ್ದೀನಿ. ನಮ್ಮ ಮನೇಲಿ ಅವರನ್ನ ಬಡಿಯೋಕೇ ಬೇಕಾದರೆ ಹೋಗ್ತಾರೆ ಆದ್ರೆ ನಾವಂದ ಹಾಗೆ ಶೌಚಾಲಯ ಮಾತ್ರ ಕಟ್ಟೋಕೆ ಹೋಗುದಿಲ್ಲ ನವೇನ್ ಮಾಡ್ಲಿ ಸಾರ್. ಅದರಲ್ಲೂ, ನಮಗಂತೂ ಯಾಕಪ್ಪಾ ಬಂತು ಈ ಸುಮ್ನೆ ಜಗಳಗಳು ಅಂತ ಕೆಲವು ಸಲ ಈ ತರ ಯಾರಾದ್ರು ಚುಡಾಯಿಸಿದ್ರು ಕೂಡ ಸುಮ್ನೆ ಬರ್‍ತೀವಿ. ಅವರು ಯಾವ ರೀತಿ ಚುಡಾಯಿಸ್ತಾರೆ ಅಂದ್ರೆ ಮೊಬೈಲ್‌ನಲ್ಲಿ ಬ್ಯಾಟರಿ ಆನ್ ಮಾಡಿ ನಾವು ಕೂತಿರೋ ಕಡೆ ಬರೋದು ಮತ್ತು ನಾವೋಗೋ ಟೈಂ ನಲ್ಲಿ ಕೆಟ್ಟ ಕೆಟ್ಟ ಹಾಡುಗಳನ್ನು ಕೇಳೋದು ಜೋರಾಗಿ ಸೌಂಡ್ ಇಟ್ಟು ಎಲ್ಲರೂ ಜೋರಾಗಿ ನಗೋದು ಮತ್ತು ನಮ್ಮ ಹೆಸರಿಟ್ಟು ಜೋರಾಗಿ ಕರೆಯೋದು. ಇದೆಲ್ಲಾ ಕೇಳ್ತಿದ್ರೆ ತುಂಬಾ ಸಿಟ್ಟು ಬರುತ್ತೆ ಆದ್ರೆ ನಮ್ಮಿಂದ ಯಾಕೆ ಸುಮ್ನೆ ಜಗಳಗಳು ಅಂತ ಅನಿಸುತ್ತೆ ಸಾರ್. ನಾನು ಎಷ್ಟೋ ಬಾರಿ ನಮ್ಮನೇಲಿ ಹೇಳಿದ್ದೆ ನಮ್ಮಪ್ಪನಿಗೆ ಮತ್ತು ನಮ್ಮನೆಯೋರಿಗೆ ಒಂದು ಶೌಚಾಲಯ ಕಟ್ಟಿಸಿ ಕೊಡ್ರಿ ಅಂತ.

ಆದ್ರೆ ಅದಕ್ಕೆ ಶೌಚಾಲಯ ಮನೆ ಹತ್ರ ಇರಬಾರದು ಮತ್ತು ಅದು ಮನೆ ಹತ್ರ ಇದ್ರೆ ಅನಿಷ್ಟ ಅದರಲ್ಲೂ ಎಲ್ಲಾ ಮಹಿಳೆಯರೂ ಉಪಯೋಗಿಸೋದಕ್ಕೆ ಆಗೋಲ್ಲಾ, ಮತ್ತೆ ನೀರೇನು ಕಡಿಮೆ ಬೇಕಾ ಅದಕ್ಕೆ ಮೊದಲೇ ಮ್ಮನೇ ತುಂಬಾ ಚಿಕ್ಕದಾಗಿದೆ ಅದನ್ನು ಕಟ್ಟಬೇಕಂದ್ರೆ ಇನ್ನೊಂದು ಮೂಲೆ ಒಡಿಬೇಕು ಅದು ಅವಸರವೇ ಎಂದು ಬೈಯುತ್ತಾರೆ ಸಾರ್. ಈಗ್ಲೂ ಕೂಡ ನಾವು ಆಚೆ ಕಡೆ ಹೋಗ್ತೀದ್ದೀವಿ ಸಾರ್ ದೊಡ್ಡವರಿಗಾದ್ರೆ ಎಂಗೋ ನಡೀತೈತೆ ಆದ್ರೆ ವಯಸ್ಸು ಹುಡುಗಿರು ನಮಗೆ ಮುಜುಗರ ಆಗುತ್ತೆ ಸಾರ್ ಯಾರನ್ನಾ ನೋಡ್ತಾರೆನೋ ಮತ್ತು ಯಾವ ಕಡೆ ಹೋಗಬೇಕು ಮತ್ತು ಯಾವ ಟೈಂನಲ್ಲಿ ಒಗ್ಬೇಕು ಅಂತ ಕಡವರಿಸುತ್ತೀವಿ ಸಾರ್. ಡೇ ಟೈಂನಲ್ಲೇನಾದ್ರು ಬಂದ್ರ ಸಾರ್ ನಮ್ಮ ಸ್ಥಿತಿ ಬೇಡಾ ಸಾರ್ ಎಷ್ಟೋ ಬಾರಿ ಕಳ್ಳಿ ಹಿಂದೆ, ಜಾಲಿ ಪೊದೆಯಲ್ಲಿ, ಗಿಡಗಳ ಹಿಂದೆ ಕುಳಿತು ಬಂದಿದ್ದೀವಿ ಸಾರ್ ವೇಳೆ ಯಾರಾದ್ರ ನೋಡಿದ್ರೆ ಅಥವಾ ಏನಾದ್ರು ಮಾಡಿದ್ರೆ ಅದನ್ನ ಬೇರೆಯವರತ್ರ ಹೇಳಿದ್ರೆ ಇವಳು ಕೆಟ್ಟೋಗಿರೋಳು ಅಂತ ಸೂಳೆ ಪಟ್ಟ ಕಟ್ಟಿಬಿಡುತ್ತಾರೆ. ಅಥವಾ ಇನ್ಯಾರು ಮದುವೆ ಮಾಡಿಕೊಳ್ಳೊದಕ್ಕೆ ಮುಂದೆ ಬರಲ್ಲಾ ಸಾರ್ ನಾವೇನ್ ಸಾರ್ ಮಾಡೋದು ಮತ್ತು ನಾವೆಲ್ಲಿ ಸಾರ್ ಹೇಳಿಕೊಳ್ಳೋದು.

ಇವೆಲ್ಲಾ ನೆನಸಿಕೊಂಡ್ರೆ ತುಂಬಾ ದುಃಖ ಆಗುತ್ತೆ ಸಾರ್ ನಮ್ಮ ಕಷ್ಟ ಯಾರೂ ಅರ್ಥ ಮಾಡಿಕೊಳ್ಳೋದಿಲ್ಲಾ ಸಾರ್ ಒಂದೊಂದು ಬಾರಿ ಯಾಕಪ್ಪಾ ಈ ಜೀವನ ಅನ್ನಿಸುತ್ತೆ ಸಾರ್ ಅದರಲ್ಲೂ ಹೆಣ್ಣಾಗಿ ಯಾಕಾಪ್ಪ ಹುಟ್ಟಿಸಿದ್ದೀಯಾ ಅಂತ ಅನ್ಸುತ್ತೆ. ಆಚೆ ನೋಡಿದ್ರೆ ಈ ಟಾರ್ಚರು ಮನೇಲಿ ನೋಡಿದ್ರೆ ಕೇಳೋದಿಲ್ಲಾ ಒಂದು ವೇಳೆ ಈಗಾಯ್ತು ಅಂತ ಹೇಳಿದ್ರೆ ಗಲಾಟೆಗಳು ವಿಷಯ ದೊಡ ದಾಗೋದು ಜಾನ ಮಾರ್ಯಾದೆ ಹೋಗೋದು. ನಮ್ಮಿಂದ ಯಾಕಪ್ಪ ಈ ಜಗಳಗಳು ಅಂತ ಡೈಲೀ ಮಾನಸಿಕ ಹಿಂಸೆ ಅನುಭವಿಸ್ತಾ ಇದೀನಿ ಸಾರ್ ಅದರಲ್ಲೂ, ಈ ಘಟನೆಗಳು ಬೇರೆ ಅಲ್ಲಿ ಅಂಗಾಯ್ತುಂತೆ ಇಲ್ಲಿ ಇಂಗಾಯ್ತಂತೆ ಅಂತ ಅದೊಂದು ಭಯ ಹಗಲೊತ್ತಲಿನಲ್ಲಿ ಕಾಲೇಜಿನಲ್ಲಿರ್ತೀವಿ ಓಕೆ ಆದರೆ ಬೆಳಿಗ್ಗೆ ಶೌಚಾಕ್ಕೆ ಏನನ್ನಾ ಬಂದ್ರೆ ಹೇಳತೀರದ ಹಿಂಸೆ ಅನುಭವಿಸ್ತಾ ಇರ್ತೀವಿ ಸಾರ್. ಈ ಸಮಸ್ಯೆಗೆ ಪರಿಹಾರ ಸೂಕ್ತ ಶೌಚಲಯ ಅಂತ ಗೊತ್ತಿದ್ರು ನಮ್ಮ ಮನೆಯವರನ್ನು ಒಪ್ಪಿಸೋಕೆ ನನ್ನಿಂದ ಆಗ್ತಾ ಇಲ್ಲಾ ಸಾರ್

ಏನ್ಮಾಡ್ ಬೇಕೋ ಗೊತ್ತಿಲ್ಲ.

### ಹದಿಹರೆಯದವರೊಂದಿಗಿನ ಸಂದರ್ಶನದ ಸಾರಾಂಶ :

**ಹೆಸರು : ಲಕ್ಷ್ಮೀದೇವಿ**

ನಾನು ಪ್ರಥಮ ಪಿ.ಯು.ಸಿ. ಮುಗಿಸಿರುತ್ತೇನೆ. ಮತ್ತು 'ದ್ವಿತಿಯ ಪಿಯುಸಿಗೆ' ಹೋಗುತ್ತಿದ್ದೇನೆ. "ನಾನು ಹಳ್ಳಿ ಹುಡುಗಿ ಮತ್ತು ನಮ್ಮ ಮನೆಯಲ್ಲಿ ಶೌಚಾಲಯ ಇಲ್ಲ ನಾವು ಈಗಲೂ ಸಹ ಆಚೆಗೆ (ಬಯಲು) ಶೌಚಾಕ್ಕೆ ಹೋಗುತ್ತಿದ್ದೇವೆ. ಈ ರೀತಿ ಹೋಗುವುದನ್ನು ಸಮಸ್ಯೆ ಎಂದು ಮಹಿಳೆಯರು ಮಾತ್ರ ಅನ್ನುಕ್ಕಿದ್ದಾರೆ ಗಂಡಸರು ಅಲ್ಲಾ. ಯಾಕಂತ ಅವರಿಗೆ ಮೊದಲಿಂದಲೂ ವಾಡಿಕೆ ಇರುತ್ತದೆ. ನಾವು ಕೂಡ ಮೊದಲಿಂದ್ಲೂ ಬಯಲಿಗೆ ಹೊಗ್ತಿದ್ವಿ ಆದ್ರೆ ಈಗ ಈ ವಯಸ್ಸಲ್ಲಿ ಮಾತ್ರ ಯಾಕೋ ಅದು ತುಂಬಾ ಹಿಂಸೆ ಆಗ್ತಿದೆ ಮತ್ತು ಭಯ ಕೂಡ ಆಗ್ತಿದೆ.

ಭಯ ಅಂದ್ರೆ ನಾವು ಹುಡುಗೀರು ತಿಂಗಳಲ್ಲಿ "ಮುಟ್ಟು" ಆಗ್ತೀವಲ್ಲಾ ಅಗಂತೂ ತುಂಬಾ ತೀವ್ರರೀತಿಯ ಸಮಸ್ಯೆ ಸಾರ್ ಯಾಕಂದ್ರೆ ಮನೆ ಹತ್ರ ಆದ್ರೆ ಏನೇ ಆದ್ರೂ ಅಮ್ಮನ ಬಳಿ ಅಥವಾ ಬೇರೆ ಹೆಂಗಸರ ಹತ್ರ ಹೇಳ್ಕೋಬಹುದು ಆದ್ರೆ ಬಯಲಿಗೆ ಹೋದ್ರ ಅಲ್ಲಿ ಯಾರೂ ಹೆಂಗಸರು ಇರಲ್ಲ ಮತ್ತೆ ಗಂಡಸರ ಸುತ್ತಲೂ ಇರ್ತಾರೆ ಅವರ ಭಯ ಬೇರೆ ಮತ್ತು ಈ ಮುಟ್ಟು ಅನ್ನೋದು ತುಂಬಾ ಹಿಂಸೆ ಕೊಡುತ್ತೆ ಮತ್ತು ಒಂದೇ ಸ್ಥಳದಲ್ಲಿ ಸುಮಾರು 'ಅರ್ಧ ತಾಸಿಗೂ' ಹೆಚ್ಚು ಕಾಲ ಕುಳಿತುಕೊಳ್ಳಬೇಕಾಗುತ್ತದೆ. ಬಯಲಲ್ಲಿ ಒಂದು ನಿಮಿಷ ಕೂಡೋದೆ ಹೆಚ್ಚು ಇನ್ನು ಅರ್ಧ ತಾಸು ಅಂದ್ರೆ ಯಾರಾದ್ರು ಆ ದಾರೀಲಿ ಬರ್ತಾರೆ ಮತ್ತು ನೋಡ್ತಾರೆ ಅವಮಾನ ಆಗುತ್ತೆ ಸಾರ್

ಅದಕ್ಕೆ ಇತ್ತಿಚೆಗೆ ಯಾಕೋ ಅದು ನನಗೆ ಸಮಸ್ಯೆ ಅನ್ನುತ್ತಾ ಇದೆ. ಅಲ್ಲದೆ ಬಯಲು ಶೌಚಾ ಮಾಡಲು ಕೂಡ ಭಯ ಆಗುತ್ತೆ ಯಾಕಂದ್ರೆ ನಾವು 'ಕೆಳಜಾತಿಯವರು ಸಾರ್ (ಲಂಬಾಣಿ) ಈ ಮೇಲ್ಜಾತಿ ಯ ಗಂಡಸರು ಮತ್ತು ಹುಡುಗರು ನಮ್ಮ ಕೇರಿಯ ಹುಡುಗಿಯರನ್ನು ನೋಡಿದ್ರೆ ಸಾಕು ಚುಡಾಯಿಸ್ತಾರೆ, ರೇಗಿಸ್ತಾರೆ ಅದರಿಂದ ನಮ್ಗ ಆಚೆಕಡೆ ಶೌಚಕ್ಕೆ ಹೋಗಬೇಕಂದ್ರೆ ಭಯ ಅದರಲ್ಲೂ ನಮ್ಮ ಮನೇಲಿ ನಮ್ಮಪ್ಪ ಮತ್ತು ನಮ್ಮಣ್ಣ ಅವರು ಕೆಲಸ ಮಾಡೋದು ಅವರ ಮನೆಗಳಲ್ಲಿ ಅದ್ದರಿಂದ ಏನಾದ್ರು ಸುಮ್ನೆ ಸಹಿಸಿಕೊಂಡು ಹೋಗ್ಬೇಕು. ಒಂದು ದಿನ ನನಗೆ ಹಗಲಲ್ಲಿ ತಿಂಗಳು ಮುಟ್ಟು ಆಯ್ತು ಸಾರ್ ನನಗೆ ವಿಪರೀತ ಭಯ ಯಾಕಂದ್ರೆ ನಾನು ಆಗ ಆಚೆಗೆ ಹೋಗಿದ್ದ ಮತ್ತು ಸುತ್ತಲೂ ಮೇಲ್ಜಾತಿಯವರ ತೋಟಗಳು ಅದರಲ್ಲಿ ಕೆಲಸಮಾಡ್ತಿದಾರೆ ಗಂಡಸರು ಮತ್ತು ಅದೇ ಹೋಗಿ ಬರೋದಾರಿ ನಾನು ಅಲ್ಲೆ ಪಕ್ಕದ ಜಾಲಿಯ ಹಿಂದೆ ಕುಳಿತಿದ್ದೀನಿ. ನನಗೆ ವಿಪರೀತ ಹೊಟ್ಟೆನೋವು ಮತ್ತು ಭಯ ಒಂದು ಕ್ಷಣ ನಾನು ಸತ್ತೇ ಹೋಗ್ತೇನಂತ ಅನ್ಸಿತ್ತು. ಯಾಕಂದರೆ ಆ ಟೈಂನಲ್ಲಿ ಹೊಟ್ಟೆನೋವು ಬರೋದು ಸಹಜನಂತೆ ನನ್ಗೆ ನಮ್ಮಮ್ಮ ಹೇಳಿದ್ರು. ಆದ್ರ ಆ ಸಮಯದಲ್ಲಿ ನನ್ಗೆ ದಿಕ್ಕು ತೋಚಲಿಲ್ಲ ಹಿಂದೆ ನೋಡಿದ್ರೆ ಕುರಿ ಕಾಯೋರು ಗಂಡಸರು ಅದೇ ದಾರಿಯಲ್ಲಿ ಪರಿಸ್ಥಿತಿ ಹೇಳೋದಿಕ್ಕಾಗಲ್ಲಾ ಎದ್ದು ನಿಂತುಕೊಳ್ಳೊಕೆ ಆಗೊಲ್ಲ ಯಾಕಂದ್ರೆ ಹೊಟ್ಟೆನೋವು ಕುತ್ಕೊಂಡಿದ್ರ ಅವರು ನೋಡ್ತಾರೆ ಏನ್ಮಾಡ್ಬೇಕೋ ಗೊತ್ತಿಲ್ಲಾ ನಿಜವಾಗ್ಲೂ ಅಲ್ಲೆ ಆ ಜಾಲಿಯ ಪೊದೆಯಲ್ಲಿ ಮಲಗಿಬಿಟ್ಟೆ ಸಾಕು 10 ನಿಮಿಷ ಆ ಗಂಡಸರು ಹೋಗೋವರೆಗೂ ಆಮೇಲೆ ಹೊಟ್ಟೆನೋವು ನಿಲ್ಲೋವರ್ಗೂ ಏನ್ಮಾಡ್ಬೇಕೋ ಗೊತಾಗ್ಲಿಲ್ಲ 15 ನಿಮಿಷ ಆದ್ಮೇಲೆ ನಿಧಾನವಾಗಿ ಎದ್ದು ಮನೆಗೆ ಬಂದಿದ್ದೀಇ ಸಾರ್.

ಆ ಘಟನೆ ಅಂದ್ರೆ ಈಗ್ಲೂ ಮೈ ಬೆವರುತ್ತೆ ಸಾರ್ ಯಾಕಂದ್ರೆ ಅದು ಆ ತರ ಇತ್ತು. ಈಗ್ಲೂ ಕೂಡ ಆಚೆ ಕಡೇನೇ ಹೋಗ್ತಿದೀನಿ ಸಾರ್ ಆದರೂ ಈಗ್ಲೂ ಕೂಡ ಅದೇ ಸಮಸ್ಯೆ ಈ ಗಂಡಸರಂತೂ ನಾವು ಬಯಲಲ್ಲಿದ್ದೀವಿ ಅಂತ ಗೊತ್ತಿದ್ರು ಕೂಡ ಅದೇ ಕಡೆ ಬರೋದು ಅವರು ಬಂದಾಗ ನಾವು ಎದ್ದು, ಕುಂತು ಅದೊಂದು ರೀತಿ ಹಿಂಸೆ ಸಾರ್. ಅರ್ಜೆಂಟಾದ್ರೆ ಅಂತು ಪ್ರಾಣ ಹೋದಂಗೆ ಆ ಟೈಂನಲ್ಲಿ ಅನೇಕ ಸಲ ಅವರು ನೋಡಿದ್ರು ಸರಿ ಒಬ್ಬ ಅಣ್ಣ, ತಮ್ಮ ಅಂತ ಅನ್ಕೊಂಡು ಕುಳಿತು ಎದ್ದು ಬಂದಿದ್ದೀವಿ ಸಾರ್, ಆದರೆ ಅವರಿಗೆ ಮಾತ್ರ ನಮ್ಮನ್ನ ಆ ಸ್ಥಿತಿಯಲ್ಲಿ ನೋಡಿದ್ರೆ ಏನೋ ತಮಾಷೆ ಮತ್ತು ಖುಷಿ ತರ. ಇನ್ನೊಂದು ಸಾರಿ ನಾವು ಸಿಕ್ಕಾಗ ನಮ್ಮ ಕಡೆ ನೋಡಿ ಪದೇ ಪದೇ ನಗೋದು ಮತ್ತು ಅಸಡ್ಡೆಯಾಗಿ ವರ್ತಿಸೋದು ಇವೆಲ್ಲಾ ಮಾಡ್ತಾರೆ ಸಾರ್.

ಅದರಲ್ಲೂ ನಮ್ಮೂರಲ್ಲಿ ಟಾಯ್ಲೇಟ್ ಗೆ ಬಯಲಿಗೆ ಹೋದಾಗ ಒಂದು ವೇಳೆ ಯಾರಾದ್ರು ಆ ದಾರಿಯಲ್ಲಿ ಹುಡಗರಿದ್ರೆ ನಾವೇನನ್ನಾ ಅದೇ ದಾರೀಲಿ ಬರ್ತಿದ್ರೆ ಮತ್ತು ಅದೇ ಕಡೆ ನಾವೋಗಿದ್ರೆ ಅದನ್ನು ಯಾರಾದ್ರು ನಮ್ಮ ಊರಿನವರು ಹೆಂಗಸರು, ಗಂಡಸರು ನೋಡಿದ್ರೆ ಸಾಕು ಅವರಿಬ್ಬರ ಮದ್ಯೆ ಏನೋ ನಡೀತೈತೆ ಇಲ್ಲಾಂದ್ರೆ ಯಾಕೆ ಅವಳು ಆಕಡೆ ಮಾತ್ರ ಹೋಗ್ತಿದ್ಲು ಮತ್ತು ಯಾಕೆ ಅಷ್ಟೊತ್ತಲ್ಲಿ ಬಂದ್ಲು. ಅಂತ ಕೆಟ್ಟದಾಗಿ ತಿಂಕ್ ಮಾಡ್ತಾರೆ, ಮತ್ತು ಇದೇನನ್ನ ನಮ್ಮ ಮನೆಯವರ ಕಿವಿಗೆ ಬಿದ್ರೆ ಇನ್ನಷ್ಟೆ ಸಮಸ್ಯೆ ತುಂಬಾ ಗಂಭೀರವಾಗುತ್ತೆ ಅಂತ ಡೈಲಿ ಭಯದಿಂದ ಹೋಗಿ ಬರ್ಬೇಕು ಸಾರ್. ಒಂದೊಂದು ಟೈಂನಲ್ಲಿ ಅದರಲ್ಲೂ ರಾತ್ರಿಯಲ್ಲಿ ನೀರನ್ನೇ ಕುಡಿಯಲ್ಲಾ ಒಂದು ವೇಳೆ ಕುಡಿದ್ರೆ ಬಯಲಿಗೆ ಹೋಗ್ಬೇಕು ಆಗ ಮತ್ತೆ ಪ್ರಾಬ್ಲಮ್ ಯಾಕಪ್ಪ ಬೇಕಿತ್ತು ಈ ಹಿಂಸೆ ಅಂತ ಅನ್ಸುತ್ತೆ ಸಾರ್. ಒಟ್ಟಾರೆ ಹೇಳೊದಾದ್ರೆ ಬಯಲು ವಿಸರ್ಜನೆ ಒಂದು ರೀತಿಯ ಮಾನಸಿಕ ಸಮಸ್ಯೆಯಲ್ಲ, ಮಾನಸಿಕ ಹಿಂಸೆ ಸಾರ್ ಅದನ್ನು ಯಾರ ಹತ್ರ ಹೇಳೋಕು ನಾಚಿಕೆ ಮತ್ತು ಭಯ ಆದರೆ ಸಮಸ್ಯೆಂತೂ ದಿನೇ ದಿನೇ ಹೆಚ್ಚು ಆಗ್ತಿದೆ. ಯಾವಾಗನ್ನಾ ಮೋಷನ್ ಆದರೆ ಅಂತೂ ಏನ್ಮಾಡ್ಬೇಕೋ ಅಂತ ದೊಡ್ಡ ಭಯ ಮತ್ತು ಚಿಂತೆ ಆಗಿರುತ್ತೆ ಸಾರ್.

## ಹದಿಹರೆಯದ ವಯಸ್ಸಿನವರೊಂದಿಗಿನ ಸಂದರ್ಶನದ ಸಾರಾಂಶ :

**ಹೆಸರು : ಅರುಣಾ, ಬಸವನದುರ್ಗಾ.**

ನಾನು ಈಗ ಹತ್ತನೇ (10) ತರಗತಿಯಲ್ಲಿ ಒದುತ್ತಿದ್ದು ಈಗ ಅದನ್ನು ಬಿಟ್ಟಿದ್ದೇನೆ ಮತ್ತು 'ಸಖಿ'ಯೊಂದಿಗೆ ಗುರ್ತಿಸಿಕೊಂಡು (ಪಿ.ಯು.ಸಿ)ಗೆ ಕಟ್ಟಿದ್ದೇನೆ. ನಮ್ಮದು ಬಸವನದುರ್ಗ ಎಂಬ ಕುಗ್ರಾಮ ಈ ನಮ್ಮ ಹಳ್ಳಿಲಿ ಶೌಚಾಲಯ ಇಲ್ಲ ಸಾರ್. ನಾವೆಲ್ಲ ಬಯಲಿಗೆ ಹೋಗ್ತಿವಿ ಮತ್ತು ಯಾರ ಮನೇಲೂ ಶೌಚಾಲಯ ಇಲ್ಲ ಯಾಕಂದ್ರೆ ಅದನ್ನು ಯಾರು ಸೀರಿಯಸ್ ಆಗಿ ತಗೊಂಡಿಲ್ಲಾ ಅದರಲ್ಲೂ ಯಾಕಂದ್ರೆ. ಎಲ್ಲರೂ ಕೂಲಿ ಮಾಡಿ ತಿನ್ನೋರು ನಮ್ಮ ಹತ್ರ ಅಷ್ಟೊಂದು ದುಡ್ಡಿಲ್ಲಾ ಮತ್ತು ಅದಕ್ಕಾಗಿ 45 ದಿನ ಕಳೆದ್ರ ನಮ್ಮ ಜೀವನ ಹೆಂಗೆ ಅಂತ ಯೋಚಿಸ್ತಾರೆ ಸಾರ್, ನಮ್ಮನೇಲೂ ಶೌಚಾಲಯ ಇಲ್ಲ ನಾವು ನಾನು ಕೂಡ ಬಯಲಿಗೆ ಹೋಗ್ತಿಇ ಸಾರ್. ನಾನು ಬೆಳಿಗ್ಗೆ 5 ಗಂಟೆ ಒಳಗೆ ಮತ್ತು ರಾತ್ರಿ ಮಾತ್ರ ಹೋಗ್ತಿನಿ ಸಾರ್ ದಿನಪೂರ್ತಿ ನಾನು 'ಸಖಿ' ಸಂಸ್ಥೆಯಲ್ಲಿ ಕೆಲಸ ಮಾಡ್ತಿರ್ತಿನಿ ಸಾರ್.

ಬೆಳಿಗ್ಗೆ ಮುಂಜಾನೆ ಹೊತ್ತಲ್ಲಿ ನಾನು ಬಯಲಿಗೆ ಹೋಗ್ತೀನಿ ಸಾರ್ ಆ ಸಮಯದಲ್ಲಿ ಭಯ ಆಗುತ್ತೆ ಸಾರ್ ಯಾಕಂದ್ರೆ ಕತ್ತಲು ಇರುತ್ತೆ ಮತ್ತು ದಾರಿಯಲ್ಲಿ ಹೋಗಬೇಕಾದರೆಭಯ ಹಾವು-ಚೇಳು ಕೋತಿಗಳು, ಬೀದಿ ನಾಯಿಗಳು ಎಲ್ಲಿ ಬಂದು ಬಿಡುತ್ತೋ ಅಂತ ಅದರಲ್ಲೂ ಈ ಗಂಡಸರು ಬೇರೆ ಅದೇ ಟೈಂನಲ್ಲಿ ಕುಳಿತಿರ್ತಾರೆ ಸಾರ್. ನಾವೋಬ್ರು ಕೂಡ ಎದ್ದೇಳಲ್ಲಾ ಅವ್ರು ಹಂಗೆ ಕೂತಿರ್ತಾರೆ ನಮ್ಗೆ ಬೇಜಾರಾಗುತ್ತೆ ಸಾರ್ ಆ ಕಡೆ ಹೋಗೋಕೆ ಆದ್ರೂ ಹೋಗ್ಬೇಕು ಯಾಕಂದ್ರ ಯಾವ ಕಡೆ ಹೋದ್ರು ಸುತ್ಲೂ ಗಂಡಸರಿರುತ್ತಾರೆ ಅಂತದ್ದರಲ್ಲಿ ನಾವೇನು ಮಾಡಲು ಸಾದ್ಯ. ಒಂದು ದಿ ಬೆಳಿಗ್ಗೆ ನಾನು ಮತ್ತು ನನ್ನ ಫ್ರೆಂಡ್ ಪಕ್ಕದ ಮನೆ ಹುಡುಗಿ ಹೋಗಿದ್ವಿ ಹೋಗಿ ನಾನು ಅವಳು ದೂರ ದೂರ ಕುಳಿತಿದ್ವಿ ಸಾರ್, ನಾವು ಕುಳಿತಿದ್ದ ಆ ಗಿಡದಲ್ಲಿ ಜೇನು ಕಟ್ಟಿತ್ತೇನೋ ನಮ್ಗೆ ಗೊತ್ತಿಲ್ಲಾ ನಾವು ಕುಳಿತಿದ್ದಾಗ ಆ ಗಿಡದ ಹತ್ತಿರ ಒಮ್ಮೆಲೆ ಆ ನೋಣಗಳು ಎದ್ದು ಬಿಟ್ಟವು ನನಗಂತು ತುಂಬಾ ಭಯ ಆಯಿತು ನಾವು ಒಡಿ ಬಂದೆವು ಅವು ಕೂಡ ನಮ್ಮನ್ನು ಟ್ಟಿಸಿಕೊಂಡು ಬಂದವು. ನಾವು ಹಾಗೆ ಒಡುತ್ತಾ ಓಡುತ್ತಾ ಊರ ಕಡೆ ಬಂದ್ವಿ ಆಗ ಸುಮಾರು

ಜನ ನಮ್ಮನ್ನು ನೋಡಿದ್ರು ಯಾಕಂತ ಒಬ್ಬ ಆಂಟಿ ಕೇಳಿದ್ರು ನಾವು ನಡೆದಿದ್ದೆಲ್ಲ ಹೇಳಿದ್ವಿ ಆದರೆ ಅಲ್ಲಿದ್ದ ಹಲವು ಜನ ಅದನ್ನು ನಂಬಲಿಲ್ಲ ಮತ್ತು ಏನೋ ನಡೆದಿದೆ ಅಲ್ಲಿ ಯಾಕಂದ್ರೆ ಇವರಿಬ್ಬರೂ ಹುಡುಗಿಯರು ಮತ್ತು ಈ ಬೆಳಿಗ್ಗೆ ಯಾಕೆ ಅವರು ಅಷ್ಟು ದುರ ಹೋಗಿದ್ರು ಅಂತ ಅನುಮಾನದಿಂದ ಮಾತಾಡೋಕೆ ಶುರು ಮಾಡಿದ್ರು ಅದಂತೂ ನನಗೆ ತುಂಬಾ ಬೇಸರ ಆಯ್ತು ಮತ್ತು ತುಂಬಾ ಜಿಗುಪ್ಸೆ ಆಯ್ತು, ಅವರು ಯಾವ ತರ ತಿಂಕ್ ಮಾಡಿದ್ರು ಅಂದ್ರೆ ನಮ್ಮನ್ನು ಯಾರೋ ಹುಡುಗರು ಅಟ್ಟಿಸಿಕೊಂಡು ಬಂದವ್ರೆ ಇವರ ಪ್ರಮೇಯ ಏನು ಇಲ್ಲದೆ ಅವರು ಯಾಕೆ ಆ ತರ ಬಂದಿರುತ್ತಾರೆ ಅಂತ ಕೆಟ್ಟದಾಗಿ ಆಲೋಚಿಸ್ತಾರೆ ಸಾರ್ ಅದಕ್ಕೆ ನನಗೆ ತುಂಬಾ ದುಃಖ ಆಯಿತು.

ಈ ತರ ಒಂದಲ್ಲಾ ಎರಡಲ್ಲಾ ಬೆಳಿಗ್ಗೆ ಹೊತ್ತು ಹೋದರೆ ಬೀದಿನಾಯಿಗಳ ಕಾಟ ಅವು ಒಂದೆ ಸಮನೆ ಭೋಗಳುತ್ತಿರುತ್ತವೆ. ಮತ್ತು ರಾತ್ರಿ ಹೊತ್ತು ಹೋದ್ರೆ ಕತ್ತಲು ಭಯ ಆಗುತ್ತೆ ಮುಂದೆ ಏನಾಗುತ್ತೋ ಗೊತ್ತಿಲ್ಲಾ ತುಂಬಾ ಹಿಂಸೆನೇ ಅನುಭವಿಸ್ತಿದ್ದೀವಿ ಸಾರ್. ಅದರಲ್ಲೂ ನಮ್ಮ ಹೆಣ್ಣು ಮಕ್ಕಳ ಸಮಸ್ಯೆಗಳಂತೂ ಯಾರ ಹತ್ರ ಕೂಡ ಹೇಳ್ಕೋಳಕ್ಕೆ ಆಗಲ್ಲಾ ಯಾಕಂದ್ರೆ ಅವು ನಮ್ಮ ಆಂತರಂಗಿದ ವಿಷಯಗಳು ಯಾವಾಗ ಅರ್ಜೆಂಟಾಗುತ್ತೋ ಗೊತ್ತಿಲ್ಲಾ, ಉದಾ: ಗಂಡಸರಾದ್ರೆ ಎಲ್ಲೋ ಒಂದು ಕಡೆ ಕುಂತು ಬರ್ತಾರೆ ಆದ್ರೆ ನಾವು ಎಲ್ಲಿ ಹೋಗ್ಬೇಕು ಯಾವ ಕಡೆ ಹೋಗ್ಬೇಕು ಅಲ್ಲಿ ಯಾರಿದಾರೆ, ಇಲ್ಲಿ ಯಾರಿದಾರೆ ಅಂತ 10–15 ಬಾರಿ ನೋಡಬೇಕು. ಒಂದು ವೇಳೆ ಹೋದ್ರು ಕೂಡ ನೆಮ್ಮದಿ ಇರೋದಿಲ್ಲಾ ಯಾಕಂದ್ರೆ ಮುಗಿಸಿ ಬರ್ತಾ ಇರ್ಬೇಕಾದ್ರೆ ಯಾರನ್ನಾ ನೋಡ್ತಾರೇನೋ ಅಂತ ಆ ಚೊಂಬ್ನು ಬಚ್ಚಿಟ್ಟುಕೊಂಡು ಬರಬೇಕು ಅದಂತೂ ನಾಚಿಕೆಯಾಗುತ್ತೆ. ಅದೇ ನನ್ನ ಹುಡುಗರು ನೋಡಿದ್ರೆ ಸಾಕು ಅವರು ರೇಗಿಸೋ ರೀತಿನೇ ಬೇರೆ ಆಗಿರುತ್ತೇ ಸಾರ್ ಸಿಕ್ಕ ಸಿಕ್ಕವರಿಗೆಲ್ಲಾ ಹೇಳ್ತಾರೆ ಮತ್ತು ಅಡ್ಡ ಹೆಸರು ಇಟ್ಟು ಕರೀತಾರೆ ನನ್ನ ಫ್ರೆಂಡ್ ಆಯುಷಾ ಅಂತಾ ನಮ್ಮ ಮನೆ ಪಕ್ಕ ಹುಡುಗಿನಾ ಆ ಥರ ಚೊಂಬಿನೊಂದಿಗೆ ನೋಡಿ (ಚೊಂಬಿನ ಹುಡುಗಿ, ಚೊಂಬು ಪಾರ್ಟಿ) ಎಂದು ರೇಗಿಸ್ತಾಳೆ. ಇದನ್ನು ಮನೆಗೆ ಬಂದು ಹೇಳಿದ್ರೆ ನೀನ್ಯಾಕೆ ಆ ಕಡೆ ಹೋಗ್ತಿಯಾ ಬೇರೆ ಕಡೆ ಹೋಗು ಅಂತಾರೆ ಅದರೆ ಊರ ಸುತ್ತಾ ಯಾವ ಕಡೆ ಹೋದ್ರು ಇದೇ ಗತಿ ಅದು ಅವರಿಗೆ ಅರ್ಥ ಆಗೋಲ್ಲಾ. ರೀಸಂಟಾಗಿ ನನಗೆ ಒಂದು ದಿನದಲ್ಲಿ ಏನಾಯ್ತೋ ಗೊತ್ತಿಲ್ಲ ತುಂಬಾ ಸಹಿ ತಿನ್ಬಿಟ್ಟೆ ಅವತ್ತು ರಾತ್ರಿಯಿಂದ ಹಿಡಿದು ನೆಷ್ಟ್ ಡೇ ತುಂಬಾ ಮೋಷನ್

ನಮ್ಮನ್ನು ಬೇರೆ ಕೆಲಸಕ್ಕೆ ಹೋಗ್ತಿದ್ಲು ನಾನು ಮಾತ್ರ ಮನೆಗೆ ಇರ್ತಿದ್ದೆ ಒಂದು ಗಂಟೆಗೆ 10 ಸಲ ಹೋಗ್ಬೇಕಾಗಿತ್ತು ಅಗಂತೂ ತುಂಬಾನೆ ಹತ್ತಿದ್ದೀನಿ ಮತ್ತು ತುಂಬಾ ನೋವು ಅನುಭವಿಸಿದ್ದೀನಿ

ಆಚೆ ಕಡೆ ಎಷ್ಟು ಬಾರಿ ಅಂತ ಹೋಗ್ಲಿ ಒಂದು ವೇಳೆ ಹೋದ್ರೆ ಎಲ್ಲರೂ ಅನುಮಾನದಿಂದ ನೋಡ್ತಾರೆ ಯಾಕಿವಳು ಈ ತರ ಹೋಗ್ತಾ ಇದಾಳೆ ಅಂತ, ಗಂಡಸರಾದರೆ ದುರುಗುಟ್ಟು ನೋಡ್ತಾರೆ ಒಂದು ವೇಳೆ ಆ ಕಡೆ ಯಾರು ಇಲ್ಲಾ ಅಂದ್ರೆ ಡೈರೆಕ್ಟ್ ಆಗಿ ಬಂದು ಬಿಡ್ತಾರೆ ಸಾರ್. ಬಂದು ನೋಡ್ಬಿಟ್ಟು ಗೊತ್ತಿಲ್ಲದವರಂತೆ ಹೋಗ್ಬಿಡ್ತಾರೆ ಆಗಂತೂ ನಮಗೆ ಜೀವ ತೆಗೆದುಕೊಂಡಂತಾಗುತ್ತದೆ. ಮತ್ತು ನೆಕ್ಸ್ಟ್ ಟೈಂ ಅವರ ಮುಂದೆ ತಲೆ ಎತ್ತಿ ಒಡಾಡಲೂ ಭಯ ಆಗುತ್ತೆ ನಾಚಿಕೆ ಆಗುತ್ತೆ ಇದೆಲ್ಲಾ ನೋಡಿದ್ರೆ ನನಗಂತೂ ತುಂಬಾ ಹಿಂಸೆ ಅನ್ಸುತ್ತೆ ಸಾರ್ ಆದ್ರೂ ನಾವ್ ಹೇಳ್ಕೋಳಕ್ಕೆ ಆಗಲ್ಲಾ ಎಲ್ಲರ ಹತ್ರ.

## ಹದಿಹರೆಯದವರೊಂದಿಗಿನ ಸಂದರ್ಶನದ ಸಾರಾಂಶ

**ಹೆಸರು : ಶಭಾನಾ ಭಾನು (ಸ್ಲಂ  ಹೊಸಪೇಟೆ)**

ನಾನು 'ಸಖಿ'ಸಂಸ್ಥೆಯೊಂದಿಗೆ ಗುರ್ತಿಸಿಕೊಂಡಿದ್ದೇನೆ ಸರ್ ,ಆಗಾಗ ಬಂದು ಭಾಗವಹಿಸ್ತೀನಿ ಸಾರ್ ಆದ್ದರಿಂದ ನಂಗೆ ತುಂಬಾ ಅನುಕೂಲ ಆಗಿದೆ.ಸರ್. ಯಾಕಂದ್ರ ನಂಗೆ ಮನೆ ಕೂಡ ಇಲ್ಲಾ ಸಾರ್ ,ನೋಡಿನಮ್ಮಮನೆ ಎಲಾ ಪ್ಲಾಸ್ಟಿಕ್ ಶೀಟ್‌ಗಳನ್ನು ಬಳಸಿಕೊಂಡು ಹೆಂಗೋ ಅಂಗೆ ಮುಚ್ಚಿಕೊಂಡಿದ್ದೀವಿ.ಮಳೆಗಾಲದಲ್ಲಂತೂ ತುಂಬಾ ಕಷ್ಟ ಅಂಥದ್ದರಲ್ಲಿ ಶೌಚಾಲಯ ಅಂತ ಅಂದ್ರೆ ಎಲ್ಲಿಂದ ತರೋದುಸಾರ್. ಎಲ್ಲಿ ಕಟ್ಟಿಸ್ಕೋಳೋದು  ನಮ್ಗೆ ಜಾಗನೇ ಇಲ್ಲಾ ನೆಟ್ಟಗೆ ನಮಗ್ಗೆ ಕೂರೋಕೆ ಜಾಗ ಇಲ್ಲ, ಆ ಪರಿಸ್ಥಿತಿ ನಲಿ ಈ ಥರ ಅಂದ್ರೆ ತುಂಬಾ ಪ್ರಾಬ್ಲಮ್ ಸಾರ್.ನಾವೆಲ್ಲಾ ಇಲ್ಲಿ ಸಮುದಾಯ ಶೌಚಾಲಯಕ್ಕೆ ಹೋಗ್ತೀವಿ ಸಾರ್. ಅಲ್ಲೂಕೂಡ ಪ್ರಾಬ್ಲಮ್  ಸರ್ ಯಾಕಂದ್ರ  ಅದನ್ನು(12) ಗಂಟೆಗೆ ಕ್ಲೋಸ್ ಮಾಡ್ತಾರೆ ಸಾರ್ ಆಮೇಲೆ ನಾವೆಲ್ಲೀ ಸಾರ್ ಹೋಗೋದು ಆಚೆಗೆ ಕಡೆ ಅಂದ್ರೆ ಎಲ್ಲೆಲ್ಲೂ ಬಯಲು ಇಲ್ಲಾ ಸಾರ್.

ಅದು ಬೇರೆ ಆ ಸಮುದಾಯ ಶೌಚಾಲಯದ ತುಂಬಾ ದೂರ ಇದೆ ನಮ್ಮನೆಯಿಂದ ಅಲ್ಲಿಗೆ ಹೋಗ್ಬೇಕು ಅಂದ್ರೆ ಅದೇ ಕೆಲಸವಾಗಿ ಹೋಗಬೇಕು. ಒಂದೊಂದು ಸಲ ಮಧ್ಯಾಹ್ನದ ಹೊತ್ತಲ್ಲಿ ಅಂದ್ರೆ ತುಂಬಾ ಹಿಂಸೆ ಯಾಕೆಂದ್ರೆ ಆ ಶೌಚಾಲಯದಲ್ಲಿ ಹಣಕಟ್ಟಬೇಕು. ಒಂದೊಂದು ಸಲ ನಮ್ಮಮ್ಮ ಇರಲ್ಲೋ ಆಗೇನು ಮಡೋದುಆಗ ಆ ಶೌಚಾಲಯದ ಹಿಂದೆ ಇರೋ ಖಾಲಿ ಜಾಗದಲ್ಲಿ ಕೂತು ಬಂದಿದ್ದೀವಿ. ಸರ್. ಒಂದು ದಿನ ನಮ್ಮಮ್ಮ ಮನೆಗೆಲಸಕ್ಕೂ ಹೋಗಿದ್ದು ನಾನ್ ಮಾತ್ರ ಇದ್ದೀನಿ, ನಮ್ಮನೇಲಿ ಅದಕ್ಕು ನಮ್ಮನೆಗೆ ಡೋರ್ ಬೇರೆ ಇಲ್ಲಾ. ಎಲ್ಲನಾ ಆಚೆ ಕಡೆ ಹೋಗ್ಬೇಕು.ಆದ್ರೆ ಬಿಡೋದಕ್ಕೂ ಆಗಲ್ಲಾ ಮತ್ತೆ ತಗೋಳಕ್ಕೂ ಆಗೊಲ್ಲ.

ಆವತ್ತಂತೂ ಹೇಳಲಾರದ ಸ್ಥಿತಿನಿಂದೋಕಡೆಗೆ ಯಾರಿಗೋ ಹೇಳಿ ಸಮುದಾಯ ಸೌಛಾಲಯಕ್ಕೆ ಹೋದೆ. ಆದರೆ ನನ್ನದುರಾದೃಷ್ಟ ಸಾರ್ ಅದುಕ್ಲೋಸ್ ಆಗಿತ್ತು. ಆಗ ನಂಗೆ ಬೇರೆ ಅರ್ಜಂಟಾಗಿದೆ.ಆಗ ಅಲ್ಲೆ ಹಿಂದೆ ಹೋಗಿ ಕುಂತಿದ್ದೆ.ಅದೆಲ್ಲಿಂದ ಬಂದ್ವೋ ಗೊತ್ತಿಲ್ಲಾಹಂದಿಗಳು ಬಂದು ಬಿಟ್ಟು ನಂಗೆ ಎದ್ದೇಳೋಕ್ಕೆ ಹಾಗ್ತಿಲ್ಲಾ ಮತ್ತು ಅವು ನೋಡಿದ್ರೆ ಮೇಲೆ ಮೇಲೇನೆ ಬರ್ತಿವೆ. ನಂಗೆ ತುಂಬಾ ಬೇಸರ ಆಯ್ತು ಸಾಕು ಬೇಗ ಬೇಗ ಮುಗಿಸಿಕೊಂಡುಬರ್ತಾ ಇದೆ ಆಚೆ ಕಡೆ ಸ್ವಲ್ಪದೂರದಲ್ಲಿ ಒಂದು ಆಟೋ ನಿಂತ್ತು.ಅಲ್ಲಿ ಕೆಲವು ನಿಂತ್ರಿದ್ರು ಪೋಲಿ ಹುಡುಗರು ನಾನು ಹೋಗುವವರೆಗೆ ಸಾಕು ನನ್ನನ್ನೇ ದುರುಗುಟ್ಟಿಸಿ ನೋಡ್ತಾ ಇದ್ರು ಆದ್ರೂ ನಾನ್ ಮಾತ್ರ ತಲೆ ಬಗ್ಗಿಸಿಕೊಂಡು ಬಂದ್ಬಿಟ್ಟೆ ಸಾರ್. ಬಂದು ನಮ್ಮಮ್ಮಂಗೆ ಹೇಳಿ ಆಕೆ ನಾನೇನಮ್ಮ ಮಾಡ್ಲಿ ನೋಡುನಮ್ ಪರಿಸ್ಥಿತಿ ಅಂತ ಅಂದ್ಲುಅದಕ್ಕೆ ನಾನ್ ಸುಮ್ನೆ ಆಗ್ಬಿಟ್ಟೆ.

ಒಂದಂದ್ರೆ ಈ ಸಮುದಾಯ ಶೌಚಾಲಯದಲ್ಲಿ ಹಣ ಕಟ್ಟಬೇಕು. ಆದ್ರೆ ಪ್ರತಿದಿನ ಪ್ರತೀಟೈಂನಲ್ಲೂ ಎಲ್ಲಿಂದ ಅಂತ ಕಟ್ಟೋದು ಅದು ಬೇರೆ ಚಿಕ್ಕವರು ಕೂಡ ಅದಕ್ಕೆ ಹಿಂಸೆಯಾಗಿದೆ. ಸಾರ್. ಅದರಲ್ಲೂ ಟೈಂ ಟು ಟೈಂ ಓಪನ್ ಆಗಲ್ಲಾ ಆಗ ಜನ ಆಚೆಕಡೆ ಇಲ್ಲಾಂದ್ರೆ ಅದರಿಂದ ಹೋಗ್ತಿರ್ತಾರೆ. ಆಗ ಗಲೀಜು ತಾನೆ. ನಮಗಂತೂ ಶೌಚಾಲಯ ಕಟ್ಟಬೇಕು ಅಂತ ಇದೆ ಆದ್ರೆ ನಮಗ್ಗೆ ಜಾಗ ಇಲ್ಲಾ ಮತ್ತೆ ಹಣನೂ ಇಲ್ಲಾ ಎಲ್ಲಿ ಯಾವ ಥರ ಕಟ್ಟಬೇಕು ನಾವು ಸಾರ್.

ನೈಟ್ ಟೈಂನಲಿ ಬರಲ್ಲಾ ಸರ್,ಬಂದಿಲ್ಲ ಸಾರ್ ಯಾಕಂದ್ರೆ ನೈಟ್‌ನಲಿ ನೀರುತುಂಬಾ ಕುಡಿಯೋಲ್ಲಾ ಮತ್ತು ಊಟ ಕೂಡ ಅಷ್ಟಕಷ್ಟೆ.ನಮ್ಮಮ್ಮನೇ ಹೇಳ್ತಾರೆ ಸಾರ್ ನೀರ್ ಕುಡಿಬೇಡ ನೈಟಲ್ಲಿ ಮತ್ತೆ ಊಟ ಕೂಡ ಜಾಸ್ತಿ ತಿನಬೇಡ ಅಂತ. ಯಾಕಂದ್ರೆ ಒಂದು ಸಲ ಇಂಗೆ ನಂಗೆ ಮೋಷನ್ಸ್ ಆಗ್ಬಿಟ್ಟಿತ್ತು ಆಗ ಅವತ್ತು ನಾನು ನಮ್ಮಮ್ಮಂಗೆ ತುಂಬಾ ಕಷ್ಟಕೊಟ್ಟಿದ್ದೆ ಯಾಕಂದ್ರೆ 30 ಸಲ ಹೋಗಿದ್ದೀನಿ ಶೌಚಾಲಯಕ್ಕೆ ಅದರಿಂದ ಆಕೆ ನಂಗೆ ಆ ಥರ ಅಂತಿದ್ದು. ಅವರು ಹೇಳೋದು ನಿಜಾನೆ ಸ್ವಲ್ಪ ಕಡಿಮೆ ನೀರುಮತ್ತುಊಟ ಮಾಡಿದ್ರೆ ಈಸಮಸ್ಯೆ ಇರೋದಿಲ್ಲಾ ಅಲ್ವಾ ಅನ್ಸುತ್ತೆ. ಆದ್ರೆ ಅದೇನುನಾವ್ ಮಾಡೋ ಕೆಲಸಾನ ಸಾರ್. ಅದುಯಾವ ಟೈಂನಲ್ಲಿ ಬೇಕಾದ್ರುಬರುತ್ತೆ ಆದ್ರೆ ಅದನ್ನು ತಡ್ಕೋಳೋ ಶಕ್ತಿ ನಮಗಿಲ್ಲ.ಅದಕ್ಕೆ ನಾನೀಥರ ಮಾಡ್ತಿದ್ದೀನಿ.ಸಾರ್.ನಾನೇ ಅಲ್ಲಾ ಸಾರ್ ಈ ಓಣಿನಲ್ಲಿ ಜಾಸ್ತಿ ಹೆಣ್ಣುಮಕ್ಕಳುಇದೇ ಥರ ಮಾಡ್ತಿದ್ವಿ ಸಾರ್ ಯಾಕಂದ್ರೆ ಶೌಚಾಲಯ ಇಲ್ಲಾ.ಮತ್ತೆ ಇನ್ನೊಂದು ವಿಷಯ ನಮ್ಮ ಓಣಿಲಿ ಸುತ್ತಮುತ್ತಲಿನ ಜನ ತುಂಬಾ ಅನುಮಾನ ಸಾರ್ ನಾನೇನನ್ನ ದಿನಕ್ಕೆ ನಾಲ್ಕೈದು ಸಲ ಶೌಚಾಲಯಕ್ಕೆ ಹೋದ್ರೆ ಸಾಕು ಅದನ್ನು ಏನೇನೋ ಅನ್ಕೋತಾರೆ.

ಮತ್ತು ಎಷ್ಟೋ ಜನ ನನ್ನಮೇಲೆ ನಮ್ಮಂಗೆ ಹೇಳಿದಾರೆ ನಿಮ್ಮುಡುಗಿ ಯಾಕೆ ಹಗಲೆಲ್ಲಾ ಆ ಕಡೆ ,ಈಕಡೆ ಅಡ್ಡಾಡ್ತಿದ್ದಾಳೆ.ಮತ್ತು ಯಾಕೋ ಆ ಕಡೆ ಜಾಸ್ತಿ ಹೋಗ್ತಾ ಇರ್ತಾಳೆ. ಸ್ವಲ್ಪ ಕಂಟ್ರೋಲ್ ಮಾಡ್ಕೊಳ್ಳಿ ಅಂತ ಆದ್ರೆ ನಾವೋಗೂದು ಶೌಚಾಲಯಕ್ಕೆ ಮಾತ್ರ ಅದುಮಾತ್ರ ಯಾರ್‍ಗೂಗೊತ್ತಾಗೊಲ್ಲಾ ಸಾರ್. ಯಾಕಂದ್ರೆ ಅದನ್ನು ನಾವ್ ಅವರತ್ರ ಹೇಳೋಕಾಗೊಲ್ಲಾ, ನಮಗ್ಗೆ ಅದುನಾಚಿಕೆ ಮತ್ತು ಅವಮಾನ ಸಾರ್. ನನ್ನ ವಿಷಯಕ್ಕೆ ಬಂದ್ರೆ ನಾನ್ ಡೇ ನಲ್ಲಿ ಮಾತ್ರ ಹೋಗ್ತೀನಿ,ನೈಟ್‌ನಲ್ಲಿ ಹೋಗಲ್ಲಾ ಯಾಕಂದ್ರೆ ನಾನು ಆ ಥರ ಮಾಡ್ಕೊಂಡಿದ್ದೀನಿ. ನಾನುಊಟ ,ನೀರು ಜಾಸ್ತಿ ತಗೋಳಲ್ಲಾ ಅದರಿಂದ ನಂಗೆ ಸಮಸ್ಯೆ ಇಲ್ಲಾ ಆದ್ರೆ ಒಂದಂತೂ ನಿಜ ಈ ಶೌಚಾಲಯ ಇಲ್ಲೆ ಇರೋ ಸಮಸ್ಯೆಯಂತೂ ನಮ್ಮನ್ನ ಅದರಲ್ಲೂ ವಿಶೇಷವಾಗಿ ಹುಡುಗೀರನನ್ನ ತುಂಬಾ ಹಿಂಸೆಗೆ ನುಗ್ಗಿದೆ. ನಾವು ಹೇಳ್ಕೊಳ್ಳಕಾಗದೆ ನಮ್ಮನ್ನ ನಾವೇ ಹಿಂಸೆಗೆ ಒಳಗಾಣಿಸಿಕೊಯ್ದೀವಿ. ಸಾರ್. ಮನೆನಲ್ಲಿ ಹೇಳಿದ್ರೆ ಯಾರು ಇಲ್ದೆ ಇದ್ದಾಫ ಹೋಗು ಇಲ್ಲ ಊಟ. ನೀರು ತಗೋಬೇಡ ಅಷ್ಟೆ ಹೇಳ್ತಾರೆ. ಸಾರ್.

Disabled

## ಹದಿಹರೆಯದವರೊಂದಿಗಿನ ಸಂದರ್ಶನದ ಸಾರಾಂಶ

**ಹೆಸರು : ಜ್ಯೋತಿ ದ್ವಿತೀಯ ಪಿಯುಸಿ ನಾಗೇನಹಳ್ಳಿ.**

ನಾನು ದ್ವಿತೀಯ ಪಿ.ಯು.ಸಿ ಡ್ರಾಪ್ ಔಟ್ ಆಗಿದ್ದೀನಿ ಸಾರ್ ಯಾಕಂದ್ರೆ ವಿಕಲಚೇತನಗಳಾದ ನಾನುಮುಂದಿನ ವ್ಯಾಸಂಗಕ್ಕೆ ಹೋಗಲು ಕಷ್ಟ ಆಗ್ತಾ ಇತ್ತು ಸಾರ್. ಯಾಕಂದ್ರ ಬಸ್‌ನಲ್ಲಿ ಹೋಗ್ಬೇಕು. ಬರ್ಬೇಕು. ಅದಕ್ಕೆ ನಮ್ಮನೇಲಿ ಬೇಡ ಅಂದ್ರು ಆದ್ರಾ ನಾನೇನು ಸುಮ್ನೆ ಕೂರಲ್ಲ, ಸಾರ್ ನಾನೂ ಸಂಪಾದಿಸ್ತೀದ್ದೀನಿ, ಟೈಲರಿಂಗ್ ಕಲ್ತಿದ್ದೀನಿ,ಎಲ್ಲರಿಗೂ ಕಲಿಸ್ತಿದ್ದೀನಿ.ನಮ್ಮ ಮನೇಲಿ ಶೌಚಾಲಯಿತ್ತೀಚೆಗೆ ಕಟ್ಟಿಸಿದ್ವಿ ಸಾರ್ ಅದಕ್ಕಿಂತಾ ಮುಂಚೆ ನಾವೆಲ್ರೂ ಆಚೆಗೆ ಹೋಗ್ತಿದ್ವಿ ಸಾರ್ ಅದು ಸಮುದಾಯ ಶೌಚಾಲಯಕ್ಕೆ ಹೋಗ್ತಿದ್ವಿ ಮತ್ತು ಕೆಲವು ಸಲ ಬೇರೆ ಕಡೆಯಲ್ಲಿ ಕುಳಿತುಬರ್ತಿದ್ವಿ, ಬೇರೆ ಕಡೆ ಅಂದ್ರೆ ಎಲ್ಲನ್ನಾ ಪೊದೆ, ಗದ್ದೆನಲ್ಲಿಕೂತು ಬರ್ತಿದ್ವಿ.

ಆ ಸಂಧರ್ಭದಲ್ಲಿ ಸಮಸ್ಯೆ ಆಂದ್ರೆ ಎರಡು ತರ ಆಗ್ತಿತ್ತು. ಸಾರ್. ಒಂದು ನಮಗೆ ಟಾಯ್ಲೆಟ್ ಇಲ್ಲ ಅದಕ್ಕೆ ನಾವು ಬರಬೇಕಾದೀತು. ಮತ್ತು ಮನೆಯಿಂದ ದೂರ ಬರೋಕೆ ತುಂಬಾ ಕಷ್ಟ ಆಗ್ತಿತ್ತು.ಅದರಲ್ಲೂ ನಂಗೆ ನಾನೊಬ್ಬಳೇ ಬರ್ತದ್ದೆ.ಸ್ಟಿಕ್ ತಗೊಂಡು ಆದರೆ ಕೂರೂಕೆ ಮತ್ತು ಎದ್ದು ನಿಲ್ಲೋಕೆ ಕಷ್ಟ ಆಗ್ತಿತ್ತು. ಅಗಂತೂ ತುಂಬಾ ಕಷ್ಟ ಆಗಿತ್ತು. ಯಾಕಂದ್ರಾ ತುಂಬಾ ಬಿದ್ದಿದ್ದೀವಿ. ಸರ್.ಆಚೆ ಕಡೆ. ಯಾಕಂದ್ರೀ ಟಾಯ್ಲೆಟ್ ನಲ್ಲಿ ಕೂರೋಕೆಎಲ್ಲರಿಗೂ ಒಂದೇ ತರ ಇರತ್ತೆ. ಅದಕ್ಕೆ ನಾವು ವಿಕಲಚೇತನರು ಆತರ ಕೂರಕ್ಕೆ ಆಗಲ್ಲಾ ಮತ್ತು ಆರಾಮಾಗಿ ಎದ್ದು ನಿಲ್ಲೊಕಾಗಲ್ಲ.. ನಾನುಇ ಬೆಳಗ್ಗೆ ಮತ್ತು ಮಧ್ಯಾಹ್ನದ ಹೊತ್ತು ಹೋಗ್ತೀನಿ ಜಾಸ್ತಿ ಅಂದ್ರೆ ಮಧ್ಯಾಹ್ನದಲ್ಲಿ ಯಾರು ಜಾಸ್ತಿ ಅಡ್ಡಾಡಲ್ಲ ಮತ್ತು ಯಾರು ನೋಡಲ್ಲಾ..ಮುಂಜಾನೆ ಅದ್ರೆ ತುಂಬಾ ಜನ ನೋಡ್ತಾರೆ ಮತ್ತು ನಗ್ತಾರೆ ಸಾರ್. ನೈಟ್‌ನಲ್ಲಿ ಬಂದ್ರೆ ನಮ್ಮಮ್ಮನ್ನ ಕರಿತೀನಿ ಅದ್ರೆ ಅವರನ್ನು ಯಾಕೆ ಡಿಸ್ಟರ್ಬ್ ಮಾಡೋದು ಅಂತ ನಾನೊಬ್ಬಳೇ ಹೋಗ್ತೀನಿ. ಭಯ ಆಗುತ್ತೆ ಆದ್ರೆ ವಿಧಿಯಿಲ್ಲ ಏನು ಮಾಡೋದ ಸಾರ್ ಒಂದು ವೇಳೆ ಬಿದ್ದೋದ್ರೆ ಎದ್ದು ಬರ್ಬೇಕು. ಆ ಟೈಂನಲ್ಲಿ ನಂಗೇನು ಅನ್ಸುತ್ತೆ ಅಂದ್ರೆ ನನ್ನ ಮೇಲೆ ನಂಗೆ ಕೋಪ ಬರುತ್ತೆ. ಯಾರೇ ಮುಂಡಿ ಗಟ್ಟಿ (ಜೀವನ) ಸುತ್ತೋದ್ರೆ ಒಂದು ಚಿಂತೆಯಿಲ್ಲ ಅಂತ.

ನಮ್ಮನೇಯವ್ರ ನೈಟ್‌ನಲಿ ಎಬ್ಬಿಸಿದೆ ನಮ್ಮಕ್ಕೆ ಅಂತೂ ಬೈತಾರೆ ಮತ್ತು ನೊಂದುಕೊತಾರೆ ಅದಕ್ಕೆ ಯಾರಿಗೂ ನೋವು ಬೇಡ ಅಂತ ನಾನೊಬ್ಬಳೇ ಹೋಗ್ತೀವಿ.ಹೋದಾಗ ತುಂಬಾ ಸಮಸ್ಯೆಗಳಾಗಿವೆ. ಆದ್ರಾ ಅವಾವು ಹೇಳ್ಕೋಳಾಂಗಿಲ್ಲಾ ಸಾರ್ ಯಾಕಂದ್ರಾ ನಮ್ಮ ಕಷ್ಟ ನಮ್ಮ ಸಂಕಟ ನಮಗೆ ಗೊತ್ತು. ನೈಟ್‌ನಲ್ಲಿ ಎಬ್ಬಿಸಿದಾಗ "ಇದೇನೆ ನಿಂಗೆ ಸಮಯೇನೋ ಇಲ್ವಾ ಏನೀ ದರಿದ್ರ ಅಂತ" ಅಸಹ್ಯ ಪಡುತ್ತಾರೆ. ಆದ್ರೆ ನಾನೇನ್ನಾ ಗಂಡಾಗಿದ್ರೆ ಕೇಳಿದ್ನಾ ಮತ್ತುಅದರಲ್ಲೂ ಅಂಗವಿಕಲಳಾಗಿದಿದ್ರೆ ನಾನೇನನ್ನ ಕರಿತಿದ್ನಾ. ಸರ್. ಆದ್ರೆ ಅವರುಅರ್ಥಮಾಡ್ಕಳಾಲ್ಲ, ಮನೆಐಒರೆ ಅರ್ಥ ಮಾಡ್ಕೋಳಲ್ಲಾ ಂದ್ರೆ ಇನ್ನು ಊರಿನ ಜನ ಯಾವ ತರ ಸಾರ್. ಅದರಲ್ಲೂ ನಮ್ಮೊರಲ್ಲಿ ಪೋಲಿ ಹುಡುಗರಂತೂ ತುಂಬಾ ಚೇಷ್ಟೆ ಮಾಡ್ತಾರೆ. ನಾವರ್ ಕೂತಿದ್ದಾಗ ಕಲ್ಲಾಕೋದು ಮತ್ತುಸೀಟಿ ಹೊಡೆಯೋದು ನಮ್ಮೆಸರಿಟ್ಟು ಜೋರಾಗಿ ಕರೆಯೋದು ಮಾಡ್ತಾರೆ. ಸಾರ್.

ಆಗ ಸಮಯದಲ್ಲಿ ಅವರ ಮೇಲೆ ಸಿಟ್ಟು ಬರಲ್ಲಾಸಾರ್ ನಂಗೆ ಅವಮಾನ ಆಗುತ್ತೆ, ಮತ್ತೆ ಅವರ ಮುಂದೆ ಹೋದಾಗ ಬಂದಾಗ ನಾಚಿಕೆಯಾಗುತ್ತದೆ. ಯಾವರ ತರ ಅವರಿಗೆ ನಮ್ಮುಖ ತೋರಿಸೋದಂತ ಆದ್ರೆ ಅವರ್ಗೇನು ಆ ಥರ ಅನ್ಸಲ್ಲಾ ಅಲ್ದೇ ಇದೆಲ್ಲಾ ಮಾಮೂಲು ಅಂದಂಗೆ ಇರ್ತಾರೆ.ಅವ್ರು. ಒಂದಿನ ಸಾರ್ ನಾನು ಪಬ್ಲಿಕ್ ಶೌಚಾಲಯಕ್ಕೆ ಹೋದೆ ಹೋದಾಗ ಆ ಶೌಚಾಲಯದ ಮುಂದೆ ಕೆಲವು ಹುಡುಗರು ನಿಂತಿದ್ರು ನಾನುನೋಡ್ದೆ ಅವರು ನಾನು ಹೋಗ್ತಿದ್ದಾಗ ನನ್ನ ಫೋಟೋ ತಗೋಳೋದು. ಆಗ್ಲಿ ಅಂತ ನಾನು ನಾಚಿಕೆಯಿಂದಲೇ ಅವರ ಮುಂದೇನೆ ಒಳಗೆ ಹೋದೆ ನಾನು ಒಳಗೆ ಕುಳ್ತಿದ್ದೀನಿ ಸಾರ್. ಅದರ ಮೇಲಕ್ಕೆ (ಶೌಚಾಲಯ) ಮೇಲಕ್ಕೆ ಕಲ್ಲು ಎಸೆದ್ರು ಒಂದಲ್ಲ ಎರಡಲ್ಲಾ 10–15 ಕಲ್ಲಾ ಕುದ್ರು ನಂಗೆ ಭಯ ಆಯುತ ಅದೂ ಬೇರೆ ಅವು "ಶೀಟ್‌ಗಳು ' ತೂತು ಬಿದ್ದುಮೇಲೆ ಬಿಡ್ರಿ. ಅಂತ ನೆಮ್ಮದಿ ಇಲ್ದೆ ಬೇಗ ಬೇಗ ಮುಗಿಸಿ ಆಚೆ ಬಂದೆ ಬಂದಾಗ ಅವರ ಅಲ್ಲೆ ನಿಂತ್ರಿದ್ರು ಯಾಕೆ ಕಲ್ಲಾಕಿದ್ದು ಅಂತ ಕೇಳ್ದೆ ಅದಕ್ಕೆ ಅವರು ನಾವಲ್ಲಾ ಕೋತಿಗಳು ಹಾಕಿದ್ದುಅಂತಾ ಅಂದ್ರು ಆದರೆ ಕೋತಿಗಳಲ್ಲೂಅಲ್ಲಿ ಇದ್ದಿಲ್ಲಾ, ಅಲ್ಲಿ ಆ ಮೇಲೆ ನಾನು ಬೈಯ್ದೆ, ಅದಕ್ಕೆ ಅವರು ತುಂಬಾ ಅಸಹ್ಯವಾಗಿ ಛೇಡಿಸಿದರು. "ನಿಂಗಿನ್ನು ಎಲ್ಲಾ ಸರಿಗ್ರಿದ್ರ ಏನಾಗ್ತಿತ್ತೋ " ಅಂತ ಆದ್ರೆ ತುಂಬಾ ದು:ಖ ಆಗ್ತಿತ್ತು. ಸಾರ್.ಯಾಕಪ್ಪ ನಾನು ಆಚೆಗೆ ಬಂದೆ ಇವರ ಕಣ್ಣಿಗೆ ಯಾಕೆ ಬಿದ್ದೆ ಅಂತ ಅನಿಸ್ತಿತ್ತು. ಆ ಮೇಲೆ ನಮ್ಮನೇಲಿ ಶೌಚಾಲಯ

ಕಟ್ಟಿಸಿದ್ರು ಆದ್ರೆ ಈಗ ಅಷ್ಟೇನು  ಸಮಸ್ಯೆ ಇಲಾ ಅದ್ರೆ ಒಂದು ವೇಳೆ ನೈಟಲ್ಲಾದ್ರೆ ಸ್ವಲ್ಪ ಕಷ್ಟ ಆಗುತ್ತೆ ಸಾರ್ ಯಾಕಂದ್ರೆ ನಾನೊಬ್ಬಳೇ ಬರೋಕೆ ಆಗಲಿಲ್ವಾ ಅದಕೆ.

ನನ್ನ ತರಹ ನಮ್ಮೂರಲ್ಲಿ  ಇನ್ನು ತುಂಬಾ ಹುಡೀಗರು ಈಗ್ಲೂ ಹೊರಗಡೆ ಹೋಗ್ತಿದ್ದಾರೆ. ಅವರನ್ನು ಕಂಡಾಗ ನಂಗಂತೂ ತುಂಬಾ ಬೇಸರ ಆನ್ಸುತ್ತೆ.ಅವರಲ್ಲೂ ಶೌಚಾಲಯ ಕಟ್ಟಿಸ್ಕೋಬೇಕಂತಿರುತ್ತೆ. ಅಧ್ರೆ ಮನೇಲಿ ಏನೋ ಒಂದು ಸಮಸ್ಯೆಇರುತ್ತೆ. ಅದಕ್ಕೆ ಅವರು ಕಟ್ಟಿಸ್ಕೋಂಡಿಲ್ಲ ಸಾರ್.

## ಹದಿಹರೆಯದವರೊಂದಿಗಿನ ಸಂದರ್ಶನದ ಸಾರಾಂಶ

**ಹೆಸರು : ಕಮಲ ಟೈಲರಿಂಗ್**

ಸಾರ್. ನಾನು ಮನೆನಲ್ಲಿರ್ತೀನಿ, ಮತ್ತು ಟೈಲರಿಂಗ್ ಮಾಡ್ತಿರ್ತೀನಿ. ಸಾರ್ ಸ್ವಚ್ಛತೆ ಅಂದ್ರೆ ನಮ್ಮನೆ ಸುತ್ಲೂ ಮತೆ ಅಕ್ಕಪಕ್ಕೆ ನಮ್ಮ ಊರುಸ್ವಚ್ಛವಾಗಿಡಬೇಕು ಆಗ ಮಾತ್ರ ನಾವೆ ಚೆನ್ನಾಗಿ ಆರೋಗ್ಯವಾಗಿರೋಕೆ ಸಾಧ್ಯಸಾರ್. ಶೌಚಾಲಯಕೂಡ ಸ್ಚ್ಛತೆಯಲ್ಲಿ ಒಂದು ಭಾಗ.ಯಾಕಂದ್ರೆ ತುಂಬಾ ಜನರು ಹಳ್ಳೀಲಿ ಆಚೆಗೆ ಹೋಗ್ತಾಋಎ ಬಯಲು ವಿಸರ್ಜನೆಗಂತ ಆ ಥರ ಹೋದಾಗ ಮತ್ತು ಅವರೆಲ್ಲಿ ಕೂತ್ಕೋ ತಾರ ಓ ಆ ಜಾಗಕ್ಕೆ ಮತ್ತೆ ಯಾರುಹೋಗಂಗಿಲ್ಲಾ ಯಾಕಂದ್ರೆ ಅದುಗಲೀಜು ಅಂತ ಆ ಗಲೀಜಿನಿಂದ ನಮ್ಮ ಆರೋಗ್ಯಕ್ಕೂ ಹಾನಿಯಾಗುತ್ತೆ. ಕೆಲವೊಂದು ರೋಗಗಳೂ ಬರ್ತಾವೆ. ನಮ್ಮನೇಲಿ ಶೌಚಾಲಯ ಇಲ್ಲಾ ಸಾರ್.ನಾವೆಲ್ಲಾ ಬಯಲಿಗೆ ಹೋಗ್ತದ್ದೀವಿ.

ಶೌಚಾಲಯ ಕಟ್ಟಬೇಕು ಅಂಥ ನಮ್ಗೂ ಆಸೆ ಇದೆ ಆದ್ರೆ ನಮಗೆ ಜಾಗ ಇಲ್ಲ ನಾವೆಲ್ಲೀ ಕಟ್ಟಿಸಬೇಕು.ಸಾರ್.ನಮ್ಮನೆ ಹಿಂದೆ ಸ್ವಲ್ಪ ಜಾಗ ಇದೆ.ಅಲ್ಲಿ ಕಟ್ಟಿಸ್ಬೇಕು. ಅಂತ ತಯಾರ್ ಮಾಡ್ಕೋಂಡ್ವಿ ಆದರೆ ನಮ್ಮ ಪಕ್ಕದ್ಮನೆಯವರು ಜಗಳಕ್ಕೆ ಬಂದ್ರು ಯಾಕಂದ್ರೆ ವಾಸ್ನೆ ಅಂತ ಶೌಚಾಲಯ ಮನೆ ಪಕ್ಕದಲ್ಲಿ ಇದರೆ.ಅನಿಷ್ಟ ಅದು ಗಲೀಜು ಕೆಟ್ಟ ದುರ್ವಾಸನೆ ಬರುತ್ತೆ ಅಂಥ ಅದರಲ್ಲೂ ಅದೇನು ಒಂದು ರೂಮಲ್ಲಿ ಕೂತ್ಕೋಂಡುಇ ಶೌಚ ಮಾಡೋದು.

ಮನೆಯಲ್ಲಿ ದೇವರ ಪೋಟೋ ಇಟ್ಟೇದ್ದೀವಿ.ಪೂಜೆ ಮಾಡ್ತೀವ ಅಂಥ್ರದ್ದಲಿ ಆ ಅವಾಂತರ ಬೇಡಪ್ಪಾ ಮನೆ ಹತ್ರ. ಒಂದುವೇಳೆ ನೀವೇನನ್ನಾ ಕಟ್ಟಿಸಿದ್ರೆ ನಿಮ್ಮನೆ ಆಚೆ ಅಥವಾ ನಿಮ್ಮ ಮನೆ ಒಳಗೆ ಕಟ್ಟಿಸ್ಕೊಳ್ಳಿ ಆಷ್ಟೆ ನಮ್ಮನೆ ಪಕ್ಕದಲ್ಲಿ ಮಾತ್ರ ಕಟ್ಟಿಸ್ಬೇಡಿ ಅಂತ ಜಗಳ ಮಾಡ್ತದ್ದಾರೆ ಸಾರ್. ಆದ್ರುಕೂಡ ನಾವ್ ಶೌಚಾಲಯ ಕಟ್ಟಿಸಿದ್ವಿ ಸಾರ್. ಆದ್ರೆ ನಾವಿಲ್ಲಿದ್ದಾಗ ಅವ್ರೆ ಕಲ್ಲೆತ್ತಿ ಶೀಟ್ ಮೇಲಾಕಿ ಶೀಟ್ ಹೊಡೆದಾದರೆ ಸಾರ್ ಈಗ ಮತ್ತೆ ಆದೆಲ್ಲಾ ರೆಡಿ ಮಾಡಸ್ಬೇಕಂದ್ರೆ ದುಡ್ಡು ಬೇಕುನಮ್ಮಪ್ಪ ಇಲ್ಲಾ ದಕ್ಕೆ ಆಚೆಕಡೆ ಹೋಗ್ತಿದ್ವಿ ಸಾರ್. ಆಚೆಕಡೆ ಒಂದು ಪಬ್ಲಿಕ್ ಟಾಯ್ಲೆಟ್ ಮತ್ತು ಒಂದುಸಲ ಡೈಟಾಯ್ಲೆಟ್ ಗೆ ಹೋಗ್ತದ್ದೀವಿ.

ಆ ಶೌಚಾಲಯ ಪಕ್ಕದಲ್ಲೆ ಇದೆ ಸಾರ್ ಯಾಕಂದ್ರೆ ಅದು ಮಾತ್ರ ಸರ್ಕಾರಿ ಜಮೀನಾದ್ದರಿಂದ ಈ ರೀತಿ ಆಚೆ ಕಡೆ ಹೋಗ್ಬೇಕಾದ್ರ ತುಂಬಾನೇ ಇಂಸೆ ಹಲವಾರುಕಾರಣಗಳೀವೆ.ಸಾರ್. ಆಚೆ ಕಡೆ ಹೋಗದಂತೂ ಒಳ್ಳೇದಲ್ಲಾ ನಮಗೆ ಯಾಕಂದ್ರೆ ಯಾವ ಟೈಂನಲ್ಲಿ ಹೋಗ್ಬೇಕನಿಸುತ್ತೋ ಮತ್ತುಯಾರ್ ನೋಡ್ತಾರೋ ಏನ್ ಆಗುತ್ತೆ ಅನ್ನೋ ಭಯ ಸಾರ್. ಗಾಡಿಗಳು ಬರ್ತಾ ಇರ್ತಾವೆ. ನಾವುಕೂತಿದ್ದಾಗ ಅವುಗಳ ಲೈಟ್ ನಮ್ಮೇಲೆ ಬೀಳ್ತಾವೆ.ಆಗಂತೂ ಅವಮಾನ ಅಂದ್ರೆ ಅವಮಾನಕೆಲವರಂತೂ ಬೇಕಂತ್ಲೆ ನಿಧಾನವಾಗಿ ಬರ್ತಾಋುಎ ಲೈಟ್ ನಮ್ಮ ಕಡೆ ತಿರಿಗಿಸ್ಕೋಂಡು. ನಾವ್ ಎಷ್ಟು ಬಾರಿಅಂತ ಎದ್ದಳೋದು, ಕೂರೋದು ಕೊನೆಗೆ ಏನಾದ್ರ ಸರಿ ಅಂತ ಹಾಗೆ ಕೂರ್ಬಿಡ್ತೀವಿ. ತುಂಬ ಹುಡುಗರುನಮ್ಮನ್ನ ಹಿಂಬಾಲಿಸುತ್ತಾರೆ.ಛೇಡುತ್ತಾರೆ.ಆದ್ರೆ ನಮಗೆ ವಿಧಿಇಲ್ಲಾ ಸಾರ್.ನಾವೇನು ಮಾಡೋಕಾಗಲ್ಲಾ,ಸುಮ್ನೆ ಬರ್ತಾ ಇರ್ತೀವಿ ಅಷ್ಟೆ. ಈಕಡೆ ಮನೇಲೂ ಹೇಳಕಾಗಲ್ಲಾ ಯಾವ ತರಂತ ಹೇಳೋಕೆ ಆಗುತ್ತೆ ಅದರಲ್ಲೂ ಮನೆನಲ್ಲಿ ಹೇಳಿದ್ರೆ ಸರಿ ನೀನುಆಚೆ ಕಡೆ ಹೋಗ್ಬೇಡ್ ಅಂತಾರೆ. ಅದರರ್ಥ ಇಲ್ಲೆ ಎಲ್ಲನ್ನ ಪಕ್ಕದಲ್ಲೋಗುಅಂತ ಪಕ್ಕದಲ್ಲೋದ್ರೆ ಜಮೀನವ್ರ ಕಾಟ ಒಂದೊಂದು ಸಲ ಈ ಟಾಯ್ಲೆಟ್ ಹೋಗ್ದೆ ಇರೋಂಗೆ ಏನನಾ ಮಾತ್ರೆ ಇದ್ರೆ ತಿನ್ನೋಣ ಅನ್ಸುತ್ತೆ. ಮತ್ತುಊಟ ಕೂಡ ಮಾಡೋದೆ ಬೇಡ್ ಅನ್ಸತ್ತೆ. ಸಾರ್.ಇತ್ತೀಚೆಗೆ ನಾನು ತೂಕ ಕಡಿಮೆ ಆಗ್ತಿದ್ದೀನಿ ಯಾಕಂದ್ರೆ ನಂಗೆ ಗೊತ್ತಿಲ್ಲಾ ನಾನ್ ಮೊದಲಂಗೆ ಊಟ ಮಾಡ್ತಿಲ್ಲಾ ಮತ್ತು ಮೈ ಕೈ ತುಂಬಾ ನೋವು ಅದನ್ನ ನಮ್ಮಮ್ಮಂಗೆ ಹೇಳಿದ್ರೆ ಟೈಲರಿಂಗ್ ಮಾಡ್ತಿದ್ದೀಯಂಗೆ ಅಂತಾರೆ ಆದ್ರೆ ನನ್ನ ಒಳಗಿನ ಸಮಸ್ಯೆ ಯಾರು ಅರ್ಥಮಾಡ್ಕೊಳಲ್ಲಾ ಸಾರ್.

ನಾನೇ ಅಲ್ಲಾ ಈ ಥರಾ ನಮ್ಮೂರಲ್ಲಿ ಜಾಸ್ತಿ ಜನ ಇದ್ದಾರೆ ಸಾರ್ ಈ ಪರಿಸ್ಥಿತಿಗಳು ನನ್ನನ್ನು ತುಂಬಾ ಹಿಂಸೆ ಮಾಡುತ್ತಿವೆ. ಅದರಲ್ಲೂ ಆ ಪಬ್ಲಿಕ್ ಶೌಚಾಲಯದಲ್ಲಿ ಸ್ವಚ್ಛತೆ ಇಲ್ಲ ಮತ್ತುನೀರು ಕೂಡ ಇಲ್ಲ. ಆದ್ರೂಅಲ್ಲೇ ಹೋಗ್ತೀವಿ.ಒಂದೊಂದುಸಲ ಅರ್ಜೆಂಟಾದಾಗ ಎಲ್ಲನ್ನಾ ಮರಗಳ ಪೊದೆನಲ್ಲಿ ಮತ್ತು ಕಬ್ಬಿನ ಗದ್ದೆಯಲ್ಲಿ ಕೂತ್ಕೋತಿದ್ವಿ ಅಲ್ಲೂ ಭಯ ಯಾಕಂದ್ರೆ ಈ ಜಮೀನು ಮಾಲೀಕರ ಮಕ್ಕಳು ನಮ್ಮೆದುರು ಬಂದು ಬಿಡೋರು ಮತ್ತು ಫೋಟೋ ತೆಗೆಯೋಕೆ ಬರೋರುಯಾಕಂದ್ರೆ ನಮ್ಮ ಜಮೀನಿಗೆ ಯಾರ್ ಬಂದಿದ್ದೀರಿ ನಾವೆಂಹಗೆ ನೀರ್ ಕಟ್ಬೋದು ಈ ಸ್ಥಳದಲ್ಲಿ ಆ ಗಲೀಜಲ್ಲಿ ಅಂಥ ಅವಮಾನ ಮಾಡುತ್ತಿದ್ರು ಮತ್ತು ಅವಾಚ್ಯ ಶಬ್ದಗಳಿಂದ ಬೈಯ್ತಿದ್ರು.

ಒಂದ್ವೇಳಖೆ ಏನನ್ನಾ ನಾವ್ ಬಯ್ದ್ರೆ ನಮ್ ಫೋಟೋ ಎಲ್ಲಾರ್ಗೂ ತೋರಿಸುತ್ತೀನಿ ಮತ್ತು ನಿನ್ನನ್ನ ಅವಮಾನಗೊಳಿಸ್ತೀನಿ.ಅಂತ 'ಬ್ಲಾಕ್ ಮೇಲ್ ಮಾಡ್ತಿದ್ರು ಸಾರ್. ಅದನ್ನು ಬಂದು ನಮ್ಮನೇಲಿ ಹೇಳಿದ್ದೀನಿ ನಮ್ಮಮ್ಮ ಹೋಗಿಅವರನ್ನು ಕೇಳಿದಾಗ ನಾವೇನ್ ತೆಗೆದಿಲ್ಲಾ,ಮತ್ತು ನಾವೇನ್ ನಿಮ್ಮುಡಿಗಿನೇನಾ ನೋಡಕ್ಕೇನು ಹೋಗಿಲ್ಲಾ, ನಾನ್ ನಮ್ಮ ಗದ್ದೆ ಕಡೆ ಹೋಗಿದ್ದೆ ಅಷ್ಟೆ ಅವಳೇ ಅಲ್ಲದ್ದು. ಇಷ್ಟಕ್ಕೂ ಯಾಕೆ ನಮ್ಮ ಗದ್ದೇಲಿ ಬಂದು ಕೂರ್ಬೇಕುಎಂದು ಜಗಳ ಮಾಡಿದ್ದಾರೆ. ಸಾರ್. ಅದಕ್ಕೆ ನಾವಂತೂ ಯಾರನ್ನುಬೈಯಾಕ್ಕೆ ಹೋಗಿಲ್ಲ ಹೆಂಗೋ ಎಲ್ಲೋ ನಮ್ಮ ಕೆಲಸ ಮುಗಿಸಿಕೊಂಡು ಬಂದ್ರೆ ಸಾಕಂತ ಅನ್ನಿದೆ ಸಾರ್. ಇನ್ನು ನೈಟಲ್ಲಾದ್ರೆ ನಾವ್ ರೋಡ್ ಕಡೇನೆ ಹೋಗ್ಬೇಕು. ಅಲ್ಲಿ ಹೋಗ್ಬೇಕಂದೆ ತುಂಬಾನೆ ಕಷ್ಟ

**ಹದಿಹರೆಯದವರೊಂದಿಗಿನ ಸಂದರ್ಶನದ ಸಾರಾಂಶ**

**ಹೆಸರು : ಹೇಮಲತಾ ದ್ವಿತೀಯ ಪಿ.ಯು.ಸಿ ನಾಗೇನಹಳ್ಳಿ.**

ಸಾರ್ ನಾನ್ ದ್ವಿತೀಯ ಪಿ.ಯು.ಸಿ ಓದುತ್ತಿದ್ದೇನೆ. ಮತ್ತು ಸಖಿ ಜೊತೆ ಗುರ್ತಿಸಿಕೊಂಡಿದ್ದೀನಿ. ನಾನು ನನ್ನ ಕಾಲೇಜು ಮುಗಿದ್ಮೇಲೆ ಮನೆಗೆ ಬರ್ತೀನಿ ಬಂದು ಟೈಲರಿಂಗ್ ಮಾಡ್ತೇನೆ.ಮತ್ತುನನ್ನ ಸ್ಟಡೀಸ್ ಕೂಡ ಮಾಡ್ತಾ ಇರ್ತೀನಿ.

ನಮ್ಮನೇಲಿ ಶೌಚಾಲಯ ಇಲ್ಲಾ ಸರ್. ಯಾಕಂದ್ರೆ ನಮಗೂ ಜಾಗವಿಲ್ಲಾ,ಆದ್ರೆ ಕಟ್ಟಿಸಬೇಕು ಅಂತಾ ಮಾತ್ರ ಇದೆ.ಈಗ ನಾನು ನಾವುಹೊರಗಡೆ ಹೋಗ್ತೀವಿ. ಸಾರ್ ಮಾರ್ನಿಂಗ್ ಮತ್ತು ಯೂನಿಂಗ್ ಹೋಗ್ತೀವಿ ಮಧ್ಯಾಹ್ನ ಹೊತ್ತಲ್ಲಿ ಖೂಡ ಹೋಗಬೇಕಾಗುತ್ತೆ. ಆಗ ಇಲ್ಲೆ ಎಲ್ಲನ್ನಾ ಪಕ್ಕದಲ್ಲಿ ಹೋಗ್ತೀವಿ ಸಾರ್ ಆಚೆ ಕಡೆ ಹೋಗ್ತಿದ್ದಾಗ ನಮ್ಗೆ ವಿಪರೀತ ಸಮಸ್ಯೆಗಳಾಗ್ತಾವೆ ಸಾರ್.ಇಂದಿಗೂ ಆಗ್ತಾನೆ ಇವೆ ಸಾರ್ ನಂಗೆ ಒಂದುಘಟನೆ ಆಗಿದೆ. ಸಾರ್.ನಾನು ಒಂದು ದಿನಬೆಳಗ್ಗೆ ಶೌಚಾ ಮಾಡಲು ಊರಾಚೆಗೆ ಹೋದೆ ಅಲ್ಲಿ ಒಂದು ಗುಣಿಯಲ್ಲಿ ಕುಂತಿದ್ದೆ ನಂಗೊತ್ತಿಲ್ಲದಂತೆ ನಂಗಿತಾ ಮುಂಚೆ ಒಬ್ಬ ವ್ಯಕ್ತಿ ಪಕ್ಕದಲ್ಲಿ ಕುಳಿತಿದ್ದಾನೆ. ಆದೂ ಬೇರೆ ಕತ್ತಲು ನಂಗೆ ಕಾಣಿಸ್ಲಿಲ್ಲಾ ಸಡನ್ನಾಗಿ ಆ ಯಪ್ಪಾ ಎದ್ದು ಬಿಟ್ಟ, ನಂಗೆ ಭಯ ಆಗ್ಬಿಡ್ತು. ಸಾರ್ ಮತ್ತು ಆತನು ನನ್ನನ್ನುನೋಡಿಬಿಟ್ಟ ನಾನು ಮಾತ್ರ ಆತ ಯಾರೆಂದು ನೋಡಲಿಲ್ಲಾ ಆವತ್ತಿನಿಂದ ಈವತ್ತಿನವರೆಗೂ ನಾನು ಆಚೆಕಡೆ ನಿಲ್ಬೇಕು ಮತ್ತುಒಡಾಡಬೇಖದಂದ್ರೆ ಒಂದು ಥರ ಅವಮಾನ ಆಗುತ್ತೆ. ಸಾರ್.

ಮತ್ತೆ ಒಂದು ಸಲ ರಾತ್ರಿಹೊತ್ತಲ್ಲಿ ನಾನು ಮತ್ತು ನನ್ನ ತಂಗಿ ಇಬ್ಬರೂ ಬಯಲಿಗೆ ಹೋಗಿದ್ವಿ ಆಗ ನಾನು ಕೂತಿದ್ದೆ ಅದು ಬೆಳದಿಂಗಳು ಆ ಸ್ಥಳದಲ್ಲಿಮತ್ತು ಆ ಜಾಗದ ಪಕ್ಕದಲ್ಲಿ ಹುಡುಗರು ಒಡಾಡ್ತ ಇರ್ತಾರೆ. ಸರ್. ಅದುಬೇಕಂತ ಆ ನವೋದಾಗ ಬರ್ತಾರೆ. ಮತ್ತು ನಾವಿರೋ ಜಾಗವ್ನನು ಗಮನಿಸಿಕೊಂಡು ಅಲ್ಲೆ ಅಡ್ಡಾಡ್ತಾರೆ. ಆವತ್ತೂ ನಾನ್ ಕೂತಿದ್ದೀನಿ ಒಂದು ಹುಡುಗರ ಗುಂಪು ಮೊಬೈಲ್‌ನಲ್ಲಿ ಟಾರ್ಚ್ ಆನ್ ಮಾಡಿ ಹಾಕೋದು ನನ್ನ ತಂಗಿ ನಿಂತಿದ್ಲು. ನಾವು ಸ್ಪಷ್ಟವಾಗಿ ಬೆಳದಿಂಗಲ್ಲಿ ಅವರಿಗೆ ಕಾಣಿಸ್ತದ್ವಿ ನಾವೇನ್ ಸಾರ್ ಮಾಡೋದು ನಿಜವಾಗ್ಲೂ ಅವರಿಗೆ ಕಾಣಿಸ್ದೀರಾ ನನ್ನ ತಂಗಿ ಅಡರ್ಡ ನಿಂತಿದ್ಲು. ಅವಳು ನಿಂತಿದ್ದನ್ನು ನೋಡಿ ಅವರು ಛೇಡಿಸಿದ್ದು ಈವತ್ತಿಗೂ ನಂಗೆ ಜ್ಞಾಪಕ ಇದೆ.

"ಲೇ ಯಾವುದೋ ಫಿಗರ್ ಕುಂತಿದೆ ಕಣೋ " ಅಂದೆ ಮೊತ್ತಬ್ಬನು "ಲೇ ಫೋಟೋ ಹೊಡೆಯೋ" ಅಂತ "ಲೇ ಒಂದು ಕಲ್ಲಾಕೋ" ಅಂತ ನಮ್ಮನ್ನ ಭಯ ಪಡಿಸುತ್ತಾರೆ. ಮತ್ತು ಇದ್ದಕ್ಕಿಂದ್ದಂತೆಯೇ ಅಯ್ಯೋ ದೆವ್ವ ಅಂತಾ ಓಡ್ತಾರೆ ಆಗ ನಮಗೂ ಭಯ ಆಗುತ್ತೆ ಮತ್ತು ಎದ್ದು ಹೋದರೆ ಅವಮಾನ ಅಂಥ ಪರಿಸ್ಥಿತಿಲೀ ತುಂಬಾ ಹಿಂಸೆ ಅನುಭವಿಸಿದ್ದೀವಿ.ಸಾರ್.

ಈಗ್ಲೋ ಕೂಡ ನಮ್ಮ ತಂಗಿ ಮತ್ತು ನಾನು ಹಾಸ್ಟೆಲ್‌ನಲ್ಲಿದ್ದೀವಿ. ಆಗಾಘ ಊರಿಗೆ ಬರ್ತೀವಿ. ಈ ಸಂಧರ್ಭದಲ್ಲಿ ಈಥರ ಘಟನೆಗಳು ಸಾರ್. ನಿಜವಾಗಲೂಊರಿಗೆ ಹೋಗಬೇಕಂದ್ರೇನೆ ಒಂದು ಥರ ಕಷ್ಟ ಮತ್ತು ದು:ಖ ನಮ್ಮಮ್ಮಂಗೆ ಹೇಳಿದ್ರೆ ":ಯಾಕಮ್ಮ ಈ ಥರ ಹೇಳ್ತೀಯಾ ಊರಲ್ಲಿ ನಿನೊಬ್ಬಳೇನಾ ಹೆಣ್ಣು ಮಗಳು ಯಾರನ್ನೂ ನೋಡದೆ ನಿನ್ನನ್ನು ಮಾತ್ರ ನೋಡ್ತಾರಾ ಅಂತ ಅಂತಾರೆ " ಒಂದ್ವೇಳೆ ಅ ಥರಾ ಇದ್ರೆ ಬೇಗೆ ಎದ್ದು ಇಲ್ಲೆ ಎಲ್ಲನ್ನಾ ಪಕ್ಕದಲ್ಲಿ ಕೂತು ಬನ್ರಿ ಅಂತಾರೆ. ನಮ್ಮೂರಲ್ಲಿ ಸಾರ್ ಎಲ್ಲೂತಮ್ಮ ತಮ್ಮ ಜಾಗಗಳಿಗೆ ಬೇಲಿ ಮತ್ತು ಬೆಳೆ ಹಾಕ್ತಿದಾರೆ . ಹಾಕಿದ್ದಾರೆ. ಅಂತ್ರದಲ್ಲಿ ಹೋಗಿ ನಾವು ಕೂತ್ರೆ ಅದೇ ನನ್ನಾ ಅವರು ನೋಡಿದ್ರೆ ಭೈಯೋದಿಲ್ಲ ಸಾರ್. ನಮ್ಮ ಫೋಟೋ ತೆಗೆಯೋದು ಮತ್ತು ನಮ್ಮನ್ನ ನೋಡಿ ಒಡಾಡ್ಸೋದು ಈ ಥರಾ ಎಲ್ಲಾ ಮಡ್ತಾರೆ. ನಂಗೆ ಎಷ್ಟೋ ಸಲ ನೈಟ್‌ನಲ್ಲಿ ಟಾಯ್ಲೆಟ್ ಗೆ ಬಂದಿದೆ.ಆದೆ ನಾನ್ ಮಾನಸಿಕ ಹಿಂಸೆ ಪಟ್ಟು ಬೆಳಗ್ಗೆವರ್ಗೋ ತಡ್ಕೋಂಡಿದ್ದೀನಿ. ಸಾರ್. ಆವತ್ತಂತೂ ತುಂಬಾ ಅತ್ತಿದ್ದೀವಿ. ಮತ್ತು ಭಯಪಟ್ಟಿದ್ದೀವಿ.

ಎಷ್ಟೋ ಸಲ ಒಬ್ಬಳೇ ಟಾಯ್ಲೆಟ್ ಗೆ ಹೋಗೋಣ ಅಂತ ಅಂದುಕೊಂಡಿದ್ದೀವಿ.ಆದ್ರೆ ಅವರೀವ್ರೂಊಈ ಅಂತರೆ ನಮ್ಮೂರ ಟಾಯ್ಲೆಟ್‌ನಲ್ಲಿ ದೆವ್ವ ಇದೆಯಂತೆ ಅಂತಾ ಅದಕ್ಕೆ ನಂಗೆ ಭಯ ಆಗುತ್ತೆ ಸಾರ್. ಮತ್ತು ಮನೆ ಹಿಂದೆ ಕುಳಿತುಕೊಳ್ಳೋಣ ಆಂದ್ರೆ ನಮ್ಮನೆ ಸುತ್ಲೂ ಬೇರೆಯವರ ಜಮೀನು (ತೋಟ) ಆಚೆಗೋದ್ರೆ ಹುಡುಗರ ಕಾಟ ಮನೆಯಲ್ಲಿ ಹೇಳಿದ್ರೆ ಏನೇನೋ ಕಷ್ಟಗಳು ನಮಗೆ ನೋಡಿದ್ರೆ ಮಾನಸಿಕವಾಗಿ ಹಿಂಸೆ ಒಂದೊಂದು ಸಲ ಅನ್ಸಿತ್ತೆ ಯಾಕೆ ನಮಗೆ ಮಾತ್ರ ಈ ಸಮಸ್ಯೆಗಳು ಅಂತ. ಯಾಕಂದ್ರೆ ಗಂಡಸರು ಎಲ್ಲಿ ಬೇಕಾದ್ರು ಮಾಡ್ತಾರೆ. ಟಾಯ್ಲೆಟ್ ಅದನ್ನು ನಾವುನೋಡಿದ್ರು ಕೂಡ ಅವರೇನು ಬೇಜಾರಾಗಲ್ಲ.ಒಂದು ವೇಳೆ ನಾವೇನಾದ್ರು ಆ ಥರ ಕಂಡ್ರೆ ಅದರ ಅವಮಾನಾನೇ ಬೇರೆ ಸಾರ್

ನೆಕ್ಸ್ಟ್ ದಿನ ಅವರ ಮುಂದೆ ತಲೆ ಎತ್ತುಕೊಂಡು ಹೋಗೋಕೆ ನಮ್ಗೆ ನಾಚಿಕೆ ಮತ್ತು ಅವಮಾನ ಆಗುತ್ತೆ ಸಾರ್. ನಮ್ಮನ್ನ ಕಂಡಾಗ ಅವರು ಇಂಡೈರಕ್ಟ್ ಆಗಿ ನಮ್ಮನ್ನು ಛೇಡಿಸುತ್ತಾರೆ. ಸಾರ್. ಆಗಂತೂ ನಿಜವಾಗಲ್ಲೂ ಪ್ರಾಣ ತಗೋಳ್ಳೋಣ ಅನ್ಸುತ್ತೆ ಸಾರ್ ಆದ್ದರಿಂದ ನಾನು ನಮ್ಮ ಮನೇಗೆ ಬರಬೇಕುಆಂದ್ರೆ ನನಗೆ ಬೇಜಾರು ಯಾಕಂದ್ರೆ ನಮ್ ಮನೇಲಿ ಟಾಯ್ಲೆಟ್ ಇಲ್ಲಾ ಆಚೆಗೆ ಹೋದ್ರೆ ಈ ಸಮಸ್ಯೆ ಅದಕ್ಕೆ ಹಾಸ್ಟೆಲ್ ನಲ್ಲಿ ಇರ್ತೀದ್ದೀನಿ. ಸರ್.

## ಹದಿಹರಿಯದವರ ಸಂದರ್ಶನದ ಸಾರಾಂಶ

**ಹೆಸರು: ನಿಂಗಮ್ಮ ಪಿ.ಯು.ಸಿ. ಪ್ರಥಮ (ನಾಗೇನಹಳ್ಳಿ)**

ಸ್ವಚ್ಛತೆ ಅಂದ್ರೆ ಸಾರ್, ನಮ್ಮ ಸುತ್ತಮುತ್ತಲೂ ಸ್ವಚ್ಛ ಇರಬೇಕು ಸಾರ್ ಆಗ ಮಾತ್ರ ನಾವು ಕೂಡ ಚೆನ್ನಾಗಿರುತ್ವೆ ಸಾರ್. ಅದು ಬೇಕಂದ್ರ ನಮ್ಮ ಒಳ್ಳೆ ಊಟ, ಬಟ್ಟೆ ಬರೆ, ಮನೆ, ಶೌಚಾಲಯ ಕೂಡ ಇರ್ಬೇಕು ಸಾರ್. ನಮ್ಗೆಲ್ಲಾ ಇದೆ ಸಾರ್ ಆದ್ರೆ ಶೌಚಾಲಯ ಇತ್ತೀಚಿಗೆ ಕಟ್ಟಿಸಿದ್ದೀವಿ ಸಾರ್. ಅದಕ್ಕಿಂತಾ ಮುಂಚೆ ನಾವ್ ಪಬ್ಲಿಕ್ ಟಾಯಲೆಟ್‌ಗೆ ಹೋಗ್ತಿದ್ವಿ ಸಾರ್, ಅಲ್ಲಂತೂ ಗಲೀಜಂದ್ರ ಗಲೀಜು, ಅದರಲ್ಲೂ ನೀರು ಬೇರೆ ಬರಲ್ಲ ಅದ್ರು ಕೂಡ ನಾವೇ ನೀರು ತೆಗೊಂಡು ಹೋಗಿ ಹೆಂಗೊ ಅಂಗೆ ಕೂತು ಬರ್ತಿದ್ವಿ ಸಾರ್. ಅಲ್ಲಿ ನಾವ್ ಹೋಗ ಬೇಕಾಗಿದ್ದು ಮುಂಜಾನೆ ಮತ್ತು ಕಾಲೇಜಿನಿಂದ ಬಂದ್ಮೇಲೆ ಅಷ್ಟೆ ಸಾರ್.

ಸಾಯಂಕಾಲ ಒಗ್ತಿದ್ವಿ ಸಾರ್ ಅದ್ರೆ ಊರಾಚೆಗೆ ಇದೆ ಒಂದು ವೇಳೆ ಟಾಯಲೆಟ್ (ಡ್ರೈ) ಅದ್ಕೆ ಹೋಗ್ತಿದ್ವಿ ಸಾರ್ ಅದ್ರೆ ಅಲ್ಲಿಗೆ ಹೋಗೋಕೆ ಭಯ ಸಾರ್, ಯಾಕಂದ್ರೆ ಅಲ್ಲಿ ಒಂದು ಮನೆಯವ್ರು ಬಂದು ನಾವು ಕೂತಿದ್ದಾಗ ನಮ್ಮ ಪೋಟೋಗಳನ್ನು ತಕ್ಕೊಂಡು ಹೋಗ್ತಿದ್ರು ನಮ್ಮ ನಮ್ಮನ್ನ ಬೈಯ್ತಿದ್ರು. ಯಾಕಂದ್ರೆ ಇದು ನಮ್ಮ ಜಾಗ ಇದನ್ನು ಬಳಸಬೇಡ್ರಿ ಮತ್ತು ಈ ಕಡೆ ಬರಬೇಡ್ರಿ ಅಂತ ಗದಮಾಯ್ತಿದ್ದರು. ಒಂದು ದಿನ ನಾನು ಕಾಲೇಜಿನಿಂದ ಬೇಗ ಬಂದಿದ್ದೆ. ನನಗೆ ಟಾಯಲೆಟ್ ಹೋಗ್ಬೇಕು ಅನ್ನುತು. ಎಲ್ಲಿಗೋಗೊದಂಥ ತುಂಬಾನೇ ಹಿಂಸೆ ಆಯಿತು ಆ ಮೇಲೆ ಊರಾಚೆ ಬಂದು ಕಬ್ಬಿನ ಗದ್ದೆ ಅಲ್ಲದ್ದ ಬೇಲಿ ಪೊದೆಯತ್ರ ಕೂತಿದ್ದೆ ಅದ್ಯಾವಾನೋ ಸಾರ್ ಪಕ್ಕದಲ್ಲಿದ್ದ ಕಬ್ಬಿನ ಗೆದ್ದನಲ್ಲಿ ಜೋರಾಗಿ ಕಬ್ಬಿನ ಗರಿಗಳನ್ನು ಅಲ್ಲಾಡಿಸಿಬಿಟ್ಟ ನಂಗಂತೂ ಭಯ ಆಗ್ಬಿಟ್ಟು ಸಾರ್ ಮತ್ತು ದಡಾರನೇ ಎದ್ದು ನಿಂತೆ ಅದ್ಯಾವನೋ ಬಂದು ನನ್ನ ಮುಂದೆ ನಿಂತು ನನ್ನ ಪೋಟೋ ತೆಗೊಂಡು ಹೋಗ್ಬಿಟ್ಟ. ನಾನು ಕೂಡ ಬೈದೆ ಮತ್ತು ಅಳುಕೊಂಡು ಬಂದು ನಮ್ಮ ಅಮ್ಮಂಗೆ ಹೇಳ್ದೆ. ಅವರು ಅದಕ್ಕೆ ನೋಡೋಣ ಎನ್ ಮಾಡ್ತಾರೋ ಅಂತ ಸುಮ್ಮನಾದ್ರು., ಮತ್ತೆ ಏಕೆ ಪೋಟೋ ತಕ್ಕೊಳ್ಳೋದು ಅಂತ ಕೇಳಿದ್ರೆ ನೀವು ಬಂದು ನಮ್ಮ ಜಮೀನಲ್ಲಿ ಕೂತಿದ್ರಿ ಅದಕ್ಕೆ ನಾವು ಕೇಸ್ ಹಾಕ್ತೀವಿ. ಅಂತ ಸೌಮ್ನೆ ಅಂತಾಕಿ ಸಾರ್, ಅದ್ರೆ ಅವ್ರು ಪೋಟೋ ತೆಗೆಯೋದೆ ಬೇರೆ ವಿಷಯಕ್ಕೆ ಸಾರ್. ಒಂದು ದಿನ ನಮ್ಮ ಅತ್ತಿಗೆ

ಗರ್ಭವತಿಯಾಗಿದ್ದಾರೆ ಮಧ್ಯಾಹ್ನದಲ್ಲಿ ಲೇಟ್ರೀನ್‌ಗೆ ಹೊಗಕೆ ಹೋಗಿದ್ದಾರೆ. ಅಲ್ಲಿಗೊಡೆ ಮೇಲೆ ನೀರು ಇಲ್ಲ ಅಂತ ಗೊತ್ತಾಗಿದೆ. ಸರಿ ಬಿಡು ಅಂತ ಅಲ್ಲೆ ಒಂದು ಪಕ್ಕದ ಜಮೀನಿನಲ್ಲಿ ಕೂತಿದ್ದಾಗ ಆ ಜಮೀನಿನ ಯಜಮಾನ ಸಾರ್ 40 ವರ್ಷದವನು ಬಂದು ನಮ್ಮ ಅತ್ತಿಗೆ ಎದುರು ಬಂದು ನಿಂತ್ಕೊಂಡು ಬೈಯ್ತಿದ್ದಾನೆ.

ಅವನು ಬಂದಾಗ ಬೇಗ ಎಂದು ನಿಂತ್ಕೊಳ್ಳೋಕೆ ಆಗಲ್ಲ ಯಾಕಂದ್ರೆ ಗರ್ಭಿಣಿ ಅಲ್ಲಿಂದ ಮನೆಗೆ ಬಂದು ನಮ್ಮತ್ರ ಗೋಳೋ ಅಂತ ಅತ್ತು ಬಿಟ್ರು ಸಾರ್ ಮತ್ತ ನಾನ್ ಯಾವ ಮುಖ ಇಟ್ಕೊಂಡು ಹೋಗ್ಲಿ ಆಚೆ ಕಡೆ  ಎಂದ್ರು ಆದಾದ 1 ವಾರಕ್ಕೆ ಅವರು ನಮ್ಮೂರು ಬಿಟ್ಟು ಕಂಪ್ಲಿನಲ್ಲಿ ವಾಸವಿದ್ದಾರೆ. ಒಂದು ವೇಳೆ ನೈಟ್ ನಲ್ಲೇನಾದ್ರು ಬಂದ್ರೆ ನಾವು ಯಾರನ್ನೂ ಎಬ್ಬಿಸೋಕು ಆಗಲ್ಲಾ ಸಾರ್ ನಾವು ಎಬ್ಬಿಸೋದು ನಮ್ಮ ತಾಯಿನ  ಯಾಕಂದ್ರೆ ಅವರಿಗೆ ಮಾತ್ರ ಗೊತ್ತು ನಮ್ಮ ಪರಿಸ್ಥಿತಿ ಒಂದೊಂದು ಸಲ ಅವರು ಕೂಡ ಬೈಯುತ್ತಾರೆ ಏನೇ ನೀನು ಯಾಕೀತರ ಮಾಡ್ತಿಯಾ ಮತ್ತು ಏನಿದು ಈ ಟೈಂನಲ್ಲಿ. ಅದೇನು ನಮ್ಗೆ ಹೇಳಿ ಬರುತ್ತಾ ಸಾರ್ ನಾವೇನ್ ಮಾಡೋದು ಒಂದು ವೇಳೆ ಎದ್ದು ಹೋದ್ರು ಕೂಡ ಭಯ ಬೇರೆ ಯಾಕಂದ್ರೆ ನೈಟ್‌ನಲ್ಲಿ ನಾವಿಬ್ಬರೇ ಒಂದು ವೇಳೆ ಯಾರನ್ನೂ ಪಡ್ಡಿ ಹುಡುಗರೋ ಅಥವಾ ಇನ್ನಾರನ್ನೂ ಒಂದು ಏನನ್ನು ಮಾಡಿದ್ರು ಸುಮ್ಮಿರಬೇಕು ಸಾರ್ ಅಷ್ಟೆ.

ಆದ್ದರಿಂದ ನಿಜವಾಗ್ಲೂ ರಾತ್ರಿ ಹೊತ್ತು ಊಟ ಮತ್ತು ನೀರು ಕಡಿಮೆ ಕುಡೀತಿದ್ವಿ ಸಾರ್. ಈ ವಿಷಯ ನಮ್ಮ ತಾಯಿಗೂ ಗೊತ್ತಿತ್ತು. ಅವರೇ ಹೇಳಿದ್ದು ಕಡಿಮೆ ನೀರು ಕುಡಿ ರಾತ್ರಿಯಲ್ಲಿ ಅಂತ ಯಾಕಂದ್ರ ಶೌಚಾಲಯಕ್ಕೆ ಬರುತ್ತೆ ಅಂತ. ನಾವು ಕೂಡ ಕಡಿಮೆ ನೀರು ಕುಡೀತಿದ್ವಿ ಮತ್ತು ಊಟ ಕೂಡ ಅಷ್ಟಕಷ್ಟೆ ಮತ್ತು ನಮಗೆ ಇನ್ನೊಂದು ಸಮಸ್ಯೆ ಅಂದ್ರೆ ಹೆಚ್ಚು ಊಟ ಮಾಡಿದ್ರೆ ಈ ಸಮಸ್ಯೆ ಮತ್ತೇ ಕಡಿಮೆ ಊಟ ಮಾಡಿದ್ರೆ ಹೊಟ್ಟೆ ನೋವು ಒಂಥರಾ ಅದಂಥೂ ಹೇಳತೀರದು., ಅದರಲ್ಲೂ ಸಾರ್ ನಾನಂತೂ ತುಂಬಾ ಭಯದಿಂದ ಇರ್‍ತಿದ್ದೆ ಯಾಕಂದ್ರ ಊಟದ ಟೈಂನಲ್ಲಿ ನಾನು ಯಾವ ತರ ಊಟ ಮಾಡ್ಬೇಕು ಅಂತ ಎಲ್ಲರೂ ಅಂತಾರೆ ಸಾರ್ ಹೆಣ್ಣು ಮಕ್ಕಳು ಒಳ್ಳೆ ಪೌಷ್ಠಿಕ ಆಹಾರ ತಿನ್ನಬೇಕು ಅಂತ ಆದರೆ ಈ ತರ ಆಹಾರ ತಿಂದರೆ ನಮಗೆ ಶೌಚಾಲಯ ಸಮಸ್ಯೆ ಅತೀ ದೊಡ್ಡದು ಮತ್ತು ಎಲ್ಲಿಗೆ ಹೋಗ್ಬೇಕು ಅಂತ ಗೊತ್ತಗೊಲ್ಲ. ಮತ್ತು ಒಂದುವೇಳೆ

ಎರ್ರಾಬಿರ್ರಿ ಊಟ ಮಾಡಿದ್ವಿ ಅಂದ್ರೆ ಅದು ಎಲ್ಲಿ ಮೋಷನ್ಸ್ (ಬೇದಿ)ಗೆ ದಾರಿಯಾಗುತ್ತೋ ಅಂಥ ಭಯ ಸಾರ್. ಅದಕ್ಕೆ ನಮ್ಮಮ್ಮ ಹೇಳಿದ್ರು ಹೆಚ್ಚು ನೀರ್ ಕುಡಿಬೇಡ. ಎಣ್ಣೆ ಪದಾರ್ಥ ತಿನ್ನಬೇಡ, ಮಿತಿಯಾಗಿ ಊಟ ಮಾಡು.

ನಮ್ಮ ಮನೇಲಿ ಟಾಯ್‌ಲೆಟ್ ಕಟ್ಟಿಸಿಕೊಡಿ ಅಂತ ಕೇಳ್ತಿದ್ದೆ ಸಾರ್ ಆದ್ರೆ ಅವರು ಹಣ ಇಲ್ಲ ಅಂತಿದ್ರೂ. ನನ್ನ ಸಮಸ್ಯೆ ನಮ್ಮಮಂಗೆ ಗೊತ್ತಿತ್ತು. ಅವರು ಯಾರ್ಗೂ ನಮ್ಮನೇಲಿ ಹೇಳ್ತಿರಲಿಲ್ಲ. ಯಾಕಂದ್ರ ಹೆಂಗಸರ ವಿಷಯ ಎಲ್ಲಾ ಯಾಕೆ ಎಲ್ಲರಿಗೂ ಹೇಳ್ಬೇಕಾ ಅಂಥ ಗದರಿಸುತ್ತಿದ್ದರು ಸಾರ್. ಅಂತೂ ಕೊನೆಗೆ ಶೌಚಾಲಯ ಕಟ್ಟಿಸಿಕೊಂಡ್ವಿ ಸಾರ್ ಈಗ ನಮ್ಗೆ ತುಂಬಾ ಅನುಕೂಲ ಆಗ್ತಿದೆ. ಮತ್ತು ನಾನಂತೂ ಯಾವಾಗ ಬೇಕಾದ್ರೂ ಹೋಗಬಹುದು ಅಂತ ಅನ್ನಿಸಿದೆ ಸಾರ್.

## ಗರ್ಭವತಿಯ ಸಂದರ್ಶನದ ಸಾರಾಂಶ

ನನ್ನ ಹೆಸರು ಹುಲಿಯೂರಮ್ಮ ನನ್ನ ಮದುವೆ ಕಳೆದ 4 ತಿಂಗಳ ಹಿಂದೆ ನಡೆಯಿತು. ಆದರೆ ನಾನು ಈಗ ನಮ್ಮ ತಾಯಿಯ ಮನೆಯಲ್ಲಿ ಉಳಿದುಕೊಂಡಿರುತ್ತೇನೆ. ಏಕೆಂದರೆ ನಾನು ಗರ್ಭವತಿ ಆದ್ದರಿಂದ ನಾನು ನನ್ನ ತವರು ಮನೆಗೆ ಬಂದಿರುತ್ತೇನೆ. ಸಮಾಜದ ದಷ್ಠಿಯಲ್ಲಿ ನಾನು ಗರ್ಭವತಿಯಾದ್ದರಿಂದ ನನ್ನ ತವರು ಮನೆಗೆ ಬಂದಿರುತ್ತೇನೆ. ಆದರೆ ನನ್ನ ಮಾನಸಿಕ ವೇದನೆಯೇ ಬೇರೆ ಇದೆ. ಏಕೆಂದರೆ ನನ್ನ ಗಂಡನ ಮನೆಯಲ್ಲಿ ಸುಪ್ತರೀತಿಯ ಶೌಚಾಲಯ ವಿಲ್ಲದ ಕಾರಣ ಮತ್ತು ಸೂಕ್ತ ರೀತಿಯ ಸ್ನಾನ ಗೃಹದ ವಸತಿ ಇಲ್ಲದ ಕಾರಣ ನಾನು ಕಳೆದ ನಾಲ್ಕು ತಿಂಗಳಿನಲ್ಲಿ ನಾನು ತೀರ್ವರೀತಿಯ ಮಾನಸಿಕ ಸಮಸ್ಯೆಯನ್ನು ಅನುಭವಿಸಿದ್ದೇನೆ.

ಏಕೆಂದರೆ ಮಹಿಳೆಯಾದ ನಾನು ಧೈಯಸ್ಥಳಾಗಿ ಹೊರಗೆ ಶೌಚಾಲಯ ಮಾಡಲು ಆಗುವುದಿಲ್ಲ. ಹಾಗೂ ನಾನು ಹೋದರೆ ಅಲ್ಲಿನ ಮಾನಸಿಕ ಹಿಂಸೆಗಳೇ ಬೇರೆ ಮೊದಲೇ ಹೆಣ್ಣನ್ನುವಿಕೃತ ರೂಪದಲ್ಲಿ ನೋಡುವ ಈ ಸಮಾಜದ ಕಣ್ಣಿಗೆ ಆ ರೀತಿಯ ವಿಹಂಗಮ ನೋಟದಲ್ಲಿ ಕಂಡರೆ ನಮ್ಮ ಮಾನ, ಪ್ರತಿಷ್ಠೆ ಮತ್ತು ಔದಾರ್ಯಗಳನ್ನು ಕಳೆದುಕೊಂಡು ಹೀನ ಸ್ಥಿತಿಯಲ್ಲಿರಬೇಕಾಗುತ್ತದೆ. ಆದ್ದರಿಂದ ಅತ್ತ ಹೊರಗೆ ಹೋಗಲಾರದೆ ಮತ್ತು ಬೇರೆಲ್ಲೂ ಕುಳಿತುಕೊಳ್ಳಲಾಗದೆ ನನ್ನ ದೈನಂದಿನ ಸ್ಥಿತಿ ಚಿಂತಾಜನಕವಾಗಿತ್ತು. ಈ ನನ್ನ ಸಮಸ್ಯೆಯನ್ನು ನನ್ನ ಮನೆಯ ಮಂದಿಯ ಜೊತೆ ಹಂಚಿಕೊಳ್ಳಾಗುವುದಿಲ್ಲ. ಏಕೆಂದರೆ ಯಾವ ರೀತಿಯಲ್ಲಿ ನನ್ನ ಈ ಆಂತರಿಕ ಸಮಸ್ಯೆಯನ್ನು ಅವರ ಮುಂದೆ ಚರ್ಚಿಸಲಿ. ಒಂದು ವೇಳೆ ಚರ್ಚಿಸಿದರೂ ಅದಕ್ಕೆ ಕಾರಣಗಳು ನಾವು ಶೌಚಾಲಯ ಕಟ್ಟುವ ಸ್ಥಿತಿಯಲ್ಲಿಲ್ಲ.

- ಹಣದ ಕೊರತೆ
- ಸೂಕ್ತ ರೀತಿಯ ಜಾಗದ ಕೊರತೆ
- ಮನೆಯ ಬಳಿ ಶೌಚಾಲಯ ಅನಿಷ್ಠ (ಸಂಪ್ರದಾಯವಲ್ಲ)
- ನೀರಿನ ಕೊರತೆ.

ಈ ರೀತಿಯಾಗಿ ಹಲವು ಸಮಸ್ಯೆಗಳನ್ನು ಹೇಳಿ ನಮ್ಮ ಬಾಯಿ ಮುಚ್ಚಿಸಿಬಿಡುತ್ತಾರೆ. ಆದರೆ ನಮ್ಮ ಮನೋವೇದನೆಯನ್ನು ಯಾರ ಬಳಿ ಹೇಳುವುದೆಂದು ದಿಕ್ಕು ತೋಚದೆ ಹಲವು ಬಾರಿ ಹತ್ತಿದ್ದೇನೆ. ಮತ್ತು ಹಲವು ಬಾರಿ ಊಟವನ್ನು ತ್ಯಜಿಸಿದ್ದೇನೆ. ಒಂದು ದಿನ ನಮ್ಮ ಮನೆಯವರ (ಗಂಡನ ಬಳಿ) ಈ ವಿಷಯದ ತಗಾದೆ ತೆಗೆದಾತ ಆತನು ನನ್ನನ್ನು ವಿನಾಕಾರಣವಾಗಿ ಊರಿನ ಮಹಿಳೆಯರಿಗಿಲ್ಲದ ಸಮಸ್ಯೆ ನಿನಗೊಬ್ಬಳಿಗೇನು ಎಂದು ಬೈದರು. ಈ ರೀತಿಯಾಗಿ ಮನೆಯಲ್ಲಿದ್ದ ದೊಡ್ಡವರು ನಮ್ಮ ಆಸ್ತಿ ಮಾವ ಹಾಗೂ ಹಲವು ನೆರೆಹೊರೆಯ ಹಿರಿಯರು ಕೋಪ ಅನುಮಾನದಿಂದ ನೋಡುವುದು ಪ್ರಾರಂಭಿಸಿದರು.

**ಉದಾ:** ನಾವು ಒಂದೇ ಕಡೆ ಬಯಲು ಶೌಚಾಲಯಕ್ಕೆ ಹೋದ ಸಂದರ್ಭದಲ್ಲಿ ನಮ್ಮ ಮನೆಯ ಹಿರಿಯರು " ಯಾಕೆ ನೀನು ಯಾವಾಗಲೂ ಆ ಕಡೆ ಮಾತ್ರ ಹೋಗುತ್ತೀಯಾ ಮತ್ತು ಯಾಕೆ ಅಷ್ಟು ತಡವಾಗಿ ಬರುತ್ತಿದ್ದೀಯಾ ಯಾರೊಂದಿಗೆ ಮಾತನಾಡುತ್ತಿದ್ದೆ ಏನು ಮಾಡುತ್ತಿದ್ದೆ.

ಈ ರೀತಿಯ ವಿನಾಕಾರಣ/ ಅನುಮಾನಾಸ್ಪದ ಪ್ರಶ್ನೆಗಳಿಂದ ಮೊದಲೇ ಗಾಯವಾಗಿದ್ದ ನಮ್ಮ ಮನಸ್ಸನ್ನು ಮತ್ತೇ ಮತ್ತೇ ಕೆದರೆ ಗಾಯಗೊಳಿಸುತ್ತಿದ್ದರು. ಈ ಸಮಸ್ಯೆಯಿಂದ ಹೊರಬರಲು ಸಾಧ್ಯವಾಗದೆ, ಕಡೆಗೆ ನಮ್ಮ ಊರಿಗೆ ಬರಬೇಕೆಂದು ತುಂಬಾ ಪ್ರಯತ್ನಸಿದೆ. ಆಗಲಿಲ್ಲ ಗರ್ಭವತಿಯ ಹೆಸರಿನಲ್ಲಿ ನಮ್ಮ ಊರಿಗೆ ಬಂದೆ. ಇಲ್ಲಿಗೆ ಬಂದಾಗ ಆರಂಭದಲ್ಲಿ ಶೌಚಾಲಯವಿರಲಿಲ್ಲ. ಆದರೆ ಬಯಲು ಇತ್ತು ಆ ಬಯಲಿಗೆ ಹೋದಾಗ ನೆರೆಯ ಫ್ಯಾಕ್ಟರಿಯ ಕಾರ್ಮಿಕರು ಮತ್ತು ರಸ್ತೆಯ ಬದಿಯಲ್ಲಿ ನಿಲ್ಲುವುದು ಈ ರೀತಿಯಾಗಿ ವರ್ತಿಸುತ್ತಿದ್ದರು. ಈ ಅಮಾನುಷ ವರ್ತನೆಯು ನನ್ನನ್ನು ತೀವ್ರರೀತಿಯ ಹಿಂಸೆಗೆ ನೆಟ್ಟಿತ್ತು. ಸರ್ಕಾರವು ಸಾರ್ವಜನಿಕ ಶೌಚಾಲಯವು ಕಟ್ಟಿಸಿದ್ದು ಅದರ ನಿರ್ವಹಣೆಯು ಹದಗೆಟ್ಟಿದೆ ಮತ್ತು ಅದರಲ್ಲಿ ಶೌಚಾ ಮಾಡಲು ಕೂಡ ಭಯವಾಗುತ್ತದೆ ಏಕೆಂದರೆ ಅದು ರಸ್ತೆ ಬದಿಯಲ್ಲಿದ್ದು ಜನರು ಓಡಾಡುವ ಸ್ಥಳವಾಗಿದೆ. ಮತ್ತು ಒಳಗೆ ಹೋಗಿ ಕುಳಿತರೆ ಅಥವಾ ಏನಾದರೂ ಅಮಾನವೀಯ ಕೃತ್ಯಕ್ಕೆ ಒಳಗಾದರೆ ಹೊರಗಿನವರಿಗೆ ಕೇಳುವುದೇ ಇಲ್ಲ. ಹಾಗಾಗಿ ಅದನ್ನು ಒಳಸುವುದು ಕೂಡ ಭಯವಾಗಿದೆ ಇದಲ್ಲದೆ.

ನಮ್ಮ ಮನೆಯಿಂದ ಒಂದು ಫರ್ಲಾಂಗ್ ದೂರದಲ್ಲಿರುವ ಒಂದು ಹೊಲದಲ್ಲಿ ಶೌಚಾ ಮಾಡಲು ಹೋದರೆ ಆ ಹೋಲದ ಮಾಲೀಕ ಮಾತಾಡದಂತೆ ಮ್ಯಾವಾಗಿ ಬಂಣದು ನಮ್ಮ ಮುಂದೆ ನಿಂತು ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಾರೆ ಮತ್ತು ಎಲ್ಲಿರೆದುರು ನಮ್ಮನ್ನು ಅವಮಾನಿಸುತ್ತಾರೆ. ಹಲವು ಬಾರಿ ಅವರ ಮುಂದೆಯೇ ಶೌಚಾ ಮಾಡಿ ಬಂದ ಸಂದರ್ಭಗಳಿವೆ ಏಕೆಂದರೆ ಆ ಸಂಕಟವು ಅನುಭವಿಸುವವರೆಗೆ ಗೊತ್ತು. ಈ ರೀತಿಯಾಗಿ ನನ್ನ ಗರ್ಭಧಾರಣೆ ಸಂದರ್ಭದಲ್ಲಿ ಹೇಳತೀರದು. ಮಾನಸಿಕ ಸಮಸ್ಯೆಗಳನ್ನು ಅನುಭವಿಸಿದ್ದೇನೆ. ಎಲ್ಲಿ ಹೋಗಬೇಕೋ ಗೊತ್ತಿಲ್ಲ. ತುಂಬಾ ದೂರ ನಡೆಯಲಾರೆ ಅದರಲ್ಲೂ ರಾತ್ರಿ ಹೊತ್ತು ಬಂದರೆ ಸಹಿಸಿಕೊಳ್ಳಲಾಗುವುದಿಲ್ಲ. ಈ ರೀತಿ ಅನೇಕ ಬಾರಿ ಈ ಸಮಸ್ಯೆಯನ್ನು ಯಾರ ಬಳಿ ಹೇಳಿಕೊಳ್ಳಲಾಗದೆ ಹತ್ತಿದ್ದೇನೆ. ಮತ್ತು ಅತೀ ಜಿಗುಪ್ಸೆಗೆ ಒಳಗಾಗಿ ಊಟ ಬಿಟ್ಟು ಹೊಟ್ಟೆ ನೋವು ಬಂದು ಆರೋಗ್ಯದ ಏರುಪೇರು ಕೂಡ ಅನುಭವಿಸಿದ್ದೇನೆ. ನಿಜವಾಗಿಯೂ ಹೇಳತೀರದ್ದಂದರೆ ಒಂದು ಬಾರಿ ಈ ಹೆಣ್ಣಿನ ಜೀವನ ಏತಕೆಂಬುದು ಮನಗಣಿದು ಈ ಜನ್ಮವೇ ಸಾಕೆಂದೆನಿಸಿದೆ. ಅತ್ತ ಸಮಾಜದತ್ತವಾಗಿ ಇತ್ತ ಮನೆಯಕಡೆಯಿಂದ ಬರುವ ಮಾನಸಿಕ ಹಿಂಸೆ/ತೊಳಲಾಟವನ್ನು ಸಹಿಸಲಾಗದೆ ಬೇಸರಪಟ್ಟಿದ್ದು ದಿನಗಳೆಷ್ಟೂ ಲೆಕ್ಕಿಕ್ಕಿಲ್ಲ. ಅಂತೂ ಇಂತು ಸಭಿ ಸಂಸ್ಥೆಯ ನೆವಿನೊಂದಿಗೆ ಇತ್ತೀಚೆಗೆ ನಮ್ಮ ಸಾಲದ ಹಣ ಮತ್ತು ಅಲ್ಪ ಹಣ ಸರ್ಕಾರದ ಕಡೆಯಿಂಝುದ ಸಿಕ್ಕ ಹಣದಲ್ಲಿ ನಾವು ಒಂದು ಸ್ನಾನಗೃಹ ಮತ್ತು ಶೌಚಾಲಯವನ್ನು ಕಟ್ಟಿಕೊಂಡಿದ್ದು ಈಗ ನನ್ನ ಮನಸ್ಸಿಗೆ ನೆಮ್ಮದಿ ತಂದಿದೆ. ಈಗ ಪೂರ್ಣ ಗರ್ಭವತಿಯಾದ ನಾನು ನಡೆಯಲಾಗುವುದಿಲ್ಲ. ಆದ್ದರಿಂದ ಹತ್ತಿರದಲ್ಲಿರುವ ಈ ಶೌಚಾಲಯಗವನ್ನು ಉಪಯೋಗಿಸುತ್ತಿರುವುದರಿಂದ ನನ್ನ ಮನೆಸಿಗೆ ನೆಮ್ಮದಿ ಇದೆ.

# ಮಧ್ಯ ವಯಸ್ಕ ಮಹಿಳೆಯೊಂದಿಗಿನ ಸಂದರ್ಶನ.

**ಹೆಸರು: ದುರ್ಗಮ್ಮ ಮರಿಯಮ್ಮನಹಳ್ಳಿ ಕೂಲಿ ಕಾರ್ಮಿಕರು.**

ಸಾರ್,

ನಾವು ಓದಿಕೊಂಡಿಲ್ಲ ಸಾರ್ ಅಂಗೆಂದ್ರೆ ನಂಗೇನು ಗೊತ್ತಿಲ್ಲ ಸಾರ್, ಯಾಕಂದ್ರೆ ಈ ಸ್ವಚ್ಛತೆ ಅಂದ್ರಾ ನಂಗೆ ತಿಳಿದಿರೋ ಮೆಟ್ಟಕ್ಕೆ ನಮ್ಮನೆ ಸುತ್ತಲೂ ನೀಟಾಗಿರ್ಬೇಕು ಸರ್. ಆಗ ಮಾತ್ರ ನಾವು ಕೂಡಾ ಸಂದಾಗಿರ್ತೀವಿ ಸರ್, ಏಳ್ಬೇಕಂದ್ರ ನಮ್ಮೂರಲ್ಲಿ ತುಂಬಾನೇ ಗಲೀಜಿದೆ ಸರ್, ಯಾಕಂದ್ರ ನಮ್ಗೆ ಶೌಚಾಲಯ ಇಲ್ಲ ಜನ ಎಲ್ಲಾ ಎಲ್ಲಂದ್ರಲ್ಲಿ ಕೂಡ್ತಾರೆ ಮತ್ತು ಗಲೀಜು ಮಾಡ್ತಾರೆ. ಈ ಜನ ಕೂಡ ಹಂಗೆ ಓಡಾಡ್ತಾರೆ ಮತ್ತೇ ನೀರು ತುಂಬಾನೇ ಪ್ಲಾಬ್ಲಮ್ಮು ಸಾರ್, ಯಾಕಂದ್ರೆ ನಮ್ಗೆ 3 ದಿನಕ್ಕೊಂದು ಸಲ ಬರತ್ತೇ ಕುಡಿಯೋ ನೀರು ಮತ್ತೇ ಅದನ್ನು ಪೋಲು ಮಾಡ್ತಾರೆ ನಮ್ಮ ಜನ ಈ ತರ ಇದೆ ಸರ್.

ನಮ್ಮನೆಯಲ್ಲೂ ಶೌಚಾಲಯ ಇಲ್ಲಾ ಸಾರ್, ಯಾಕಂದ್ರ, ನಮ್ಗೆ ಶೌಚಾಲಯ ಬೇಕು ಸಾರ್, ಆದರೆ ಕಟ್ಟಿಸಿಕೊಳ್ಳೋ ತಾಕತ್ತಿಲ್ಲಾ ಸಾರ್ (ಹಣ) ನಮ್ಗೆ ಬಯಲಿಗೆ ಹೋಗೋದು ಸಮಸ್ಯೆ ಸಾರ್ ಯಾಕಂದ್ರೆ ನಮ್ಗೆ ಭಯ ಆಗುತ್ತೆ ಮುಂಜಾನೆ ಹೋಗ್ಬೇಕಾದ್ರೆ ಮತ್ತೆ ಒಂದೊಂದು ಸಲ ನಡುರಾತ್ರಿಲೀ ಹೋಗ್ಬೇಕನ್ಸುತ್ತೆ ಆಗಂತೂ ನಾವು ಸತ್ತಂಗೆ ಎದ್ದು ಹೋಗೋಕಾಗಲ್ಲಾ. ತಡ್ಕೋಳಕ್ಕಾಗಲ್ಲಾ. ನೆಮ್ಮದಿಯಿಂದ ಕೂತು ಬರೋಕಂತೂ ಸ್ಥಳನೇ ಇಲ್ಲ. ನಾವೇನು ಮಾಡುದು ಸಾರ್, ಯಾರೂ ಇಲ್ದೆ ಇರೋ ಜಾಗ ಹುಡುಕಾಡಬೇಕು ಮತ್ತು ಆ ಜಾಗದಲ್ಲಿ ಕೂತಾಗ ಕೂಡ ಭಯ ನೂರು ಬಾರಿ ಸುತ್ಲೂ ನೋಡ್ಬೇಕು ಮತ್ತು ಯಾರನ್ನಾ ಬರ್ತಿದಾರೇನೋ ಅಂಥ ಭಯ, ಒಂದು ಕಡೆ ನಾನು ಎಷ್ಟೋತ್ತು ಆಯಿತು ಮನೆಯಲ್ಲಿ ಏನ್ ಹೇಳೋದು ಅಂತ ಭಯ. ಈ ಕಡೆ ನಾವು ಬಂದಿರೋ ಕೆಲಸ ಪೂರ್ತಿಯಾಗೋಕೋ ಅರ್ಧಗಂಟೆ ಆಗುತ್ತೆ ಯಾಕಂದ್ರೆ ಯಾರೂ ಇಲ್ಲದ ಜಾಗ ನೋಡ್ಬೇಕಂದ್ರ ಮತ್ತು ಅಲ್ಲಿ ಕುಂತರೆ ಒಂಥರ ಭಯ ಅದಲ್ಲದೆ ಮನೆಯಲ್ಲಿ ಯಜಮಾನ್ರು ಕೇಳಿದ್ರೆ ಎಷ್ಟೊತ್ತು ಹೋಗಿದ್ದೆ ಎಲ್ಲಿಗೋಗಿದ್ದೆ, ಎನ್‌ಮಾಡ್ತಿದ್ದೆ ಈ ಥರ ಭಯ ಸಾರ್.

ನೋಡಿ ಒಂಥರ ಹಿಂಸೆ ಭಯ, ಅನುಮಾನ, ಅವಮಾನ, ಈ ಎಲ್ಲಾವನ್ನು ಸಹಿಸಿಕೊಂಡು ನೋಡಬೇಕು ಸಾರ್. ಇದೆಲ್ಲಾ ನೆನಸಿಕೊಂಡ್ರ ಈ ಜೀವನ ಬೇಕಾ ಅನ್ಸುತ್ತೇ ಸಾರ್. ನಂಗೂ ಒಂದು ವಯಸ್ಸಿಗೆ ಬಂದ ಮಗಳಿದ್ದಾಳೆ ಸಾರ್ ಅವಳ್ಗೂ ಈ ತರ ಸಮಸ್ಯೆಗಳಿದಾವೆ ಆದ್ರ ನಾವಾರಿಗೆ ಸಾರ್ ಹೇಳೋದು. ಅವರಪ್ಪ, ನಮ್ಮಜಮಾನ್ರಿಗೆ ಮೊದಲೇ ನನ್ನ ಮೇಲೆ ಅನುಮಾನ, ಬಂದತ್ತು ನಿಮಿಷ ಲೇಟಾಯ್ತುಂದ್ರ ಸಾಕು ತುಂಬಾನೇ ಬೈಯೋದು ಹೊಡಿಯೋದು ಮಾಡ್ತಾರೆ., ಅದಕ್ಕೆ ಅವಳ್ಗೂ ಈ ತರ ಸಮಸ್ಯೆಗಳಿರ್ತಾವೆ. ಆದ್ರೆ ಅವಳು ಹೇಳ್ಕೋಳಲ್ಲಾ ಒಂದ್ವೇಳೆ ಹೇಳ್ಕೋಂಡ್ರು ನಮ್ಮನೇಲಿ ನಂಬಲ್ಲ ಮತ್ತು ನನ್ನನ್ನೇ ಬೈತಾರೆ ಅಂತ ಭಯ. ನನ್ನಥ್ರ ಸುಮಾರ್ ಸಲ ಹೇಳಿದ್ಲು ಅಮ್ಮಾ ಅವರು ಚುಡಾಯಿಸುತ್ತಾರೆ. ಮತ್ತು ಆ ಕಡೆ ಹೋಗಲ್ಲಾ ಶೌಚಾಲಯಕ್ಕೆ ಯಾಕಂದ್ರೆ ಬಿದಿನಾಯಿ ರೌಡಿ, ಹಾವು ಕಾಟ ಅಂತ ಮತ್ತು ಅವಳಿಗೆ ತಿಂಗಳ ಮುಟ್ಟಿನ ಸಮಸ್ಯೆ ಬೇರೆ ಆದ್ರೆ ಇವೆಲ್ಲಾ ನಾನ್ ನಮ್ಮ ಮನೆಯವರ ಹತ್ರ ಒಂದು ಸಲ ಹೇಳ್ದೆ ಆದ್ರೆ ಅದಕ್ಕೆ ಉತ್ತರ ಬೇರೆ ಥರ ಬಂತು ಸಾರ್ ಏನಂದ್ರ, ಯಾರ್ಗೂ ಇಲ್ಲದ ಈ ಸಮಸ್ಯೆಗಳು ನಿಮ್ಗ ಮಾತ್ರ ಯಾಕೆ ಮತ್ತು ನೀವೇನು ಸ್ಪೇಷಲ್ ಏನು ಹೆಂಗಸರಲ್ಲಿ ಅಂದ್ರು ಸಾರ್, ಅದು ಅವಳ ಮುಂದೇನೇ ಅದಕ್ಕೆ ಅವಳು ಕೂಡ ಏನನ್ನೂ ಹೇಳ್ಕೊಳಲ್ಲಾ. ಆದ್ರ ಇಂದಂತೂ ದೊಡ್ಡ ಸಮಸ್ಯೇನೇ ನಮ್ಗೆ ಸಾರ್. ನಾವಂತೂ ನಮ್ಮೀ ಸಮಸ್ಯೇನಾ ನಮ್ಮನೇಳಿ ಹೇಳಿದ್ದಾಯ್ತು ಕೇಳಿದ್ದಾಯ್ತು ಅವರಿಂದ ಈತರ ಉತ್ತ ಸಿಕ್ತು. ಅದಕ್ಕೆ ನಾನು ನನ್ನ ಮಗಳೇನು ಮಾಡ್ತೀವಿ ಅಂದ್ರ ರಾತ್ರಿಲಿ ಊಟ ಮತ್ತು ದಿನದಲ್ಲಿ ನೀರು ಕಡಿಮೆ ಕುಡೀತೀವಿ ಸಾರ್. ಅದಕ್ಕೆ ನಾವು ತುಂಬಾ ಸಲ ಶೌಚಾಲಯಕ್ಕೆ ಹೋಗೀ ಅವಶ್ಯಕತೆ ಇರಲ್ಲಾ. ಸಾರ್ ಮತ್ತೇ ಹೋದಾಗ ಈ ಹಿಂಸೆ ಮತ್ತು ಮನೆಯಲ್ಲಿ ಈ ಅನುಮಾನಗಳೂ ಕೂಡ ಬರಲ್ಲಾ ಸಾರ್, ಅವತ್ತಿಂದ ಸುಮಾರು ಕಷ್ಟ ಅನುಭವಿಸಿದ್ದೀವಿ ಈಗ ಇದೊಂದು ಲೆಕ್ಕಾನಾ ಸಾರ್. ಶೌಚಾಲಯ ಕಟ್ಟೋಕೆ ದುಡ್ಡಿಲ್ಲಾ, ಅನ್ನೊದೊಂದೆ ಸಮಸ್ಯೆ ಅಲ್ಲಾ ಸಾರ್, ಅಗಂದ್ರ ಮನೆಗೇ ಅದೊಂದು ಇದೊಂದು ಮತ್ತು ನಮ್ಮವ್ರ ಮನೆ ಮೇಲೆ ಮನೆ ಕಟ್ಟಿದ್ರು ಆದ್ರ ಶೌಚಾಲಯ ಮಾತ್ರ ಇಲ್ಲ. ಯಾಕಂದ್ರ ಅದರ ಅವಶ್ಯಕತೆ ಇಲ್ಲಾ ಅಂತಾರೆ. ಆದ್ರ ಅದು ನಮ್ಗೆ ಅದು ಬೇಕು ಆದ್ರ ನಮ್ಮ ಬೇಡಿಕೆಗಳಿಗೆ ಮಾನ್ಯತೆ ಇಲ್ಲಾ ಸಾರ್. ಬಯಲಿಗೆ ಹೋದಾಗ ಹಿಂಸೆ ಅಂತೀರಾ ಸಾರ್, ತುಂಬಾನೇ ಹಿಂಸೆ ನಂಗೇನು ಒಬ್ಬಳಿಗೆ ಹೋಗೋಕೆ ಭಯ ಅದರಲ್ಲೂ ಹುಡುಗಿಯರು ಅದಕ್ಕೆ ನಾನು ನನ್ಮಗಳ ಜೊತೆ ಹೋಗ್ತೀನಿ ಆಚೆ ಹೋದಾಗ ಒಂದು ಬಾದೆ ಅಂದ್ರ ಸಾರ್ ನಮ್ಮಜಮಾನ್ರು ನನ್ನನ್ನೇ ಈ ಥರ ಅನುಮಾನ ಮಾಡ್ತಾರೆ. ನಾನೇನು ಮದುವೆ ಆಗಿರೋಳು ಯೋಚ್ನೇ ಇಲ್ಲಾ

ಆದ್ರ ಸಾರ್ ನನ್ಮಗಳನ್ನು ಕೂಡ ನಮ್ಮನೇಯವ್ರು ಅನುಮಾನ ಪಡ್ತಾರೆ ಸಾರ್, ಆಗ ನಂಗಂತೂ ಪ್ರಾಣ ತಗೋಂಡಂತಿರುತ್ತೆ ಸಾರ್ ಯಾಕಂದ್ರ ಅವಳೆ ಸಮಸ್ಯೆ ನನ್ನತ್ರಹೇಳಿರ್ತಾಳೆ ಮತ್ತು ನಾನೇಳಿದಂತೆ ( ಟೈಂ ನಲ್ಲಿ ಹೋಗು ಅಂತ) ಮಾಡ್ತಿರ್ತಾಳೆ ಆದ್ರ ಮನೆಯಲ್ಲಿ ಯಾಕವಳು ಅಲ್ಲಿಗೆನೇ ಹೋಗ್ತಾಳೆ ಯಾಕವಳು ಲೇಟಾಗಿ ಬರ್ತಾಳೆ. ಯಾಕೆ ನಿವಿಬ್ರು ಒಂದೇ ಟೈಂನಲ್ಲಿ ಒಂದೇ ಕಡೆ ಹೋಗ್ತಿದೀರಾ ಏನಕ್ಕೋಸ್ಕರ ಹೋಗ್ತಿದೀರಾ ಯಾರನ್ನ ಮಾತಾಡಿಸೋಕೆ ಹೋಗ್ತಿದೀರಾ ಅಂಥ ಅಸಭ್ಯ ರೀತಿಲಿ ಕೇಳ್ತಾರೆ ಸಾರ್.

ಅದಕ್ಕೆ ಸಾರ್ ನಂಗೇನೂ ಈಗತಿ ಆದ್ರ ನನ್ಮಗಳನ್ನು ಕೂಡಾ ಮನೆಯಲ್ಲಿ ಮಾತ್ರ ಶೌಚಾಲಯ ಇರ್ಲೇಬೇಕು ಸಾರ್. ಯಾಕಂದ್ರೆ ಶೌಚಾಲಯ ಇಲ್ಲಾ ಅಂದ್ರ ಪಡೋ ಕಷ್ಟ ನಂಗೊತ್ತು ಸಾರ್. ನಾನು ಅನುಭವಿಸುತ್ತಾ ಇದ್ದೀನಿ ಅದಕ್ಕೆ ಅವಳ್ನ ಕೋಡೋ ಮನೇಲಿ ಮಾತ್ರ ಶೌಚಾಲಯ ಇರ್ಬೇಕು ಅನ್ನೋದು ನನ್ನ ಆಸೆ ಸಾರ್.



Community Health Library and Information Centre
SOPHEA-SOCHARA
Koramangala
Bangalore - 34
★ (CLIC) ★
E-140
16716

## ಮಧ್ಯಸ್ಥ ವಯಸ್ಕ ಮಹಿಳೆಯೊಂದಿಗಿನ ಸಂದರ್ಶನ

**ಹುಲಿಗೆಮ್ಮ ಮರಿಯಮ್ಮನಹಳ್ಳಿ ಕೂಲಿ ಕಾರ್ಮಿಕ ಮಹಿಳೆ**

ಸ್ವಾಮಿ ನಾನು 48 ವರ್ಷಗಳಿಂದ ಈ ಊರಲ್ಲಿ ಇದ್ದೀನಿ ಅವತ್ತಿಂದ ಕೂಡ ನಮ್ಮನೇಲಿ ಶೌಚಾಲಯ ಇಲ್ಲ ಸ್ವಾಮಿ.

- ನಾವೆಲ್ಲಾ ಬಯಲಿಗೆ ಹೋಗ್ತೀವಿ ಸ್ವಾಮಿ.
- ಅದು ನಮ್ಮನೆಯಿಂದ ಅರ್ಧ ಕಿಲೋಮಿಟರ್ ಸ್ವಾಮಿ ಇದು ಒಂಥರ ಸಿಟಿ ಇದ್ದಂಗಲ್ವಾ ಅದಕ್ಕೆ.
- ನಾವೆಲ್ಲಾ ಬೆಳಿಗ್ಗೆ ಮತ್ತು ಸಾಯಂಕಾಲ ಹೋಗ್ತೀವಿ ಸ್ವಾಮಿ
- ಯಾಕಂದ್ರ ಆ ಟೈಂನಲ್ಲಿ ಜನರ ಓಡಾಟ ಕೂಡ ಕಡಿಮೆ ಇರುತ್ತೇ ಮ್ತು ನಾವು ಸಹ ಕೆಲಸ ಎಲ್ಲಿ ಮುಗಿಸಿರ್ತೀವಿ ಮನೇಲಿ ಅದಕ್ಕೆ.
- ಒಂದ್ವೇಳೆ ಮಧ್ಯಾಹ್ನದಲ್ಲಿ ಹೋಗ್ಬೇಕು ಅಂತಂದ್ರ ಹೋಗ್ತೀವಿ ಆದ್ರ ಸ್ವಲ್ಪ ಮುಜುಗರ ಆಗುತ್ತೆ ಯಾಕಂದ್ರ ಗಂಡಸರು ಜಾಸ್ತಿ ಅಡ್ಡಾಡ್ತಿತ್ತಾರೆ. ಆಕಡೆ ಈ ಕಡೆ ಅದಕ್ಕೆ.
- ಬೆಳಗಿನ ಜಾವ 7.30 & ಗಂಟೆಗೆ ಯಾಕಂದ್ರ ಅದೇ ಟೈಂಗೆ ನಮ್ಗೆ ಬರೋದು ಯಾಕಂದ್ರ ರಾತ್ರೀಲಿ ಊಟ ಲೇಟಾಗಿ ತಿಂತೀವಿ.
- ಯಾಕಂದ್ರ ರಾತ್ರಿ ಎಷ್ಟು ಬೇಗ ಊಟ ಮಾಡಿದ್ರೆ, ಬೆಳಿಗ್ಗೆ ಅಷ್ಟು ಬೇಗ ಶೌಚಾಲಯಕ್ಕೆ ಹೋಗ್ಬೇಕಾಗಿ ಬರುತ್ತೆ ಅದಕ್ಕೆ ಲೇಟಾಗಿ ಊಟ ಮಾಡ್ತೀವಿ.
- ಒಂದ್ವೇಳೆ ಬೇಗ ಬಂದ್ರ ಕಷ್ಟ ಯಾಕಂದ್ರೆ ಮುಂಜಾನೆ ಸ್ವಲ್ಪ ಕತ್ತಲು ಮತ್ತು ಗಂಡಸರು ಕೂಡ ಅದೇ ಟೈಂನಲ್ಲಿ ಹೋಗಿರ್ತಾರೆ ಮತ್ತು ಕತ್ತಲಲ್ಲಿ ಹೆಂಗಸರು ಭಯ ಅಲ್ವಾ.
- ಯಾವ ರೀತಿ ಭಯ ಅಂದ್ರೆ ಗಂಡಸರ ನಡುವೆ ಹೋಗೋಕು ಕೂರೋಕು ಭಯ ಯಾರೇನು ಮಾಡ್ತಾರೋ ಅಂತ ಮತ್ತೆ ಕತ್ಲಲ್ಲಿ ಏನೇನು ಕಡಿದರೆ ಅಂತ ಭಯ.

- ಒಂದ್ವೇಳೆ ಹೋಗ್ಬೇಕಂದ್ರ ಯಾರನ್ನಾದ್ರೂ ಜೊತೆಗೆ ಕರ್ಕೊಂಡು ಹೋಗ್ತೀವಿ ಮತ್ತು ಯಾರೂ ಇಲ್ಲದ ಜಾಗಕ್ಕ ಹೋಗ್ತೀವಿ.

- ಶೌಚಾಲಯ ಯಾಕೆ ಕಟ್ಟಿಕೊಂಡಿಲ್ಲಾ ಅಂದ್ರ ನಾವು ಬಡವರು ಮತ್ತೇ ಹಣಕಾಸಿಲ್ಲಾ ಸ್ವಾಮಿ, ಅದರಲ್ಲೂ ಕಳೆದ ವರ್ಷಗಳೆಲ್ಲಾ ಅದೇ ರೀತಿ ಆಚೆ ಕಡೆ ಹೋಗ್ತೀವಿ ಈಗ್ಲೂ ಅಷ್ಟೇ.

- ನಮ್ಮನೇಲಿ ನನ್ನ ಮಗಳು ಮತ್ತು ಮೊಮ್ಮಕ್ಕಳು ಕೂಡಾ ಇದಾರೆ ಅವ್ರು ಕೂಡ ಆಚೆಗೆ ಹೋಗ್ತಾರೆ.

- ಅವರಿಗೆ ಕಷ್ಟ ಅಂತ ನನ್ನತ್ರ ಮತ್ತು ಮನೆಯಲ್ಲಿ ಹೇಳಿದ್ರು ಆದ್ರ ನಾವೇನು ಮಾಡೋದು ನಮ್ಮತ್ರ ದುಡ್ಡಿಲ್ಲಾ ಅದು ಬೇರೆ ನಾವು ಮನೆಯಲ್ಲಿ ಪೂಜೆ ಪುರಸ್ಕಾರ ಮಾಡ್ತೀವಲ್ಲಾ ಅದಕ್ಕೆ ಗಲೀಜು ಅಂತಾ ಭಾವಿಸ್ತೀವಿ. ಸ್ವಾಮಿ ಯಾಕಂದ್ರ ಶೌಚಾಲಯ ಮನೆ ಹತ್ರ ಇದ್ರೆ ಹೋಗ್ಲಬೇಕು. ಮತ್ತೆ ಅದು ಹೊಲಸು ತರ ಅಲ್ವಾ ಅದನ್ನು ಯಾಕೆ ಪೂಜೆ ಮಾಡೋ ಸ್ಥಳದಲ್ಲಿ ಅಂತ ಅನ್ಸುತ್ತೇ.,

- ನಮ್ಮನೇಲಿ ನನ್ಮಗ ಮತ್ತೆ ನಮ್ಮಜಮಾನ್ರು ಕೂಡಾ ಅದೇ ಹೇಳ್ತೀವಿ ಈ ಮಲಮೂತ್ರಗಳೆಲ್ಲಾ ಮನೆಯಿಂದ ಮತ್ತು ಊರಿನಿಂದ ದೂರ ಇರಬೇಕು ಅದು ನಮ್ಮ ಸಂಪ್ರದಾಯ ಅಲ್ವಾ ಮತ್ತೆ ಒಂದ್ವೇಳೆ ಮನೆಯಿಂದ ದೂರ ಕಟ್ಟಿಸ್ಬೇಕಂದ್ರ ತಮಾಸೇನಾ, ಸುಮಾರು 10 ಸಾವಿರ ಬೇಕಾಗುತ್ತೇ ಸ್ವಾಮಿ, ಅಷ್ಟು ದುಡ್ಡಿ ನಮ್ಮತ್ರ ಇಲ್ಲಾ ಅದಕ್ಕೆ 5 ನಿಮಿಷದ ಕೆಲಸಕ್ಕೆ ಯಾಕೆ ದುಡ್ಡು ರಂಪಾಟ ಅಂತಾ ಬಯಲಿಗೆ ಹೋಗ್ತೀವಿ.

- ನಾವು ಕೇಳಿದ್ವಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮತ್ತು ದೌರ್ಜನ್ಯಗಳು ಅದ್ರೆ ಅವು ನಡೀತಾವೆ ಯಾಕಂದ್ರೆ ಗಂಡಸರು ತುಂಬಾನೇ ಅದೇ ಥ್ರ ನೋಡ್ತಾರೆ ಮಹಿಳೆಯರನ್ನ ಅದ್ರ ಆಗಂತ ನಾವೂ ಎಚ್ಚರದಿಂದ ಇದ್ರೆ ಆಗಲ್ವಲ್ಲಾ.

ತುಂಬಾ ಸಲ ನನ್ನ ಮಗಳೂ ನಂಗೆ ಹೇಳಿದ್ಲು ಅಮ್ಮಾ ನಾನು ಬಯಲಿಗೆ ಹೋಗಲ್ಲಾ ಯಾಕಂದ್ರೆ ನಂಗೆ ಭಯ ಆಗುತ್ತೆ ಅಂತ ಯಾಕಂದ್ರೆ ಹುಡುಗರೂ, ಗಂಡಸರು ನೋಡ್ತಿರ್ತಾರೆ ಅಂತ ಅವರು ನೋಡ್ತಾರೆ ಇವರು ನೋಡ್ತಾರೆ ಅಂತ ನಮ್ಮ ಕೆಲಸ ಬಿಡಿಸುತ್ತಾರೇನು ಎಲ್ಲೋ ಅಲ್ಲಿ ಕುಳೀತು ಬರ್ಬೇಕು ಅಂತ ಹೇಳ್ತೀನಿ. ಯಾಕಂದ್ರೆ ಸಮಸ್ಯೆಗಳು ತುಂಬಾ ಸ್ವಾಮಿ ಆದ್ರ ನಾವ್ಯಾತರ ಬದುಕ್ಬೇಕು ಅಂತ ತಿಳ್ಕೋಬೇಕು.

ಶೌಚಾಲಯ ಇಲ್ಲದೆ ಇರೋದಿಂದ್ರ ತುಂಬಾ ಸಮಸ್ಯೆ ಇದೆ ಯಾಕಂದ್ರ ಮಹಿಳೆಯರಿಗೆ ಆದ್ರ ಅವರು ಎಲ್ಲರ ತರ ಆಚೆ ಕಡೆ ಹೋಗೋಕೆ ಆಗಲ್ಲಾ ಅಂಏಳಿ ನಮ್ಮ ಪರಿಸ್ಥಿತೀನೂ ಅರ್ಥ ಮಾಡ್ಕೊಬೇಕು ಅಲ್ವಾ, ನಿವಂದಂಗೆ ಯಾವುದನ್ನಾ ಒಂದು ಕಡಿಮೆ ಮಾಡಿ ಮನೆನಲ್ಲಿ ಶೌಚಾಲಯ ಕಟ್ಟಿಸ್ಕೋಬೇಕು. ಅದಕ್ಕೆ ಮನೆನಲ್ಲಿ ದೊಡ್ಡವರು ಗಂಡಸರು (ಯಜಮಾನ್ರು) ಕೇಳೋದಿಲ್ಲಾ. ಮನೆಯಲ್ಲಿ ಹೊಸ ರೀತಿ ಬೆಳವಣಿಗೆ ಅಂತಾ ಬೈತಾರೆ ಅದು ತಿಳಿದ್ರೆ ಪಕ್ಕದ ಮನೆಯಷ್ಟ್ರಿಗೆ ಬೇಜಾರು ಅಲ್ವಾ ಅದೇ ಸಮಸ್ಯೆ ನಾವೇನೋ ಅನುಭವಿಸ್ತೀವಿ ಆದ್ರ ಗಂಡಸರತ್ರ ಹೇಳೋಕೆ ಬೇಜಾರಲ್ವ ಒಂದ್ವೇಳೆ ಹೇಳಿದ್ರು ಸಂಪ್ರದಾಯ ಸಂಸ್ಕೃತಿ ಅಂತಾರೆ ಅದಕ್ಕೆ ನಾವು ಕೂಡ ಸುಮ್ಮನಾಗಿದ್ದೀವಿ. ನಮ್ಗೂ ಗೊತ್ತು ಸಾರ್ ಶೌಚಾಲಯ ಇಲ್ಲದ್ದರಿಂದ ನಾವು ಮತ್ತು ತುಂಬಾ ಮಹಿಳೆಯರೂ ಕಷ್ಟ ಅನುಭವಿಸ್ತಾ ಇದಾರೆ. ಆದ್ರ ಏನು ಮಾಡಲು ಸಾಧ್ಯ ಹೇಳಿ. ಬಯಲಿಗೇನೂ ಈ ಸಮಸ್ಯೆ ಮನೆಯಲ್ಲಿ ನೋಡಿದ್ರೆ ಈ ಸಮಸ್ಯೆ ಈ ಪರಿಸ್ಥಿತೀಲಿ ಯಾರಿಗೆ ಹೇಳೋಣ ಏನು ಮಾಡೋಣ ಅದಕ್ಕೆ  ಏನು ಮಾಡೋಕ್ಕಾಗಲ್ಲಾ ಅಂತ ನಾವೇ ಸುಮ್ಮನಾಗಿದ್ದೀವಿ ಸಾರ್.

ನಮ್ಮೂರಲ್ಲೂ ಸಮುದಾಯ ಶೌಚಾಲಯ ಇದೆ. ಆದ್ರೆ ಅಲ್ಲೂ ಇದೆ. ಭಯ ನಮ್ಗೆ, ಯಾಕಂದ್ರೆ, ಗಂಡಸರು, ಅದು ಊರಿಗೆ ಆಚೆ ಕತ್ತಲಲ್ಲಿ ಹೋಗೋಕೆ ಭಯ, ಅದರಲ್ಲೂ ಬೇರೆ ಆ ಸಮುದಾಯ ಶೌಚಾಲಯ ಪಾಳು ಬಿದ್ದಿದೆ. ಅದರಲ್ಲಿ ಗಿಡಗಳು ಮತ್ತು ಹಾವುಗಳು ಇವೆ ಒಳಗೆ ಹೋಕ್ಕಂತೂ ಆಗೋದೇ ಇಲ್ಲಾ ಅಂತ ಸ್ಥಿತೀಲಿ ಏನ್ ಮಾಡೋದು ಹೇಳಿ. ಅಂತೂ ಶೌಚಾಲಯ ಇಲ್ಲದೇ ಇರೋದ್ರಿಂದ ತುಂಬಾನೇ ಹಿಂಸೆ ಸಾರ್ ಮಹಿಳೆಗೆ ಹೆಣ್ಣುಮಕ್ಕಳಿಗೆ ಅದು ಹೇಳ್ಕೊಳೋಕ್ಕಾಗಲ್ಲಾ, ಅನುಭವಿಸೋಕ್ಕಾಗಲ್ಲಾ, ಆ ಸ್ಥಿತೀನಾ ಸಾರ್.

## ಮಧ್ಯಮ ವಯಸ್ಕ ಮಹಿಳೆಯೊಂದಿಗಿನ ಸಂದರ್ಶನ

**ಹೆಸರು; ಪದ್ಮಾವತಿ ಮರಿಯಮ್ಮನಹಳ್ಳಿ**

ಸಾರ್ ನಾವು ಮೊದಲು ನಾವು ಹೊಸಪ್ಯಾಟೆಯಾಗ ಇದ್ವಿ ಈಗ ಮರಿಯಮ್ಮನಹ ಹಳ್ಳೀಲಿ ಇದೀವಿ. ನಮ್ಗೆ ತುಂಬಾನೇ ಕಷ್ಟ ಆಗ್ತಿತ್ತು ಪ್ಯಾಟಿನಲ್ಲಿ ಅದಕ್ಕೆ ಹಳ್ಳಿಗಿ ಬಂದ್ವಿ. ಇಲಾದ್ರ ಜನ ಸ್ವಲ್ಪ ಸರಿಸಿಕೊಂಡ್ತಾರಾ ಅಲ್ಲಿ ಪಕ್ಕದ್ಮನೆಯವ್ರೂ ಕೂಡ ತಿರಿಗಿನೋಡಲ್ಲಾ ಸಾರ್. ಸರ್ ಪ್ಯಾಟೆಯಲ್ಲಿ ನೀರು ಸರೀಗಾ ಬರ್ತಿರ್ಲಿಲ್ಲಾ ಆದ್ರ ಇಲ್ಲಿ ಕೂಡ ಅದೆ ಸಮಸ್ಯೆ ಆದ್ರ ಸರ್ ಇಲ್ಲಿ ಸ್ವಲ್ಪ ಕಷ್ಟ ಆಗ್ತೀತಿ ಆದ್ರ ಪರವಾಗಿಲ್ಲ ಎಂಗೋ ಜೀವನ ಆಗ್ತೈತಿ.

- ಸಮಸ್ಯೆಗಳಾಂದ್ರ ಸಾರ್ ನೀರು ಬರಲ್ಲಾ ಸರ್ಯಾಗಿ ಸರ್ ಅಷ್ಟೆ
- ಶೌಚಾಲಯ ಇಲ್ಲಾ ಸರ್ ನಮ್ಗೆ ಯಾಕಂದ್ರ ನಾವೆಲ್ಲಿ ಕಟ್ಟಿಸ್ಕೋಲ್ಲೋದಿಕ್ಕೆ ಹಣ ಇಲ್ಲಾ ಮತ್ತೆ ಅದರ ಅವಶ್ಯಕತೆ ಕೂಡ ಇಲ್ಲ ಸಾರ್, ಯಾಕಂದ್ರಾ ಎಲ್ಲರೂ ಆಚೆಕಡೆ (ಬಯಲಿಗೆ) ಹೋಗ್ತಿದ್ದೀವಿ ಅಂತ್ರದಲ್ಲಿ ಯಾಕೇ ಶೌಚಾಲಯ ಸರ.
- ಯಾವ ಟೈಂನಲ್ಲಿಂದ್ರಾ ಬೆಳಿಗ್ಗೆ ಹೋಗ್ತೀವಿ ಮತ್ತು ಸಾಯಂಕಾಲ ಜಾಸ್ತಿ ಹೋಗ್ತೀವಿ ಸರ್.
- ನಮ್ಮ ನೀಲಿ ನನ್ಮಗಳು ಅವಳಿಗೆ 47 ವರ್ಷ ಆಗಿದೆ. ಅವಳೂ ಕೂಡ ಬಯಲಿಗೆ ಹೋಕ್ತಾಳೆ ಸರ್. ಒಂದ್ವೇಳೆ ರಾತ್ರೀಲಿ ಹೋಗ್ಬೇಕಂದ್ರಾ ಭಯ ಅಗ್ತೈತಿ ಸರ್ ಯಾಕಂದ್ರ ಕತ್ಲಾಗ ಭಯ ಅಲ್ಲೇನ್ರಿ ಸರ್.

ಅದೂ ಬ್ಯಾರ ಊರಿನಾಚೆಗೆ ನಮ್ಮೂರತ್ರ ತುಂಬಾ ಕಳ್ರು ಸರ್ ಮತ್ತೆ ಅದರಲ್ಲೂ ಈ ಬೀದಿನಾಯಿಗಳ ಕಾಟ ಜಾಸ್ತಿ ಬೆಳಗ್ಗೇನೆ ನಾವೋಗ್ಬೇಕು ಅವು ಗೋಳೋ ಅಂತ್ರ ಬೋಗಳ್ತಾವೆ ಸರ್ ಆಗ ನಮ್ಗಂತೂ ತುಂಬಾನೆ ಭಯ ಅಗ್ತೈತಿ ರೀ ಕಚ್ತಾವೇನೋ ಅಂತ. ಅದಕ್ಕೇನೂ ಶೌಚಾಲಯ ಬೇಡ್ರಿ ಆದ್ರ ಮನೇಲಿ ಕಟ್ಬಿಲ್ಲಾರೀ ಏಕಂದ್ರಾ ಅದು ಮನೆಹತ್ರ ಬ್ಯಾಡಂತಾರ್ರಿ ಯಾಕಂದ್ರ ಮನೆ ಹತ್ರ ಮಲಮೂತ್ರಯಾಕಂತ.

ನಮಗಂತೂ ಶೌಚಾಲಯ ಬೇಕೆನ್ನುತ್ತೇ ರೀ ಆದ್ರ ಮನೇಲಿ ಯಜಮಾನ್ರು ಕಟ್ಸೋಕೆ ಹಿಂದೆ ಮುಂದೆ ನೋಡ್ತಾರೀ ಯಾಕಂದ್ರಾ ಬಡತನ. ಅದೇನು ದೊಡ್ಡ ಸಮಸ್ಯೆನೇ ಅಲ್ಲಾ ಬೆಳಿಗ್ಗೆ ಒಂದೊತ್ತಾ ಹೋಗಿ ಬರೋಕೆ ಯಾಕೆ ರಾದ್ದಾಂತ ಅಂತಾರ್ರೀ. ನಾವು ಒಂದು ಸಲ ಕೇಳಿದ್ವಿ ನಮ್ಮವರ್ನ ರೀ ನಾವು ಆಚೆಗೆ ಹೋಗೋಕೆ ಭಯ ಅಗ್ತೈತಿ ಮತ್ತೆ ತುಂಬಾ ಹಿಂಸೆ ಅಗ್ತೈತಿ ಅಂತ ಅದಕ್ಕೆ ಒಂದು ಲೆಟ್ರಿನ್ ಕಟ್ಸೋಣ ಅಂತ ಅದಕ್ಕೆ ಅವ್ರು ನಾವೆಲ್ಲಾ ತುಂಬಾ ವರ್ಷಗಳಿಂದ ಬಯಲಿಗೇನೆ ಹೋಗ್ತಿದೀವಿ ಯಾರ್ಗೂ ಈ ಸಮಸ್ಯೆ ಬಂದಿಲ್ಲಾ ಮತ್ತೇ ಯಾರೂ ಈ ಥರ ಮಾತಾಡಿಲ್ಲ. ನಿಮ್ಗೆ ಮಾತ್ರ ಯಾಕೋ ಸಮಸ್ಯೆ ಅನ್ಸುತ್ತೆ ಯಾಕೆ ಸುಮ್ನೆ ನಿನ್ನಪಾಡಿಗೆ ನೀನು ಬಯಲಿಗೆ ಹೋಗಿ ಬಾ ಅಷ್ಟೆ ಏನು ಊರಲ್ಲಿ ನೀನೊಬ್ಬಳೆ ಹೆಂಗಸು ಯಾರನ್ನಾ ಇದ್ರೆ ತಾನೆ ಹೋಗೆ ಸುಮ್ನೆ ಅಂತ ಬೈದ್ರು ಸರ್. ಅದಕ್ಕೆ ನಾವು ಸುಮ್ನೆ ಅಗ್ಬಿಟ್ವಿ ನನ್ಮಗಳೂ ಸುಮ್ನೆ ಹೋಗಿ ಬರ್ತಾಳೆ ಆದ್ರ ಅವಳು ಮಾತ್ರ ತುಂಬಾ ಸಲನೇ ಬಯಲಿಗೆ ಹೋಗೋಕೆ ಬೇಜಾರಂದ್ಲು ಆದ್ರೆ ಏನು ಮಾಡೋದು ಸಾರ್. ನಂಗೇನೂ ಗೊತ್ತು ಅವಳ ಬಾದೆ ಆದ್ರ ಮನೇಲಿ ಇರೋ ದೊಡ್ಡೋರ್ಗೆ ನಾನು ಯಾಂಕೆ ಹೇಳ್ಳಿ ಒಂದ್ವೇಳೆ ಹೇಳಿದ್ರು ಈ ಥರ ಅಂತಾರೆ. ಅದಕ್ಕೆ ನಾನವಳಿಗೆ ಹೇಳ್ದೀನಿ ಯಾರೂ ಇಲ್ದೆ ಇರೋವಾಗ ಮತ್ತೆ ಹುಷಾರಾಗಿ ಹೋಗ್ಬಾ ಮತ್ತೆ ಕೆಲವು ಸಲ ನಾವು ಆಬಿಗಿ ಹೋಗ್ತೀವಿ ಅವಳ್ನ ಕರ್ಕೊಂಡು. ನಂಗೆ ಒಂದ್ಸಲ ಬೇದಿ ಆಗಿತ್ತು ಸರ್ ಅವತ್ತು ನಾನು ಕೂಡಾ ತುಂಬಾ ಕಷ್ಟಪಟ್ಟಿದ್ದೀನಿ ಸಾರ್ ಯಾಕಂದ್ರ ಅವತ್ತು ಸುಮಾರಂದ್ರು 300 ಸಲ ಹೋಗಿದ್ದೀನಿ ಸರ್ ಬಯಲಿಗೆ ಕೊನೆಗಂತೂ ನೀರತ್ರ ಹೋಗಿ ಕೊತ್ಕೊಂಡು ಇದ್ಬಿಟ್ಟೆ. ಅದಂತೂ ತುಂಬಾ ದೊಡ್ಡ ಬಾದೆ ಆಗಿತ್ತು ನಂಗೆ ಆ ದಿನ ಯಾಕಂದ್ರಾ ಸಾರ್, ನಂಗೆ ನೋಡಿದ್ರೆ ಹೊಟ್ಟೆ ನೋವು ಬೇರೆ ಮತ್ತೆ ಪದೇ ಪದೇ ಹೋಗ್ಬೇಕು ಅನ್ಸುತ್ತೆ ಅಲ್ಲಿ ನೋಡಿದ್ರೆ ಸುತ್ತಲೂ ಜನ ಓಡಾಡೋ ಜಾಗ ಅದು ನಾಹೆಂಗಪ್ಪ ಅಲ್ಲಿ ಕೂರ್ಲಿ ಅಂಥ ಒಂದು ಯೋಚ್ನೆ ಆದ್ರ ವಿಧಿಯಿಲ್ಲಾ ಕೂರ್ಲೇಬೇಕು ಇಲ್ಲಂದ್ರೆ ಕಷ್ಟ ತುಂಬಾ ಸಲ ವಿಶೇಷವಾಗಿ ಅವತ್ತಂತೂ ನಾನು ತುಂಬಾನೇ ಕಷ್ಟ ಪಟ್ಟಿದ್ದೀನಿ ಮತ್ತು ಯಾರನ್ನಾ ಬರ್ಲಿ ನನ್ನ ಸಂಕಟ ನಂಗೆ ಗೊತ್ತು ಅಂಥ ಸುಮ್ನೆ ಕೂತಿದ್ದೀವಿ ಸರ್ ನಿಜವಾಗ್ಲೂ ಅವತ್ತು ಇಬ್ಬರು ಗಂಡಸರು ನನ್ನನ್ನು ನೋಡಿ ನಕ್ಕೊಂಡು ಮತ್ತು ಛೇಡಿಸ್ಕೊಂಡು ಹೋದ್ರು ಆದ್ರೂ ನಾನು ತಿರಿಗಿಕೂಡ ಅವರ್ಕಡೆ ನೋಡಿಲ್ಲಾ ಯಾಕಂದ್ರಾ ನೋಡಿದ್ರಾ ಅದು ಮತ್ತೆ ನಮ್ಗೆ ಅವಮಾನ. ಅದಕ್ಕೆ ನಾವು ಸುಮ್ನೆ ಕೂರ್ತಿದ್ವಿ, ಇದನ್ನೆಲ್ಲಾ ನಮ್ಮನೇಲಿ ಹೇಳೋಕೆ ಆಗಲ್ಲಾ ಸಾರ್ ಒಂದ್ವೇಳೆ ಹೇಳಿದ್ರೆ ನಮ್ಮನೆವ್ರು ನನ್ನನ್ನುಜ ನೋಡೋ ರೀತಿ ಬೇರೆ ಇರುತ್ತೆ ಸಾರ್.

ನಂಗೊತ್ತು ಈ ಥರ ಸಮಸ್ಯೆ ನನ್ನ ಮಗಳಿಗೂ ಆಗುತ್ತೆ ಅಂತ ಅದಕ್ಕೆ ನಾನು ಅವಳ ಜೊತೆಗೆ ಹೋಗ್ತೀನಿ ಮತ್ತು ಹುಷಾರಾಗಿರು ಅಂತೀನಿ ಸರ್. ನಾವು ಕೂಡ ಕೇಳಿದ್ವಿ ಸಾರ್ ಪಕ್ಕದೂರಲ್ಲಿ ಅಂಗೆ ಹುಡುಗಿ ಮೇಲೆ ಅತ್ಯಾಚಾರ ಆಯ್ತಂತೆ ಅಂತ ಈ ಥರ ಘಟನೆಗಳನ್ನ ಕೇಳ್ಳಿದ್ವೀ ನಮ್ಮನೆ ಗಂಡಸ್ರು ಕೇಳ್ತಾರೆ. ಆದ್ರೆ ಆಕೆ ಯಾಕೆ ಆ ಟೈಂನಲ್ಲಿ ಹೋಗ್ಬೇಕು ಅಂತ ಅನ್ನೂತ್ತಾರರೆ ಸಾರ್. ಮತ್ತೇ ಅವಳಿದೇನೂ ಇಲ್ದೇನೋ ಅವ್ರು ಅಷ್ಟೊಂದು ಸಾಹಸ ಮಾಡ್ತಾರೇನು ಅಂತಹ ಯೋಚ್ನೆ ಮಾಡ್ತಾರೆ ಸರ್. ನಿಜವಾಗಲ್ಲೂ ಹೇಳ್ಬೇಕಂದ್ರ ನಮ್ಮಡಿಗೀನ ಯಾರಾದ್ರೂ ಚುಡಾಯಿಸ್ತಿದ್ದಾರೆ ಅಂದ್ರ ಅವರ್‍ಮೇಲೆ ಬೇಕಾದ್ರೆ ಕೇಸಾಕ್ತಾರೆ ಮತ್ತೆ ಗಲಾಟೆ ಮಾಡ್ತಾರೆ. ಆದ್ರ ಲೇಟ್ರೀನ್ ಮಾತ್ರ ಕಟ್ಟಿಸ್ಕೋಳೊಲ್ಲಾ ಸಾರ್. ಯಾಕೋ ಅವರ ಯೋಚನೆನೇ ಅಂಗೆ ಸಾರ್ ಅದರಲ್ಲೂ ನಮ್ಮಂಥ ಹೆಂಗಸ್ರು ಅವರಿಗೆ ಎದುರು ಮಾತಾಡೋಕು ಭಯ ಯಾಕಂದ್ರ ಮನೇಲಿ ಹಂಗಿರುತ್ತೆ ಸಾರ್. ಒಟ್ಟಾರೆ ಶೌಚಾಲಯ ನಮ್ಗೆ (ಹೆಂಗಸರಿಗೆ ) ಬೇಕು ಆದ್ರರ ಮನೇಲಿ ಕಟ್ಸಲ್ಲಾ ನಾವೇನ್ಮಾಡಲೀ.

## ವಿಕಲಚೇತನ ಮಹಿಳೆಯೊಂದಿಗೆ ಸಂದರ್ಶನ:

**ಹೆಸರು : ಶಾಂತಮ್ಮ ನಾಗೇನಹಳ್ಳಿ**

ಪ್ರಸ್ತುತ ನಾನು ಕೂಲಿಕಾರ್ಮಿಕರ ಮನೆಗೆ ಸೇರಿದ್ದು ನನ್ನ ವಿದ್ಯಾಭ್ಯಾಸ 10ನೇ ತರಗತಿಯಾಗಿದೆ. ನನಗೆ ಹುಟ್ಟಿನಿಂದ ಅಂಗವೈಕಲ್ಯ ಸಮಸ್ಯೆ ಇದೆ. ಆದರೆ ನಾನೆಂದೂ ಅಂಗವಿಕಲಳೆಂದು ಅಂದುಕೊಂಡಿಲ್ಲಾ ಯಾಕಂದರೆ ನನ್ನ ಕುಟುಂಬ ಮತ್ತು ಸ್ನೇಹಿತರು ನನ್ನೊಡನೆ ಸ್ನೇಹದಿಂದ ಕೂಡುತ್ತಿದ್ದರು. ಅದಲ್ಲದೆ ನಾನು ಎಲ್ಲಿ ಬೇಕಾದರೂ ಸ್ವತಂತ್ರಳಾಗಿ ಹೋಗುತ್ತಿದ್ದೇನೆ. ಆದರೆ ಇತ್ತೀಚೆಗೆ ನಾನು ತುಂಬಾ ಭಯಪಡುತ್ತಿದ್ದೇನೆ. ಮತ್ತು ತುಂಬಾ ನೋಂದಿದ್ದೇನೆ. ಯಾಕೆಂದರೆ ನನ್ನ ದೈನಂದಿನ ಸ್ಥಿತಿ (ಕೆಲಸಕಾರ್ಯಗಳು) ತುಂಬಾ ಚಿಂತಾಜನಕವಾಗಿದೆ ಮತ್ತು ತುಂಬಾ ಶೋಚನೀಯವಾಗಿದೆ. ಇತ್ತೀಚೆಗಂತೂ ನನ್ನ ದಿನನಿತ್ಯ ಕೆಲಸಕಾರ್ಯಗಳನ್ನು ಮಾಡುವುದು ನನಗೆ ತುಂಬಾ ತೊಂದರೆಯಾಗಿದೆ. ಮೊದಲೇ ಅಂಗವಿಕಲಳಾದ ನಾನು ಎದ್ದು ಹೊರಗಡೆ ಹೋಗಲು ಸಾಧ್ಯವಿಲ್ಲ. ಬೇರೊಬ್ಬರ ಸಹಾಯ ಬೇಕೇಬೇಕು ಮತ್ತು ಅವರ ನೆರವಿಲ್ಲದೆ ನಾನೇನು ಮಾಡಲು ಸಾಧ್ಯವಿಲ್ಲವೆಂಬ ಭಾವನೆ ಅದರಲ್ಲಿ ಮತ್ತೆ ಒಂದು ಖಿನ್ನತೆ ನನ್ನಲ್ಲಿ ಕೂಡ ಮನೆ ಮಾಡಿದೆ.

ಇದಕ್ಕೆ ಕಾರಣ ನನ್ನ ಶೌಚದ ಸ್ಥಿತಿ ಈ ಕೆಲಸವಂತೂ ನನಗೆ ನನ್ನ ಮನಸ್ಸಿಗೆ ತೀವ್ರ ರೀತಿಯ ಮುಳುವಾಗಿದೆ. ಒಂದೇ ಕಡೆ ಕೋರುವ ನಾನು ಹಲವು ಬಾರಿ ಶೌಚಾಲಯಕ್ಕೆ ಹೋಗುವ ಸ್ಥಿತಿ ಏರ್ಪಡುತ್ತದೆ. ಮತ್ತು ಆ ಸ್ಥಿತಿಯಲ್ಲಿ ನಾನು ಮನೆಯವರನ್ನು ಕರೆದರೆ ಬರುತ್ತಾರೆ. ಆದರೆ ನನ್ನ ಪ್ರಕಾರ ಅವರು ಮನಸ್ಸಿನಲ್ಲಿ ಬೇಜಾರು ಪಡುತ್ತಾ ಅದನ್ನು ವ್ಯಕ್ತಪಡಿಸದಂತೆ ನನ್ನೊಂದಿಗೆ ಬರುತ್ತಾರೆ. ಈ ಸ್ಥಿತಿಯು ನನಗೆ ತುಂಬಾ ನೋವಾಗಿದೆ. ಈಗ್ಗೆ ಒಂದು ಬಾರಿ ನನಗೆ ರಾತ್ರಿಯಲ್ಲಿ ಶೌಚಾಲಯಕ್ಕೆ ಹೋಗಬೇಕಾದ ಸ್ಥಿತಿ ನಮ್ಮನೇಲಿ ಶೌಚಾಲಯ ಇಲ್ಲಾ ಆದ್ರೂ ನಾನು ಹೋಗ್ಬೇಕು ಎಲ್ಲೋಗ್ಬೇಕೋ ಗೊತ್ತಿಲ್ಲಾ ಆಗ ನಮ್ಮಮ್ಮನ್ನ ಎಬ್ಬಿಸಿದೆ ಮೊದಲಿಗೆ ಅವರು ಸಿಡಿಮಿಡಿಗೊಂಡರು ನಂತರ ನನ್ನ ಸ್ಥಿತಿ ಅರ್ಥ ಮಾಡಿಕೊಂಡು ನನ್ನೊಡನೆ ಬಂದರು.

ಮನೆಗೆ ಬಂದ ಮೇಲೆ ಏನಮ್ಮಾ ನೀನು ಹಗಲೆಲ್ಲಾ ಎನನ್ನಾತಿಂತಿರ್ತೀಯಾ ರಾತ್ರಿಯಾದ್ರೆ ಸಾಕು ಇದೇಗೋಳು ಅಂತ ಸೂಕ್ಷ್ಮವಾಗಿ ಅಂದು ಬಿಟ್ಟರು ಆದ್ರ ರಾತ್ರಿ ಹೊತ್ತಲ್ಲಿ ಬರ್ಬೇಕು ಅಂತ ನಾನೇನನ್ನಾ ಕನಸುಕಾಣಿದ್ನೆ ಆದ್ರ ಅವರು ತಿಳಿದಿದ್ದು ಹೀಗೆ ನಂಗೆ ತುಂಬಾನೆ ಬೇಸರ ಮತ್ತು ಮುಂದಿನ ದಿನಗಳಲ್ಲಿ ಏನಾದರೂ ಸರಿ ಯಾರನ್ನೂಕರೆಯಬಾರದು ನಾನು ಮಾತ್ರ ಹೋಗಬೇಕು ಎಂದು ತಿಳಿದೆ. ಅದರಂತೆ ನಾಲ್ಕೈದು ಬಾರಿ ಯಾರನ್ನೂ ಕರೆಯದೆ ನಾನೊಬ್ಬಳೇ ಶೌಚಾಲಯಕ್ಕೆ ಹೋಗಲು ಮುಂದಾದೆ ಆದ್ರೆ ಏನಾಯುತ ಗೊತ್ತಾ ಸಾರ್. ಒಂದು ದಿನ ಸಾಯಂಕಾಲ 8.30ಕ್ಕೆ ಸರಿಯಾಗಿ ನಮ್ಮ ಮನೆಯಿಂದ ಕೇವಲ 50 ಅಡಿ ದೂರ ಅಷ್ಟೆ ನಾನು ಹೋಗಿದ್ದೆ ಅದು ಒಂದು ಬಂಜರು ಭೂಮಿ ನಾನು ಹೋಗಿ ಕುಳಿತಿದ್ದೆ ಒಂದು ಕಡೆ ಭಯ, ಬೀತಿ, ಮತ್ತು ನಾಚಿಕೆ ಯಾರಾದರೂ ಬರುತ್ತಾರೇನೋ ಎಂದು. ಹೀಗೆ ಕುಳಿತಿರಬೇಕಾದರೆ ಎಲ್ಲಿಂದ ಬಂದವೋ ಗೊತ್ತಿಲ್ಲಾ ಸಾರ್, ಬೀದಿ ನಾಯಿಗಳು ನನ್ನ ಕಡೆ ನೋಡುತ್ತಾ ಜೋರಾಗಿ ಬೋಗಳತೊಡಗಿದವು ನನಗೆ ಭಯ ಮತ್ತು ನಾಚಿಕೆ ಯಾರನ್ನಾ ಬರುತ್ತಾರೇನೋ ಅಂಥ ಅವು ನಿಲ್ಲಿಸಲೇ ಇಲ್ಲಾ ಪದೇ ಪದೇ ಬೋಗಳುತ್ತಿದ್ದವು. ಇದ್ದಕ್ಕಿದ್ದಂತೆ ಸುತ್ತ ಮುತ್ತಲಿನ ಮನೆಯ ಜನ ಆಚೆ ಬಂದು ಬ್ಯಾಟರಿಗಳನ್ನು ಹಾಕಿದರು ನನ್ನ ಕಡೆ ನಂಗೆ ಅವಮಾನವಾಯಿತು ಮತ್ತು ತುಂಬಾ ನೋವಾಯಿತು. ಅಲ್ಲೆ ಇದ್ದ ಒಂದು ಗಿಡದ ಕೆಳಗೆ ಅವಿತುಕೊಂಡೆ ಆದರೆ ಪದೇ ಪದೇ ಬೋಗಳುತ್ತಿದ್ದ ನಾಯಿಗಳನ್ನು ನೋಡಿ ಕೆಲವು ಗಂಡಸರು ಬ್ಯಾಟರಿ ಹಿಡಿದು ನನ್ನ ಕಡೆ ಬಂದೇ ಬಿಟ್ಟರು. ಮೂವರು ಗಿಡದ ಬದಿಯಲ್ಲಿದ್ದ ನನ್ನ ಕಡೆ ಬ್ಯಾಟರಿಯನ್ನು ಹಾಕಿಯೇ ಬಿಟ್ಟರು. ಕೂತಿದ್ದ ನಾನು ದಿಡೀರನೇ ಎದ್ದು ನಿಲ್ಲಲ್ಲು ಆಗುವುದಿಲ್ಲ. ನಿಜವಾಗ್ಲೂ ಸಾರ್ ಹಾಗೆ ನನ್ನ ಮುಖ ತೋರಿಸದೇ ಕುಳಿತುಬಿಟ್ಟೆ. ಅವರು ನನ್ನನ್ನು ನೋಡಿ ಸುಮ್ಮನೆ ಹೊರಟುಹೋದರು ನನಗೆ ಬಂದ ದುಃಖಕ್ಕೆ ಪಾರವೇ ಇರಲಿಲ್ಲ. ಒಂದು ಕ್ಷಣ ನಾನು ಸಾಯಬೇಕು ಈ ಜೀವನವೇ ಬೇಡ ಅಂಥ ಅನ್ನಿಸಿತು. ಆದರೆ ನನಗೂ ಕೆಲವೊಂದು ಆಸೆ ಆಕಾಂಕ್ಷೆಗಳಿವೆ ಜೀವನದಲ್ಲಿ ಅದಕ್ಕಾದರೂ ಬದುಕಬೇಕು ಅನ್ನಿಸುತು.

ಆ ದಿನದಿಂದ ನಾನು ಆಚೆಗೆ ಹೋಗಬೇಕೆಂದರೆ ಭಯ ಮತ್ತು ಹೆದರಿಕೆಯಾಗುತ್ತದೆ. ಈಗಲೂ ಸಹ ನಾನು ಆಚೆಗೆ ಹೋಗುತ್ತಿದ್ದೇನೆ ಯಾಕೆಂದರೆ ನಮ್ಮನೇಲಿ ಶೌಚಾಲಯ ಇಲ್ಲಾ ಕಟ್ಟಿಸ್ಕೋಡಿ ಅಂತ ನಮ್ಮನೆಯವರ್ನ ಕೇಳಿದ್ದಾಯ್ತು ಅದಕ್ಕೆ ಅವ್ರು ಹಣ ಇಲ್ಲಾ ಅಂದ್ರು ಮತ್ತು ನನ್ನ

ಮಾತು ಕಿವಿಗೆ ಹಾಕ್ಕೋಳಲ್ಲಾ ಸಾರ್. ರಾತ್ರಿ ಹೊತ್ತಲ್ಲಿ ನಾನು ಹೋಗೋದು ಕಡಿಮೆಯಾಕಂದ್ರ ನಾನು ರಾತ್ರಿ ಹೊತ್ತಲ್ಲಿ ಹಲವು ಸಲ ಊಟ ಮಾಡಲ್ಲಾ ಮತ್ತು ನೀರು ಕೂಡ ಮಿತವಾಗಿ ಕುಡಿತಿನಿ ಯಾಕಂದ್ರ ಶೌಚಾಲಯದ ಕೊರತೆ. ಶೌಚ ಮಾಡುವಾಗ ನಾನು ಹೇಳ್ದಂಗೆ ತುಂಬಾ ಕಷ್ಟ ಆಗುತ್ತೆ ನಾನು ಕೂರೋಕೆ ಏಳೋಕೆ ಕಷ್ಟ ಯಾಕಂದ್ರ ಅಂಗವಿಕಲೆ ಅದರಲ್ಲೂ ಶೌಚಾಲಯದಲ್ಲೂ ಕೂಡ ನಾನು ಕೂರೋಕೆ ಕಷ್ಟಪಡ್ತೀನಿ ಯಾಕಂದ್ರ ಅದರ ಬೇಸಿನ್ (ಪೋನ್) ನಲ್ಲಿ ಕೂರೋಕೆ ಅಗಲ್ಲಾ ತುಂಬಾ ಮಾನಸಿಕ ಹಿಂಸೆನೇ ಇದೆ ಸಾರ್. ಮನೆಯವರ ಬಳಿ ಸಾರ್ ಅವಳು ಕೇಳ್ದಾಗೆಲ್ಲಾ ಹೋಗೋಕೆ ನಮ್ಗೂ ಹೋಗೋಕೆ ಕಷ್ಟ ಸಾರ್ ಯಾಕಂದ್ರ ಹಗಲೆಲ್ಲಾ ದುಡಿಯೋಕೆ ಹೋಗಿರ್ತೀವಿ ನಾವು ರಾತ್ರಿ ಬಂದು ಮಲಗೋದು ಸುಸ್ತಾಗುತ್ತೆ ಅಂಥದ್ದರಲ್ಲಿ ನಡುರಾತ್ರೀಲಿ ಹೋಗ್ಬೇಕಂದ್ರ ಸ್ವಲ್ಪ ಬೇಜಾರು ಆದ್ರೂ ಹೋಗ್ತೀವಿ ಕೆಲವು ಸಲ ಅವಳೇ ನಮ್ಗೆ ಹೇಳ್ದೆ ಹೋಗ್ಬಿಡ್ತಾಳೆ. ಆಗ ಅಲ್ಲಲ್ಲಿ ಬಿದ್ದೋಗೋದು ಅದೆಲ್ಲಾ ಆಗುತ್ತೆ ಸಾರ್. ಯಾಕಂದ್ರೆ ಏನಾಗುತ್ತೆ ಅಂಥ ಒಂಥರ ನಮ್ಗೂ ಕೂಡ ಹಿಂಸೇನೆ ಸಾರ್.

- ಶೌಚಾಲಯ ಕಟ್ಟಿಸ್ಕೋಬೇಕು,. ಆದ್ರೆ ಬಡತನ ಇದೆ ಸಾರ್.
- ಅವಳು ಮಾತ್ರ ಅಲ್ಲ ಸಾರ್ ನಾವು ಕೂಡ ರಾತ್ರೀಲೀ ಊಟ ನೀರು ಮಿತವಾಗಿ ತಗೋತೀವಿ ಯಾಕಂದ್ರ ಈ ಸಮಸ್ಯೆ ಇದೆ.

## ಮಧ್ಯಮ ವಯಸ್ಥ ಮಹಿಳೆಯೊಂದಿಗೆ ಸಂದರ್ಶನ

**ಹೆಸರು : ರೇಣುಕಮ್ಮ ಮರಿಯಮ್ಮನಹಳ್ಳಿ ಮನೆಕೆಲಸಗಾರ್ತಿ**

ನನ್ನ ಮದುವೆಯಾಗಿ 7 ವರ್ಷಆಯ್ತು ಸಾರ್ ನಾನು ಮತ್ತು ನಮ್ಮಜಮಾನ್ರು ಮತ್ತು ಒಂದ್ಕಡೆ ಇದೀವಿ ನಮ್ಮತ್ತೆ, ಮಾವ ಅವ್ರು ಬೇರೆ ಕಡೆ ಇದಾರೆ. ನಮ್ಮನೇಲಿ ಮೊದಲಿಗೆ ಶೌಚಾಲಯ ಇರ್ಲಿಲ್ಲಾ ಒಂದು ತಿಂಗಳಿಂದೆ ಕಟ್ಟಿದ್ವಿ ಸಾರ್. ತಿಂಗಳ ಮುಂಚೆ ನಾನು ಆಚೆ ಕಡೆ ಹೋಗ್ತಿದ್ದೆ ಅದು ಅರ್ಧ ಕಿಲೋಮಿಟರ್ ದೂರ ಅದು ಮಹಿಳೆಗೆ ಸರಿ ಅಲ್ಲ ಅಂಥ ನಾವೇ ಕಟ್ಸದ್ವಿ ಸಾರ್. ಯಾಕಂದ್ರ ಒಂದು ಸಲ ನಂಗೆ ಒಂದು ಘಟನೆ ಆಯ್ತು ಸಾರ್, ಅವತ್ತು ತುಂಬಾ ಮಳೆ ಬರ್ತಿತ್ತು. ನಾನು ಬಯಲಿಗೆ ಹೋಗ್ಬೇಕಿತ್ತು ನಂಗೆ ಅವಸರ ಆಗಿತ್ತು. ಅದಕ್ಕೆ ಯಾರನ್ನು ಕರಿದೇ ನಾನೊಬ್ಬಳೇ ಹೋಗ್ಬಿಟ್ಟೆ ಛತ್ರಿ ತಗೊಂಡು ಹೋದೆ ದೂರ ಒಂದತ್ರ ಕೂತ್ಕೊಂಡೆ ಜೋರಾಗಿ ಮಳೆ ಬರ್ತಿದೆ ಸುತ್ತಲೂ ಆಗೋದುಕೂಡ ಕೇಳ್ಸಲ್ಲಾ ಎಲ್ಲಿಂದ ಬಂದ್ವೋ ಗೊತ್ತಿಲ್ಲಾ ಸಾರ್ ಹಂದಿಗಳು ಒಂದು (25) ಹಂದಿಗಳು ಬಂದು ನನ್ಮೇಲೇನೆ ಬಂದ್ಬಿಟ್ಟು ನಂಗೆ ಎದ್ದೇಳೋಕೆ ಆಗ್ತಿಲ್ಲಾ ಆದ್ರೆ ಕಷ್ಟಪಟ್ಟು ಎದ್ದೆ ಆದ್ರೆ ಒಂದು ಹಂದಿ ನಂಗೆ ಕಾಲುಗಳ ಮಧ್ಯ ದಾರಿ ನನ್ನ ಎತ್ತಿ ದಬ್ಬಿತು ಅದಕ್ಕೆ ನಾನು ಊರುಳಿಕೊಂಡು ನೀರಿಗೆ ಬಿದ್ಬಿಟ್ಟೆ ಬಟ್ಟೆ ಎಲ್ಲಾ ನೀರಾಯ್ತು ಮತ್ತು ಗಲೀಜೆಲ್ಲಾ ಆಗೋಯ್ತು ಆಗ ನಾನು ಒಂದು ಗುಂಡಿ ಹತ್ರ ಹೋಗಿ ಅದನೆಲ್ಲಾ ಕ್ಲೀನ್ ಮಾಡ್ಕೋತಿದ್ದೆ ಒಬ್ಬನು ಯಾರೋ ನಂಗೆ ಗೊತ್ತಿಲ್ಲಾ ಪದೇ ಪದೇ ಶಿಳ್ಳೆ ಹಾಕ್ತಿದ್ದ ಯಾರಂತೂ ನಂಗೂ ಗೊತ್ತಾಗ್ಲಿಲ್ಲಾ ಯಾರು ಕಾಣ್ಣಿಲ್ಲಾ ಸರಿ ಬಿಡು ಅಂತ ನಾನು ನನ್ನ ಕೆಲಸದಲ್ಲಿದ್ದೆ ಅವನು ಒಂದು ಕಲ್ಲನ್ನ ಎತ್ತಿ ನೀರಿಗೆ ಬಿಸಾಕಿದ, ಆಗ ನಂಗೆ ಅರ್ಥ ಆಯ್ತು ಯಾರೋ ಇದಾರೆ ಅಂತ ಮತ್ತು ನಾನು ಬೇರೆ ನೋಡೋಕೆ ಒಂಥರಾ ಇದ್ದೆ ಆ ಪರಿಸ್ಥಿತೀಲಿ ನಂಗೇನೆ ನಾಚಿಕೆ ಆಯ್ತು ಅಲ್ಲಿರೋಕೆ ಬೇಗೆ ಬೇಗೆ ಮುಗಿಸ್ಕೊಂಡು ಮನೆಗೆ ಬಂದ್ಬಿಟ್ಟೆ ಆದ್ರೆ ನಂಗೆ ಮಾತ್ರ ಯಾರಾಗಿರಬೋದು ಅಲ್ಲಿದ್ದವರು ಯಾರು ಅಂತ ಪದೇ ಪದೇ ನೆನಸಿಕೊಂಡಿರ್ತೀನಿ ಈಗ್ಲೂ ಯಾರನ್ನಾ ನನ್ನ ಕಡೆ ಜಾಸ್ತಿ ನೋಡಿದ್ರೆ ಅವರ ಮೇಲೆ ಅನುಮಾನ ಬರುತ್ತೇ ಮತ್ತು ಅವರ ಮುಂದೆ ನಿಲ್ಲೋಕೆ ನಾಚಿಕೆ ಆಗುತ್ತೆ.

ಇದನ್ನ ನನ್ನ ಗಂಡನ ಹತ್ರ ಹೇಳ್ದೆ ಅದಕ್ಕೆ ಅವರು ರಿಸೆಂಟಾಗಿ ಶೌಚಾಲಯ ಕಟ್ಸಿದ್ರು ಸಾರ್. ಈಗಂತೂ ಸ್ವಲ್ಪ ಪರವಾಗಿಲ್ಲ ಸಾರ್. ಅಥರ ಏನೂ ಸಮಸ್ಯೆ ಇಲ್ಲಾ ಯಾವಗ್ಬೇಕಂದ್ರೂ ಹೋಗ್ತೀವಿ, ಬರ್ತೀವಿ ಆದ್ರೆ ಒಂದು ವಿಷಯ  ಸಾರ್ ಈಗ ನಾವು ಶೌಚಾಲಯ ಕಟ್ಟಿದ್ವಿ ಅದು ನಮ್ಮನೆಯಿಂದ ಸ್ವಲ್ಪ ದೂರ ಇದೆ ಯಾಕಂದ್ರ ಅದೇನೋ ಸಂಪ್ರದಾಯವಂತೆ ಆದ್ರೂ ಅಲ್ಲೂ ಕೂಡ ನಮ್ಗೆ ಬೇಜಾರೇ ಸಾರ್ ಯಾಕಂದ್ರೆ ಅದು ಸ್ವಲ್ಪ ಬಜಾರಿಗೆ ಪಕ್ಕದಲ್ಲೇ ಇದೆ. ನಾವೇನನ್ನಾ ಒಳಗಡೆ ಹೋದಾಗ ಕೆಲವು ಪೋಲಿಗಳು ನೋಡ್ತಾ ಇರ್ತಾರೆ ನಾವೋಗಿ ಕೂತ್ಮೇಲೆ ಆ ಬಾತ್ ರೂಮ್ ಹತ್ರ ಬರೋದು ಕೆಟ್ಟ ಕೆಟ್ಟ ಮಾತಾಡೋದು ಮತ್ತು ಕೆಟ್ಟ ಹಾಡುಗಳನ್ನು ಹಾಡೋದು ಆ ಥರ ನಾವು ಆಚೆಗೆ ಬರೋವರ್ಗೂ ಕಪಿ ಚೇಷ್ಠೆ ಮಾಡ್ತಿರ್ತಾರೆ ಸಾರ್. ನಾನೊಂದು ಸಲ ಕೇಳ್ದೆ (ಯಾಕೆ ಥರ ಮಾಡ್ತಿರಂಥಾ) ಅದಕ್ಕೆ (ಅವ್ರು ನೀನ್ಯಾಕೆ ಕೇಳ್ತೀಯಾ ನೀವ್ಯಾಕೆ ಲೆಟ್ರಿನ್ ರೂಮ್ ಇಲ್ಲಿ ಕಟ್ಟಿದ್ದೀರಿ ಇದು ಬಜಾರು ಪಕ್ಕದಲ್ಲಿದೆ ಬಜಾರಲ್ಲಿ ಜನ ಓಡಾಡ್ತಿರ್ತಾರೆ ಅದಕ್ಕೆ ನೀನ್ಯಾಕೆ ತಲೆ ಕೆಡಿಸಿಕೊಂತೀಯಾ ಅಂತ ಅಂತಾರೆ ಸಾರಥ)., ಆ ಥರ ಅಲ್ಲಿಗೆ ಹೋಗ್ಬೇಕಂದ್ರೂ ಸ್ವಲ್ಪ ಭಯ ಮತ್ತು ಮುಜುಗರ ಆಗುತ್ತ ಸಾರ್.

ಮನೆ ಹತ್ರ ಕಟ್ಸದ್ರೆ ಈ ಪ್ರಾಬ್ಲಂಮ್ ಇರ್ತಿರ್ಲಿಲ್ಲಾ ಆದ್ರೆ ನಮ್ಗೇನೋ ಪರವಾಗಿಲ್ಲಾ ಆದ್ರ ದೊಡ್ಡವರು ಅಂತಾರೆ ಮಲಮೂತ್ರ ಮನೆಯಿಂದ ದೂರ ಇರ್ಬೇಕು ಮತ್ತೆ ಅದನ್ನ ಮನೆ ಹತ್ರ ಕಟ್ಸಿಸ್ಬಾರ್ದು ಅಂತ ಅದಕ್ಕೆ ನಾವು ದೂರ ಕಟ್ಸಿದ್ವಿ ಅದಕ್ಕೆ ಈ ಸಮಸ್ಯೆ ಸಾರ. ಆದ್ರೆ ಪೂರಾ ಬಯಲಿಗೆ ಹೋಗೋರಿಗಿಂತ ನಮ್ಗೇನೂ ಸಮಸ್ಯೆ ಅನ್ಸೊಲ್ಲಾ ಮತ್ತೆ ಆಥರ ಟನಕ್ಷನ್ನು ಇಲ್ಲಾ ಬಿಡಿ, ಸಮಸ್ಯೆ ಅಂದ್ರೆ ಸಾರ್ ಈ ಗಂಡಸರು ಕಾಟ ಮತ್ತು ಹಂದಿಗಳು ರಾತ್ರೀಲಿ ಹೋಗ್ಬೇಕಂದ್ರೆ ದೆವ್ವ, ಭೂತ ಅನ್ನೋ ಭಯ ಜಾಸ್ತಿ ಸಾರ್. ಈ ಗಂಡಸರು ಬೇಕಾದ್ರೆ ನಮ್ಮುಂದೇನೆ ಬೇಕಂದ್ರೆ ಉಚ್ಛೆ ಹೊಯ್ತಾರೆ ಆದ್ರೆ ನಾವು ಅಥರ ಏನನ್ನು ಮಾಡಿದ್ರೆ ನಾಚಿಕೆ, ಮರ್ಯಾದೆ ಪ್ರಶ್ನೆ ಯಾಕೋ ಈ ತಾರತಮ್ಯ ಸಾರ್, ಬೇಕಾಗೇ ಗಂಡಸರು ನಾವು ಕೂತಿರೋ ಜಾಗಕ್ಕೆ ಬಂದು ನಿಲ್ಲೋದು ಮತ್ತೇ ಆ ಕಡೆ ಈ ಕಡೆ ಅಡ್ಡಾಡೋದು ಈಥರ ಮಾಡ್ತಾರೆ ಆದ್ರೆ ನಾವು ಆಥರ ಮಾಡೋಕ್ಕಾಗಲ್ಲಾ ಅದರಲ್ಲೂ ನಾವು ಅವರ ಮುಂದೇನೇ ಚೊಂಬಿಟ್ಕೊಂಡು ಎದ್ದು ಬರ್ಬೇಕು. ಆಗಂತೂ ಪ್ರಾಣ ಕಳ್ಕೊಂಡಂಗಿರುತ್ತೆ ನಮ್ಗೆ. ಯಾಕಂದ್ರ ನಮ್ಮನ್ನೇ ನೋಡ್ತಿರ್ತಾರೆ. ಅವ್ರು ಸಾರ್ ಅಷ್ಟಕ್ಕೆ ಬಿಡೋಲ್ಲಾ ಪದೇ ಪದೇ ನಾವು ಎದುರಾಗ ನಮ್ಮನ್ನ ಒಂಥರ ನೋಡುದು ಮತ್ತೆ ನಗೋದು ಈ ಥರ

ಮಡ್ತಿರ್ತಾರೆ ಸಾರ್ ಅದೊಂದು ಥರ ಹಿಂಸೆ ಇಂಥಾವೆಲ್ಲಾ ನಮ್ಮ ನಮ್ಮ ಮಸಿಗಳಲ್ಲಿ ಹೇಳ್ಕೊಳ್ಳೇಕೆ ಬೇಜಾರಾಗುತ್ತೆ ಸಾರ್ ಅದನ್ನೇಲ್ಲಾ ನಾವೇ ಮನಸ್ಸಿನಲ್ಲಿಟ್ಕೋಬೇಕು. ಈ ಥರ ಎಷ್ಟು ಅಂತ ಮನಸ್ಸಿನಲ್ಲಿ ಇಟ್ಕೋಬೇಕು ಸಾರ್ ಎಷ್ಟು ದಇನ ಅಂತ ಕೂರಬೇಕು ಸುಮ್ನೆ ಒಂದ್ವೇಳೆ ಏನನ್ನಾ ಮನೇನಲ್ಲಿ ಹೇಳಿದ್ರೆ ಕೆಲವರು ನಂಬ್ತಾರೆ ಮತ್ತು ಕೆಲವರು ನಮ್ಮನ್ನೇ ಅನುಮಾನಿಸುತ್ತಾರೆ ಅದೇ ಒಂಥರ ಹಿಂಸೆ.

ನಮ್ಮೂರಲ್ಲಿ ಇನ್ನೂ ಹಲವು ಮನೆಗಳಲ್ಲಿ ಶೌಚಾಲಯ ಇಲ್ಲಾ ಅವರೆಲ್ಲಾ ಈಗ್ಲೂ ಕೂಡ ಬಯಲಿಗೆ ಹೋಗ್ತಾರೆ ಅದರಲ್ಲೂ ಪ್ರತ್ಯೇಕವಾಗಿ ವಯಸ್ಸು ಹುಡುಗಿಯರು ಅವರಂತೂ ತುಂಬಾನೆ ಹಿಂಸೆ ಅನುಭವಿಸ್ತಾರೆ ಸಾರ್ ನಾನಂತೂ ನಮ್ಮ ಪಕ್ಕದ್ಮನೆಯಲ್ಲಿ ಒಂದು ವಯಸ್ಸು ಹುಡುಗಿ ಇದೆ. ಅವಳ್ನ ನಾನು ನಮ್ಮ ಶೌಚಾಲಯಕ್ಕೆ ಹೋಗಿ ಬಾ ಅಂಥ ಹೇಳ್ತಿದ್ದೀನಿ ಯಾಕಂದ್ರ ಆ ಸಂಕಟ ನಾನು ಅನುಭವಿಸಿದ್ದೀನಿ ಅದಕ್ಕೆ ಸಾರ್.

## ಮಧ್ಯಮ ವಯಸ್ಕ ಮಹಿಳೆಯೊಂದಿಗಿನ ಸಂದರ್ಶನ

**ನನ್ನ ಹೆಸರು: ಶಾಂತ ಡಣಾಪುರ**

ನಾನೂ ಮೂಲತಃ ಬಿಜಾಪುರ ಜಿಲ್ಲೆಯವಳು ನನ್ನ ಎಂ.ಎ. ಪದವಿ ಮುಗಿಸಿ ಉದ್ಯೋಗಕ್ಕೆಂದು ಬಳ್ಳಾರಿಗೆ ಬಂದು ಒಂದು  ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದೆ. ಅದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ ಎನ್ನುವವನೊಂದಿಗೆ ನನ್ನ (ಸಹೋದ್ಯೋಗಿ) ಪರಿಚಯ ಬೆಳೆದು ಪರಿಚಯ ಪ್ರೀತಿಗೆ ತಿರುಗಿ ಮದುವೆ ಕೂಡ ಮಾಡಿಕೊಂಡೆವು. ತೀರಾ ಹಳ್ಳಿಯ ಹುಡುಗನಾದ ನನ್ನ ಗಂಡ ಕೊನೆಗೆ ತಮ್ಮ  ಹಳ್ಳಿಗೆ ಹೋಗಿ ನೆಲಸಬೇಕೆಂದು ಹಠ ಇಡಿದನು ಯಾಕೆಂದರೆ ಅವರ ಮುದಿ ತಂದೆ ತಾಯಂದಿರ ಆರೈಕೆಗಾಗಿ ಒಲ್ಲದ ಮನಸ್ಸಿದ್ದರೂ ಕೂಡ ನಾನು ಕೂಡ ಅದಕ್ಕೆ ಒಪ್ಪಿಗೆ ಸೂಚಿಸಿದೆ. ಇಬ್ಬರೂ ಕೂಡ ಹಳ್ಳಿಗೆ ಹೋಗಿ ನೆಲೆಸಿದ್ದೇವು. ಬಾಲ್ಯದಿಂದ ನಗರ ವಾತಾವರಣದಲ್ಲಿ ಬೆಳೆದ ನನಗೆ ಹಳ್ಳಿಯ ಜೀವನ ತುಂಬಾ ಮುದ ನೀಡುತ್ತಿತ್ತು. ನಾನು ಕೂಡ ಸಂತೋಷದಿಂದಿದ್ದೆ. ಆದರೆ  ನನ್ನೀ ಸಂತೋಷ ತುಂಬಾ ದಿನಗಳಿರಲಿಲ್ಲ. ಯಾಕೆಂದರೆ ಹಳ್ಳಿಯಾದ ಅಲ್ಲಿ ಸೂಕ್ತ ರೀತಿಯ ವಸತಿಗಳ ಕೊರತೆ ಬಹುಮುಖ್ಯವಾಗಿ ಮಹಿಳೆಯರಿಗೆ ತುಂಬಾ ಕಷ್ಟ ನನಗಂತೂ ತುಂಬಾನೇ ಹಿಂಸೆ ಆಗುತ್ತಿತ್ತು. ಶೌಚಾಲಯದ ಕೊರತೆ ಸ್ನಾನದ ಗೃಹದ ಕೊರತೆ ಈ ಮೂಲ ಸೌಕರ್ಯಗಳು ನಮ್ಮ ನಗರದಲ್ಲಿ ಮಾಡಿಕೊಂಡಿದ್ದೆವು. ಆದರೆ ನನ್ನ ಗಂಡನ ಮನೆಯಲ್ಲಿ ಇದ್ಯಾವ ಸೌಕರ್ಯಗಳು ಇರಲಿಲ್ಲ.

ಶೌಚಾಲಯಕ್ಕೆ ಹೋಗಬೇಕಾದರೆ 1 ಕಿಲೋಮಿಟರ್ ಹೋಗಬೇಕು ಅದರಲ್ಲೂ ಹಿಂಸೆ ಮತ್ತು ನಾಚಿಕೆ ಬಯಲಲ್ಲಿ ಕೂರೋಕೆ ಆದರೂ ಕೂರಬೇಕು. ನನಗೆ ತುಂಬಾ ಆಳು ಬರುತ್ತಿತ್ತು. ನಮ್ಮ ಮನೆಯ ಮತ್ತು ಸುತ್ತಮುತ್ತಲಿನವರು ಕೂಡ ಬಯಲಿಗೆ ಹೋಗುತ್ತಿದ್ದರು. ನನ್ನ ಪ್ರಕಾರ ಅದು ಅವರಿಗೆ ಸರ್ವೇ ಸಾಮಾನ್ಯವಾಗಿತ್ತು ಆದರೆ ನಗರದಿಂದ ಬಂದ ನನಗೆ ಅದು ಸರಿಯಾಗಲಿಲ್ಲ. ಪ್ರಮಾಣೀಕವಾಗಿ ಹೇಳುವುದಾದರೆ ನಿಜವಾಗಿಯೂ ಈ ಬಯಲು ಶೌಚಾಲಯ ಮಹಿಳೆಗೆ ಯೋಗ್ಯವಾದುದಲ್ಲ. ಅಲ್ಲಿನ ಸಂಕಟ, ಹಿಂಸೆಗಳೇ ಬೇರೆಯಾಗಿರುತ್ತವೆ. ಅದನ್ನು ಯಾರ ಬಳಿಯೋ ಹೇಳಲಾಗುವುದಿಲ್ಲಾ. ಅವರು ಹೇಳುವುದಿಲ್ಲ. ಮತ್ತೆ ಸ್ನಾನದ ಗೃಹ, ಇಲ್ಲದೆ ಸ್ನಾನ ಮಾಡುವುದು ತುಂಬಾ ಕಷ್ಟಕರವಾಗುತ್ತಿತ್ತು. ನನಗೆ ಎಲ್ಲರೂ  ಸೀರೆ ಸೆರಗನ್ನು ನಾಲ್ಕು ದಿಕ್ಕು ಕಟ್ಟಿ

ಅದರ ಮಧ್ಯ ಸ್ನಾನ ಮಾಡುತ್ತಿದ್ದರು ಆ ಸೀರೆ ಸೆರಗಿನಲ್ಲಿ ಮಾಡೋ ಸ್ನಾನ ಬಿಸಿಲಲ್ಲಿ ನಿಲ್ಲೋ ಗಂಡಸರಿಗೆ ಪೂರ್ತಿಯಾಗಿ ಕಾಣುತ್ತಿತ್ತು. ಅದರಿಂದ ನಂಗೆ ತುಂಬಾನೇ ಬೇಸರವಾಗುತ್ತಿತ್ತು. ಕೊನೆಗೆ ನಾನೊಂದು ತಿರ್ಮಾನಕ್ಕೆ ಬಂದೆ ಈ ವಿಷಯಗಳನ್ನು ನನ್ನ ಗಂಡನೊಂದಿಗೆ ಚರ್ಚಿಸಿ ನಮ್ಮ ಮನೆಯ ಬಳಿ ಶೌಚಾಲಯ ಮತ್ತು ಒಂದು ಸ್ನಾನದ ಗೃಹವನ್ನು ಕಟ್ಟಿಸಬೇಕು.

ಮರುದಿನ ರಾತ್ರಿ ನಾನು ನನ್ನ ಗಂಡನ ಹತ್ರ ಹೇಳಿದದ ನನಗೆ ಬಯಲಿಗೆ ಹೋಪಗಳು ಭಯ ಆಗುತ್ತಿದೆ ಮತ್ತು ಈ ನನ್ನ ಸಮಸ್ಯೆಯನ್ನೆಲ್ಲಾ ಮೊದಲಿಗೆ ಆತನು ಏನು ಹೇಳಲಿಲ್ಲ ಆಯ್ತು ಕಟ್ಟಿಸೋಣ ಅಂದ ಆತ ನಾನು ಕೂಡ ಸುಮ್ಮನಾದೆ ಹಾಘೆಯೇ 2 ತಿಂಗಳು ಕಳೆಯಿತು ಕಟ್ಟಿಸಲಿಲ್ಲ. ನಾನು ಮತ್ತೆ ಮತ್ತೆ ಕೇಳೊಕೆ ಪ್ರಾರಂಭಿಸಿದೆ. ಅದಕ್ಕೆ ಅವರು ಸಿಡಿಮಿಡಿಗೊಂಡರು ಮತ್ತು ಬೈಯ್ದರು ತದನಂತರ ನಾನು ಅಲ್ಲಿಂದಾಚೆಗೆ ನಾನು ದಿನನಿತ್ಯ ಅಳುವುದಕ್ಕೆ ಪ್ರಾರಂಭಿಸಿದೆ ಮತ್ತು ಸರಿಯಾಗಿ ಊಟ ಮಾಡುತ್ತಿರಲಿಲ್ಲ. ಇದನ್ನೆಲ್ಲಾ ಗಮನಿಸಿದ ಆತನು ಕಟ್ಟಿಸುತ್ತಾನೆ ಅಂದುಕೊಂಡರೆ ನನ್ನ ಮೇಲೆ ತನ್ನ ಬಲಪ್ರಯೋಗ ಮಾಡಲು ಸಿದ್ದನಾದ ಹೊಡೆಯಲು ಪ್ರಾರಂಭಿಸೋದು ಮಾಡಿದ ಯಾಕೆಂದರೆ ಶೌಚಾಲಯದ ಊರೊಳಗೆ ಇರಬಾರದು ಮತ್ತು ಪಕ್ಕದ ಮನೆಯವರೆಲ್ಲಾ ಯಾವತರ ಹೋಗ್ತಾರೆ ಬರ್ತಾರೆ ಅವರು ಯಾವ ತರ ಸ್ನಾನ ಮಾಡ್ತಾರೆ ಅವರನ್ನೆಲ್ಲಾ ನೋಡದೇ ನಿನ್ನನ್ನು ಮಾತ್ರ ನೋಡ್ತಾರಂದ್ರೆ ನೀನು ಯಾವ ತರ ಇರ್ತೀಯೋ ನೋಡು ಅಂತ ಬೈಯೋದು ಹೊಡೆಯೋದು ಪ್ರಾರಂಭಿಸಿದರು. ಈಗೆ ಇತ್ತ ಮನೆಯಲ್ಲಿ ಮತ್ತು ಅತ್ತ ಸಮಾಜದಲ್ಲಿ ನಡೆಯುವ ಹಿಂಸೆ ಮತ್ತು ಸಂಕಟದಿಂದ ಪಾರಾಗಲು ನನಗೆ ಒಂದೇ ದಾರಿ ಅನಿಸಿತು. ಮರುದಿನವೇ ನನ್ನ ಸಾಮಾನಿನೊಂದಿಗೆ ನನ್ನ ತವರುಮನೆಗೆ ಬಂದೆ ನಂತರ ಸುಮಾರು ಬಾರಿ ನನ್ನ ಗಂಡ ಬಂದು ಬರಲು ಹೇಳಿದ ಕೇಳಿದ. ಆದರೆ ನಾನು ಅಲ್ಲಿಗೆ ಬರುವುದಿಲ್ಲಾ ಬರಬೇಕೆಂದರೆ ಮೊದಲು ಶೌಚಾಲಯ ಕಟ್ಟಿಸು ಅಂದೆ ಅದರೆ ಆತನು ಕಡೆಗೂ ಅದನ್ನು ಕಟ್ಟಿಸೋಕೆ ಮುಂದೆ ಬರಲಿಲ್ಲ. ಒಂದು ವಳೆ ಕಟ್ಟಿಸಿದರೆ ನಾನು ಇವರಳ ಮಾತಿಗೆ ಬಗ್ಗಿದಂತೆ ಆಗುತ್ತದೆಂದು ನೀನು ಬಂದರೆ ಬಾ ಇಲ್ಲಾಂದ್ರೆ ನಾನು ಇನ್ನೊಂದು ಮದುವೆ ಆಗುತ್ತೇನೆ ಅಂದ ನಾನು ಕೂಡ ಸಮ್ಮತಿಸಿದೆ. ಹೋಗು ಮಾಡ್ಕೋ ಹೋಗು ನಿಮ್ಮ ಊರಲ್ಲಿರೋ ಆ ಸಮಸ್ಯೆಗೆ ಯಾರೂ ಇರಲ್ಲಾ ಅಂತ ಹೇಳ್ದೆ.

ಕೊನೆಗೆ ನಾನು ಆತನಿಗೆ ಕೇಳಿದ ತಿಂಂಗಳು ವಿಚ್ಛೆದನೆ ನೀಡಿದೆ. ಈಗ ಆತನು ಬೇರೆ ಮದುವೆಯಾಗಿದ್ದಾನೆಂದು ತಿಳಿದು ಬಂದಿದೆ. ಆದರೆ ಮದುವೆಯಾಗುವುದಕ್ಕೂ ಮುಂದಾಗುವ ಪುರುಷರು ಪತ್ನಿಗೋಸ್ಕರ ಒಂದು ಶೌಚಾಲಯ ಕಟ್ಟಲು ಮುಂದಾಗುವುದಿಲ್ಲ. ಈ ರೀತಿಯ ತಾರತಮ್ಯತೆ ಮತ್ತು ಶೋಷಣೆ ಇದೆ ಮಹಿಳೆಯರ ಸಮಸ್ಯೆಗಳ ಬಗ್ಗೆ ಮನೆಗಳಲ್ಲಿ. ಒಂದು ವೇಳೆ ಶೌಚಾಲಯ ಕಟ್ಟಿಸಿದ್ರೂ ನಾನೇ ಅಲ್ಲಿಗೆ ಹೋಗುತ್ತಿದ್ದೆ ಆದರೆ ಆತ ಹಾಗೆ ಮಾಡಲಿಲ್ಲ. ನನಗೆ ಇದೊಂದು ಸಮಸ್ಯೆ ಮದುವೆಯಾಗಿ ಗಂಡನನ್ನು ಬಿಟ್ಟ ನನ್ನನ್ನು ಈ ಸಮಾಜ ಬೇರೆ ದೃಷ್ಠಿಯಲ್ಲಿ ನೋಡುತ್ತೇ ನನ್ನ ರೀತಿ ತುಂಬಾ ಹೆಂಗಸರು ದಿನನಿತ್ಯ ಈ ರೀತಿ ಕಷ್ಠಗಳನ್ನು ಅನುಭವಿಸುತ್ತಿದ್ದಾರೆ.

## ವೃದ್ಧ ಮಹಿಳೆಯೊಂದಿಗಿನ ಸಂದರ್ಶನದ ಸಾರಾಂಶ

**ಹೆಸರು: ಸಾದುನ್ನೀಸಾ 63 ವರ್ಷ**

ನಾನು 53 ವರ್ಷದಿಂದ ಇಲ್ಲೇ ವಾಸವಾಗಿದ್ದೀನಪ್ಪಾ ನಂಗೀಗ ಸರಿಯಾಗಿ ಕಣ್ಣು ಕಾಣಿಸ್ತಿಲ್ಲಾ ಆದ್ರೂ ನಡೀತೀನಿ ರಾತ್ರಿಯಾದ್ರ ಇದ್ದಿದ್ದೂ ಕಾಣ್ಣಲ್ಲಾ ಆದ್ರೆ ಏನ್ ಮಾಡೋದಪ್ಪಾ ಸಾಯೋವರ್ಗ್ಗೂ ಬದುಕ್ಬೇಕಲ್ಲಾ ಅದಕ್ಕೆ ಬದುಕ್ತಿದ್ದೀನಿ ಮತ್ತೆ ಅಷ್ಟೆತಾನೇ ನಂಗೆ ಮೂವರು ಗಂಡು ಮಕ್ಕಳು 2 ಹೆಣ್ಣುಮಕ್ಕಳು ಆದ್ರ ಯಾರೂ ಸೇರಲ್ಲಾ ಸ್ವಾಮಿ ಬೆಳಿಗ್ಗೆ ಊಟ ತಂದುಕೊಡ್ತಾರೆ. ಮತ್ತು ರಾತ್ರಿ ಸ್ವಲ್ಪ ಊಟ ಕೊಡ್ತಾರೆ. ಅಷ್ಟೆ ಸ್ವಾಮಿ ಮಧ್ಯಾಹ್ನದಲ್ಲಿ ಊಟ ಇಲ್ಲಾ ಯಾಕಂದ್ರ ಅವರೆಲ್ಲಾ ಕೆಲಸಕ್ಕೆ ಹೋಗ್ತಾರೆ ಅವರ ಹೆಂಡತೀರು ಇರ್ತಾರೆ ಅವರು ನನ್ನ ಕಡೇನೂ ಸೇರಲ್ಲಾ ಸ್ವಾಮಿ. ನಂಗೆ ಸ್ನಾನಾನೂ ಇಲ್ಲಾ ಏನೇ ಇಲ್ಲಪ್ಪ ಭಾತ್ ರೂಮ್‌ಗೆ ಹೋಗಿ ನಾಲ್ಕೈದು7 ಸಲ ಬಿದ್ದಿದ್ದೀನಿ ಆದ್ರ ಯಾರಿಗಂತಾ ಹೇಳ್ಳಿ ಸ್ವಾಮಿ ನಮ್ಮ ತಲೆ ಭಾರ ನಾವೇ ತಾನೆ ಹೋರಬೇಕು. ಕಳೆದ 4 ವರ್ಷದಿಂದ ಮಗಳ ಮನೇಲಿ ತಂಗಿದ್ದೆ ನಾನು ನೀರು ಕೇಳ್ದಾಗ ಮತ್ತು ಶೌಚಾಲಯಕ್ಕೆ ಹೋಗ್ಬೇಕು ಅಂದಾಗ ಅವ್ಳು ನನ್ನನ್ನು ಬೈದು ಕಾಲಲ್ಲಿ ಒದಿದ್ದಾಳೆ ಸ್ವಾಮಿ ಅಷ್ಟೇ ಅಲ್ಲಾ ಏನೇನ್ ತಿಂತೀಯಾ ನಾಳೆಯಿಂದ ಊಟ ತಿನ್ ಬೇಡಾ ಅಂತಾ ಊಟ ಕೂಡ ಕಡಿಮೆ ಕೊಡ್ತಿದ್ಲು ಕೊನೆಗೆ ಎತ್ತಿ ಆಚೆ ಹಾಕಿದ್ರು ಆಚೆ ಕೂಡ ದರಿದ್ರ ಅಂತ ಎಲ್ಲನ್ನ ಮನೆಯಿಂದ ದೂರದಲ್ಲಿ ಮಲಿಕ್ಕೋ ಹೋಗು ಅಂತ ಅಂತಾರೆ ಅಲ್ಲಿ ಮಲಗ್ಬೇಕು ಅಂದ್ರ ಭಯ ಆಗುತ್ತೇ ಯಕಂದ್ರಾ ಹಾವುಗಳು ತುಂಬಾ ಇವೆ. ಈ ಕಡೆ ಮತ್ತು ಸೊಳ್ಳೆಗಳು ಕಿತ್ತುತಿಂತಾವೆ ನಾನೆಲ್ಲಪ್ಪಾ ಮಲಗ್ಲಿ ನಾನೀಗ ನನ್ನ ಚಿಕ್ಕ ಮಗನ ಮನೇಲಿ ಇದ್ದೀನಿ ಇವರೇನೋ ಚೆನ್ನಾಗಿ ನೋಡ್ತಾರೆ ಆದ್ರೆ ನಾನೇನು ಅವರ್ನ ಕೇಳಲ್ಲಾ ನಂಗೇನು ಸಮಸ್ಯೆ ಅಂದ್ರೆ ಸ್ನಾನ ಮತ್ತು ಶೌಚಾಲಯ ಇವರ ಮನೇನಲ್ಲಿ ಶೌಚಾಲಯ ಇಲ್ಲಾ ಅವರೂ ಆಚೆಕಡೆ ಹೋಗ್ತಾರೆ ನಾನೂ ಹೋಗ್ಬೇಕು ಆದ್ರೆ ನನ್ನಿಂದ ಆಗೋದಿಲ್ಲಾ ಅವರಿವರ್ನ ಒಂದು ಸಲ ಎರಡು ಸಲ ಅಂತ ಕರಿಬೋದು ಪದೇ ಪದೇ ಯಾರ್ನಪ್ಪಾ ಕರೀತೀಯಾ ಯಾರು ಬರ್ತಾರೆ ಯಾರು ಬರಲ್ಲಾ ಸ್ವಾಮಿ.

ನಾನೇ ನನ್ನ ಮೊಮ್ಮಗಳ್ನ ಕರೀತಿದ್ದೆ ಅವಳು ಕೂಡ ಬೈತಿದ್ಲು ಮತ್ತು ಅವರಮ್ಮ ಇದೇನಮ್ಮಾ ನೀನು ಚಿಕ್ಕ ಮಕ್ಕಳ ಕೈಯಲ್ಲಿ ಏನೇನೂ ಮಾಡಿಸ್ತೀಯಾ ಅಂತ ಬೈತಾರೆ ಸ್ವಾಮಿ

ನನ್ಮಗ ಮಾತ್ರ ಚೆನ್ನಾಗೇ ನೋಡ್ತಾನೆ. ನಂಗೇನು ಬೇಕಾದ್ರು ತಂಡ್ಕೊಡ್ತಾನೆ ಆದ್ರೆ ಸೊಸೆ ಮಾತ್ರ ಇರಿಸು ಮುರಿಸು ನನ್ಮಗ ಇದ್ದಾಗ ಚೆನ್ನಾಗೇ ನೋಡ್ತಾಳೆ ಅವನಿಲ್ದಿದ್ದಾಗ ಬೈತಾಳೆ ಆದ್ರೂ ಬೈಸ್ಕೋಬೇಕು ಯಾಕಂದ್ರೆ ನಂಗೆ ವಿಧಿ ಇಲ್ಲಾ ಅದಕ್ಕೆ ಇದನ್ನ ನನ್ಮಗನ ಹತ್ರ ಹೇಳಬೇಕಂದ್ರೆ ಒಂಥರ ಯಾವ ತರ ಹೇಳ್ಳಿ ನಾನು ಆಚೆ ಕಡೆ ಹೋಗ್ಬೇಕುಬಾಪ್ಪ ಅಂತ ಗಂಡಸ್ರನ್ನ ಕರಿಯೋಕೆ ಮನಸ್ಸು ಬರಲ್ಲಾ ಆದ್ರೆ ಹೆಂಗಸು ನನ್ನ ಸೊಸೆನ ಕೇಳಿದ್ರೆ ಅವಾಚ್ಯ ಶಬ್ದಗಳಿಂದ ಬೈತಾಳೆ ಮತ್ತು ಯಾಕ ತಿನ್ಬೇಕು ಅಘ ಕೂಳು ಅಂತಾಳೆ ಅದಕ್ಕೆ ನಾನೇ ಮಧ್ಯಾಹ್ನ ಮತ್ತು ರಾತ್ರಿ ಹೊತ್ತಲ್ಲಿ ಊಟ ಮಾಡಲ್ಲಾ ಒಂದ್ವೇಳೆ ಮಾಡ್ಲಿಲ್ಲಾ ಅಂದ್ರೂ ಯಾರೂ ಕೇಳಲ್ಲಾ ಯಾಕಂದ್ರ ಬೇಡವಾದ ಜೀವ ಇದು ಅಲ್ವಾ. ತುಂಬಾ ಸಲ ಹೊರಗಡೆ ಶೌಚಾಲಯಕ್ಕೆ ಹೋಗೊಕೆ ಆಗ್ದೆ ಬಟ್ಟೆಯಲ್ಲೇ ಮಾಡ್ಕೊಂಡಿದ್ದೀನಿ ಮತ್ತು ಹೋಗೋಕಾಗಿ ಬಿದ್ದೋಗಿ ತಲೆ ಬುರುಡೆ ಹೊಡ್ಕೊಂಡಿದ್ದೀನಿ ಈ ಥರ ಎಲ್ಲಾ ಕಷ್ಟಪಟ್ಟಿದ್ದೀನಿ ಸ್ವಾಮಿ ಈಗ್ಲೂ ಕಷ್ಟ ಪಡ್ತಾ ಇದಿನಿ. ನಮ್ಮನೇಗೆ ಸ್ವಲ್ಪ ದೂರದಲ್ಲೆ ಸಮುದಾಯ ಶೌಚಾಲಯ ಇದೆ ಅದಕ್ಕೆ ಹೋಗೋಕೆ ಆಗಲ್ಲಾ ಮುಂಚೆ ಹೋಗ್ತಿದ್ದೆ ಆದ್ರೆ ಅಲ್ಲೂ ಹೋಗಕ್ಕೂ ದುಡ್ಡು ಕಟ್ಬೇಕು ನನ್ನತ್ರ ದುಡ್ಡಿಲ್ಲಾ ಮತ್ತು ನಾನ್ ದುಡ್ಡಿದ್ರು ಹೋಗಲ್ಲಾ ಸ್ವಾಮಿ ಯಾಕಂದ್ರ ಅಲ್ಲಿ ಸರಿಯಾಗಿ ಕ್ಲೀನ್ ಮಾಡಲ್ಲಾ ಮತ್ತೇ ಸರಿಯಾಗಿ ಡೋರ್ ಇಲ್ಲಾ ಅದೂ ಗೋಣಿ ಚಿಲ ಕಟ್ಟಿದ್ದಾರೆ. ನಂಗಂತೂ ಸರಿಯಾಗಿ ಅಲ್ಲಿ ಕೂರೋಕೆ ಏರೋಕೆ ಆಗಲ್ಲಾ ಅದಕ್ಕೆ ನಾನೋಗಲ್ಲಾ.

ಇವೆಲ್ಲಾ ಹಿಂಸೆಯರಪ್ಪಾ ಅಂತ ರಾತ್ರಿ ಊಟ ಮಾಡೋದೆ ಇಲ್ಲಾ ಊಟ ಮಾಡಿದ್ರೆ ತಾನೆ ಹೋಗ್ಬೇಕು ಮಾಡ್ಲಿಲ್ಲಾ ಅಂದ್ರೆ ಏನು ಸಮಸ್ಯೆ ಇಲ್ವಲ್ಲಾ ಅಂಥ ಅನ್ಸಿ ಊಟ ಬಿಟ್ಟಿದ್ದೀನಿ. ಆರೋಗ್ಯದಲ್ಲಿ ಏರುಪೇರು ಅಂತ ಆಗ್ತಿದೆ ಆದ್ರೆ ಯಾರಿಗೆ ಹೇಳೋದು ಎಲ್ಲಾ ಹಿಂಸೇನೇ ನಮ್ಗೆ ಅದೆಲ್ಲಾ ಹೇಳೋಕೆ ತಯಾರಿದ್ರು ಕೇಳೋರು ತಯಾರಿಲ್ಲಾ ಸ್ವಾಮಿ. ಇತ್ತೀಚಿಗೆ ಹೊಟ್ಟೆ ನೋವು ತುಂಬಾ ಬರುತ್ತೆ ಮತ್ತು ಮೈ–ಕೈ ನೋವು ಜಾಸ್ತಿ ಇದೆ. ಮತ್ತು ಬಾಯಾರಿಕೆ ಆಗುತ್ತೆ ಆದ್ರೆ ನಮ್ಮನೇಲಿ ನೀರು ಕೋಡೋಕೆ ಯಾರೂ ಇಲ್ಲಾ ಅದಕ್ಕೆ ಯಾವ ನಿರನ್ನಾ ಆದ್ರು ಸರಿ ಅಂತ ಕುಡಿತೀನಿ ಸ್ವಾಮಿ ಅದೇ ಅರ್ಥ ನಂಗೆ ರೋಗ ಆಗಿದೆ. ಆದ್ರೆ ಆಯಿತು ಬಿಡು ಯಾವ್ರೋಗೋ ಸಾಯೋ ಪ್ರಾಣಕ್ಕೆ ಯಾಕೇ ಚಿಂತೆ ಆದ್ರೆ ಆದಷ್ಟು ಬೇಗ ಸತ್ರೆ ಒಳ್ಳೇದೆ ಈ ಹಿಂಸೆಗಳಿಂದ.

ಕುಟುಂಬ ಸೊಸೆ ಮತ್ತು ಮೊಮ್ಮಕ್ಕಳು ಅಭಿಪ್ರಾಯ:

ಎಷ್ಟು ಸಾರಿ ಅಂತ ಹೋಗೋದು ಸಾರ್ ನಾವ್ ತಾನೆ ನಮ್ಮನೇಲಿ ಶೌಚಾಲಯ ಇಲ್ಲಾ ನಾವೇ ಆಚೆಕಡೆ ಹೋಗ್ತೀವಿ ನಾವೋಗೊಕೆ ಭಯ ಆಗುತ್ತೆ ಸಾರ್ ಅದರಲ್ಲೂ ಈಯಮ್ಮನ್ನ ಹಿಡ್ಕೊಂಡು ಕರ್ಕೊಂಡು ಹೋಗ್ಬೇಕು ಅದು ಸಾಧ್ಯಾನಾ ಅದರಲ್ಲೂ ಈ ಏರಿಯಾ ತುಂಬಾನೇ ಕತ್ಲು ಬೀದಿ ದೀಪಾನೆ ಇಲ್ಲಾ ಯಾರನ್ನಾ ಬಂದು ಏನನಾ ಮಾಡಿದ್ರೆ ಏನ್ ಸಾರ್ ಗತಿ ನಾವ್ ಹೋಗೋದು ಬೆಳಿಗ್ಗೆ ಮತ್ತು ಸಾಯಂಕಾಲದಲ್ಲಿ ಮಾತ್ರ ಅದ್ರೆ ಈಕೆಗೆ ಬಂದಾಗಲೆಲ್ಲಾ ಹೋಗ್ಬೇಕು ಅದು ನಂಗೆ ಹೇಳಲ್ಲ ಬೈಯಿತೀನಿ ಅಂತ ನನ್ನ ಮಗಳಿಗೆ ಹೇಳ್ತಾಳೆ ಅವಳು ಬಸ್ಸಿನ ಹುಡುಗಿ ನಾನು ಯಾವ ತರ ಕಳಿಸ್ಲಿ ಸಾರ್ ಅವಳೇ ರಾತ್ರಿ ಹೊತ್ತು ನೀರು ಕುಡಿಯಲ್ಲಾ ಸರಿಯಾಗಿ ಯಾಕಂದ್ರ ಸಮಸ್ಯೆ ಇದೆ ಸಾರ್. ಈಯಮ್ಮ ಮಾತ್ರ ನಾವು ಕೂಡ ನಾನು ನನ್ನ ಮಗಳು ಸರಿಯಾಗಿ ಊಟ ಮಾಡ್ಬೇಕು ಅಂದ್ರ ಭಯ ಆಗುತ್ತದೆ ಸಾರ್ ರಾತ್ರಿಲೀ ಯಾವ ಟೈಂನಲ್ಲಿ ಬರುತೋ ಅಂತ. ಶೌಚಾಲಯ ಕಟ್ಸೋಕೆ ನಮ್ಮಲ್ಲಿ ದುಡ್ಡಿಲ್ಲಾ ಸಾರ್ ನಾವು ಕೂಲಿ ಮಾಡೋರು.

## ಮಧ್ಯಮ ವಯಸ್ಕ ಮಹಿಳೆಯೊಂದಿಗಿನ ಸಂದರ್ಶನದ ಸಾರಾಂಶ

**ಹೆಸರು: ಸುಜಾತ ಕಂಪ್ಲಿ ನಗರ**

ನಾನು ಕಂಪ್ಲಿ ನಗರಕ್ಕೆ ಸೇರಿದ್ದು ನಾನು ಮದುವೆಯಾಗಿ ಸೋಮನಾಥಪುರ ಎಂಬ ಹಳ್ಳಿಗೆ ಹೋದೆ ಅಲ್ಲಿ ನಮ್ಮ ಗಂಡನ ಮನೆಯಲ್ಲಿ ಶೌಚಾಲಯ ಇರಲಿಲ್ಲ. ಬದಲಿಗೆ ಸಮುದಾಯ ಶೌಚಾಲಯ ಇತ್ತು ಊರಿನ ಎಲ್ಲಾ ಮಹಿಳೆಯರೂ ಅಲ್ಲಿಗೆ ಹೋಗುತ್ತಿದ್ದರು. ಮತ್ತು ಅದನ್ನೇ ಬಳಸುತ್ತಿದ್ದರು. ಸಾಮಾನ್ಯವಾಗಿ ಹೆಚ್ಚು ಮಹಿಳೆಯರು ಹೋಗುವುದು ಮುಂಜಾನೆಯೇ ನಾನು ಕೂಡ ಮುಂಜಾನೇಯ ಹೋಗಬೇಕಾಗಿ ಬರುತ್ತಿತ್ತು. ಆದರೆ ಅಲ್ಲಿ ವಿಶೇಷವೆಂದರೆ ತುಂಬಾ ಹೆಂಗಸರು ಒಮ್ಮೆಲೆ ಬರುವುದರಿಂದ ಅಲ್ಲಿ ಜನ ಸಂದಣಿ ಹೆಚ್ಚಾಗುತ್ತಿತ್ತು. ಮತ್ತು ಎಲ್ಲರೂ ಸಾಲಾಗಿ ನಿಲ್ಲಬೇಕಾದ ಪರಿಸ್ಥಿತಿ ಏರ್ಪಡುತ್ತಿತ್ತು. ನಾನು ಕೂಡ ಹಲವು ಬಾರಿ ಆ ಸಾಲಿನಲ್ಲಿ ನಿಂತಿದ್ದೇನೆ. ಆದರೆ ಆ ರೀತಿ ನಿಲ್ಲಬೇಕಾದರೆ ಒಂದುಯ ರೀತಿಯ ಮುಜುಗರ ಆಗುತ್ತಿತ್ತು ಮತ್ತು ನಾಚಿಕೆಯಾಗುತ್ತಿತ್ತು. ಏಕೆಂದರೆ ಅದು ಗಂಡಸರು ಮತ್ತು ಹುಡುಗರು ಓಡಾಡುವ ಸ್ಥಳವಾಗಿತ್ತು ಮತ್ತು ರಸ್ತೆಯ ಬದಿಯಲ್ಲಿದ್ದರಿಂದ ಹಲವು ವಾಹನ ಸವಾರರು ಕೂಡ ನಮ್ಮನ್ನು ನೋಡಿಕೊಂಡು ಹೋಗುತ್ತಿದ್ದರು. ನಗುತ್ತಿದ್ದರು. ಹೊಸದಾಗಿ ಮದುವೆಯಾಗಿ ಆ ಊರಿಗೆ ಹೋಗಿರುವ ನಾನು ಎಲ್ಲರಿಗೂ ಅಪರಿಚಿತಳು ಮತ್ತು ನನಗೂ ಅವರು ಮತ್ತು ಆ ಸನ್ನಿವೇಶಗಳು ತುಂಬಾ ಹೊಸತು ಆದ್ದರಿಂದ ನನಗೆ ಆ ಸನ್ನಿವೇಶಕ್ಕೆ ಹೊಂದಿಕೊಳ್ಳಲು ತುಂಬಾ ಕಷ್ಟವಾಯಿತು. ಮತ್ತು ನನ್ನ ಕೈಯಲ್ಲಿ ಆ ಸನ್ನಿವೇಶಕ್ಕೆ ಹೊಂದಿಕೊಳ್ಳಲಾಗಲಿಲ್ಲ. ಕಾರಣ ನಮ್ಮ ತವರುಮನೆಯಲ್ಲಿ ಶೌಚಾಲಯ ವ್ಯವಸ್ಥೆ ಸುಗಮವಾಗಿತ್ತು ಮತ್ತು ಉತ್ತಮ ರೀತಿಯಾಗಿತ್ತು. ಆದ ಕಾರಣ ನಾನಂತೂ ತುಂಬಾ ತೀವ್ರ ರೀತಿಯ ಸಮಸ್ಯೆಯನ್ನು ಎದುರಿಸಿದೆ.

ಈ ರೀತಿಯ ವಿಷಯಗಳನ್ನು ನಮ್ಮ ಮನೆಯಲ್ಲಿ ಹೇಳು ನನ್ನ ಕೈಯಲ್ಲಿ ಆಗಲಿಲ್ಲ. ಮತ್ತು ಅದನ್ನು ಬಚ್ಚಿಡಲೂ ಆಗಲಿಲ್ಲ ಒಂದು ದಿನ ಧೈರ್ಯಮಾಡಿ ನನ್ನ ಗಂಡನ ಬಳಿ ಹೇಳಿದೆ ನನಗೆ ಹೊರಗಡೆ ಶೌಚಾಲಯಕ್ಕೆ ಹೋಗಲು ಕಷ್ಟವಾಗುತ್ತಿದೆ ಅಂತ ಅದಕ್ಕೆ ಆತನು ಯಾವುದೇ ಪ್ರತಿಕ್ರೆಯೆ ನೀಡಲಿಲ್ಲ. ಜೊತೆಗೆ ನನ್ನ ಮಾತನ್ನು ಪೂರ್ತಿಯಾಗಿ ಕೇಳಲಿಲ್ಲ. ಆದರೆ ನಾನು ಈ ಮುಜುಗರ

ವಿಷಯವನ್ನು ಯಾವ ರೀತಿಯಲ್ಲಿ ನಮ್ಮ ಮನೆ ಹಿರಿಯರ ಹತ್ತಿರ ಹೇಳಲಿ ಎಂದು ಆತಂಕ್ಕಕೊಳಗಾದೆ.

ಒಂದು ವೇಳೆ ಹೇಳಿದರೆ ಅವರು ನನ್ನನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ "ಏನಪ್ಪಾ ಈಯಮ್ಮ ನಿನ್ನ ಬಂದು ಸಮಸ್ಯೆ ಅಂತಿದ್ದಾಳೆ ನಮ್ಮನೇಲಿ ಯಾರೂ ಈ ಥರ ಅಂದಿಲ್ಲಾ ಇವರೇನೂ ಲಕ್ಷಾಧಿಕಾರಿಗಳೇ ಎಂದು ಎಲ್ಲಿ ಅಂದುಕೊಳ್ಳುತ್ತಾರೆ. ಅಂತ ಸ್ವತಃ ನಾನೇ ದಿನಕ್ಕೆ ಒಂದು ಬಾರಿ ಊಟ ಮಾಡುತ್ತಿದ್ದೆ. ಮತ್ತು ಮಧ್ಯಾಹ್ನದ ಹೊತ್ತಿನಲ್ಲಿ ಶೌಚಾಲಯ ಬಳಸಲು ಪ್ರಾರಂಭಿಸಿದೆ ಆದರೆ 1 ತಿಂಗಳ ನಂತರ ನನಗೆ ಗ್ಯಾಸ್ಟ್ರಿಕ್ಸ್ ಸಮಸ್ಯೆಯಿಂದ ಅನಾರೋಗ್ಯಕ್ಕೆ ಒಳಗಾದೆ ದಿನವಿಡೀ ತೀರಾ ಎದೆಯಲ್ಲಿ ಉರಿ ಮತ್ತು ತುಂಬಾ ಹೊಟ್ಟೆ ನೋವು ಕಾಣಿಸಿಕೊಂಡಿತು. ಆದರೆ ನಾನು ಯಾರ ಹತ್ರನೂ ಹೇಳಲಿಲ್ಲ. ನನ್ನಲ್ಲಿ ನಾನೇ ಸಮಸ್ಯೆಯನ್ನು ಅನುಭವಿಸುತ್ತಿದ್ದೆ. ಕೊನೆಗೆ ನನಗೆ ಹೊಟ್ಟೆ ನೋವಿನ ಸಮಸ್ಯೆ ತೀವ್ರರೀತಿಯಲ್ಲಿ ಕಾಣಿಸಿಕೊಂಡಿತು. ಆ ಸಂದರ್ಭದಲ್ಲಿ ನಾನು ನನ್ನ ಗಂಡನ ಮತ್ತು ಮನೆಯವರ ಬಳಿ ಹೇಳಿಕೊಂಡೆ ಒಂದೆರಡು ಬಾರಿ ನನಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಅವರು ನಂತರ ನಮ್ಮಲ್ಲಿ ಹಣವಿಲ್ಲ ಎಂದು ಸುಮ್ಮನಾದರು.

ಆದರೆ ನನ್ನ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯಿತು. ಕೊನೆಗೆ ನನ್ನ ಹೊಟ್ಟೆನೋವಿಗೆ ಕಾರಣವೇನು ಮತ್ತು ಯಾಕೆ ಪ್ರಾರಂಭವಾಯಿತೆಂದು ಹೇಳುಲು ಮುಂದಾದೆ, ಹೇಳಿದೆ ಆದರೆ ವಿಶೇಷವೆಂದರೆ ನನ್ನ ಈ ಸಮಸ್ಯೆಯನ್ನು ಯಾರೂ ನಂಬಲಿಲ್ಲ ಮತ್ತು ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂಬಂತೆ ಮಾತನಾಡಿದರು. ಮತ್ತು ನನ್ನ ಮೇಲೆ ಸಿಟ್ಟಾದರೂ. ಈ ರೀತಿಯ ನೋವಿನಿಂದ ನನಗೆ ತುಂಬಾ ಬೇಸರವಾಯಿತು ಮತ್ತು ದುಃಖವಾಯಿತು.

ಏಕೆಂದರೆ ಸಮಸ್ಯೆಗೆ ಕಾರಣಹೇಳಿದರೆ ಯಾರೂ ನಂಬಲ್ಲ ಅಲ್ಲಿ ಸಮಸ್ಯೆಯಿಂದ ಆದ ಪರಿಣಾಮ ಕೂಡ ಯಾರೂ ನಂಬಲ್ಲ ಒಮ್ಮೆಲೆ ನನಗೆ ವಿಪರೀತ ದುಃಖವಾಯಿತು. ಮತ್ತು ತೀವ್ರ ರೀತಿಯ ವೇದನೆಯಾಯಿತು. ಕೊನೆಗೆ ಈ ಸಮಸ್ಯೆಯಿಂದ ಹೊರಬರಬೇಕೆಂದು ಸ್ವಲ್ಪ ಚೇತರಿಸಿಕೊಂಡಿದ್ದೇನೆ. ಮತ್ತು ಯಾವುದೇ ಕಾರಣಕ್ಕೂ ಆ ಊರಿಗೆ ಹೋಗಬಾರದೆಂದು ನಿರ್ಧರಿಸಿದ್ದೇನೆ. ಏಕೆಂದರೆ ನನಗೆ ಆ ಸಮಸ್ಯೆ ಅಷ್ಟರ ಮಟ್ಟಿಗೆ ನನ್ನ ಮೇಲೆ ಪ್ರಭಾವ ಬೀರಿತ್ತು.

## ಮಧ್ಯಮ ವಯಸ್ಕ ಮಹಿಳೆಯೊಂದಿಗಿನ ಸಂದರ್ಶನದ ಸಾರಾಂಶ

**ಹುಲಿಗೆಮ್ಮ ಡಣಾಪುರ , ಕೂಲಿ ಕಾರ್ಮಿಕರು**

ನಾನು ಕಳೆದ 10 ವರ್ಷಗಳಿಂದ ಕೂಲಿಕೆಲಸ ಮಾಡಿ ಜೀವನ ನಡೆಸುತ್ತಿದ್ದೇನೆ. ಸ್ವಚ್ಛತೆ ಬಗ್ಗೆ ಹೇಳುವುದಾದರೆ ನಮ್ಮ ಮನೆ ಸುತ್ತಲೂ ಸ್ವಚ್ಛವಾಗಿ ಇಡಬೇಕೆಂಬುದನ್ನು ಅರಿತಿದ್ದೇನೆ. ಆದರೆ ನಾನು ಅದನ್ನು ಸೂಕ್ತ ರೀತಿಯಲ್ಲಿ ಪಾಲಿಸುತ್ತಿಲ್ಲ. ಏಕೆಂದರೆ ಬೆಳಗಿನಿಂದ ಸಂಜೆಯವರೆವಿಗೂ ದುಡಿಯಲು ಹೋಗುವ ನಾನು ಅದನ್ನು ಕಾಪಾಡಲು ಸಾಧ್ಯವಿಲ್ಲವೆಂಬುದು ನನ್ನ ಅಭಿಪ್ರಾಯ. ಪ್ರಸ್ತುತದಲ್ಲಿ ನಮ್ಮ ಮನೆಯಲ್ಲಿ ಶೌಚಾಲಯವಿಲ್ಲ ನಾವೇಲ್ಲರೂ ಬಯಲಿಗೆ ಹೋಗುತ್ತಿದ್ದೇವೆ. ಸಮಸ್ಯೆ ಎಂದರೆ ನಮಗೇನೂ ಸಮಸ್ಯೆ ಎನಿಸಿಲ್ಲಾ ಯಾಕೆಂದರೆ ಹುಟ್ಟಿನಿಂದಲೂ ಬಯಲಿಗೆ ಹೋಗುತ್ತಿದ್ದೇವೆ. ಆದರೆ ಕೆಲವು ಸಲ ಭಯ ಆಗುತ್ತದೆ. ಏಕೆಂದರೆ ಅದೂ ರಾತ್ರಿ ಹೊತ್ತಿನಲ್ಲಿ ಬಂದರೆ ಆ ವೇಳೆಯಲ್ಲಿ ಆಚೆ ಹೋಗಲು ಯಾರೂ ಮನಸ್ಸು ಮಾಡುವುದಿಲ್ಲ. ಮತ್ತು ಹೇಳಲಾಗದ ಆ ಸ್ಥಿತಿಯನ್ನು ನೆನೆಸಿಕೊಂಡರೆ ಭಯ ಅನಿಸುತ್ತದೆ.

ಅಷ್ಟೇ ಅಲ್ಲದೇ ಒಂದು ವೇಳೆ (ಬೇದಿ) ಯಾದರೆ ತುಂಬಾನೇ ಸಮಸ್ಯೆ ಅನ್ನಿಸುತ್ತದೆ. ಯಾಕೆಂದರೆ ಇತ್ತೀಚಿಗೆ ಸಮೀಪವಿರುವ ಹೊಲ, ಜಮೀನು, ತೋಟಗಳು, ಭದ್ರಗೊಂಡಿವೆ (ಬೇಲಿ) ನಾವು ಅದರಲ್ಲಿ ಕುಳಿಕರೆ ಆ ಜಮೀನು ಮಾಲೀಕರು ಬಂದು ಅವಮಾನ ಪಡಿಸುತ್ತಿರುವುದುಂಟು. ನಾವೇನೋ ದಿನದಲ್ಲಿ ಕೂಲಿಗೆಂದು ಹೋದಾಗ ಅಲ್ಲೆ ಮುಗಿಸಿಕೊಂಡು ಬರುತ್ತೇವೆ ಆದರೆ ಮನೆಯಲ್ಲಿ ಇರೋ ಗರ್ಭಿಣಿಯರು, ಮುದಿಯರು, ಮತ್ತು ವಯಸ್ಸಿನ ಹೆಣ್ಣುಮಕ್ಕಳು ತುಂಬಾನೇ ಸಮಸ್ಯೆ ಅನುಭವಿಸುತ್ತಾರೆ. ಅದರಲ್ಲೂ ಮಧ್ಯಾಹ್ನದ ಹೊತ್ತಿನಲ್ಲಿ ಹೋಗಬೇಕೆಂದರೆ ಈ ಬಿಸಿಲು ಮತ್ತು ಒಂದೆಡೆ ಕೂರಲು ಸಾಧ್ಯವಿಲ್ಲದ ಸ್ಥಿತಿ ಒಂದು ವೇಳೆ ಕುಂತರೆ ಭಯ ಯಾರನ್ನಾ ಬರುತ್ತಾರೇನೋ ಕುರಿ ಕಾಯುವವರು ಮತ್ತು ಹಲವು ಗಂಡಸರು ಈ ರೀತಿಯ ಸಮಸ್ಯೆಗಳೇನೋ ಅನುಭವಿಸುತ್ತಿರುವುದು ನಿಜ ಆದರೆ ಕಿತ್ತು ತಿನ್ನುವ ಬಡತನದಲ್ಲಿ ಶೌಚಾಲಯ ಕಟ್ಟಲು ಸಾಧ್ಯವಿಲ್ಲ ಒಂದು ವೇಳೆ ಕಟ್ಟಬೇಕೆಂದರೂ ಅದು ಸಾಧ್ಯವಿಲ್ಲ. ಯಾಕೆಂದರೆ ನನ್ನ ಅನುಭವ.

ನಮ್ಮ ಊರಿನಲ್ಲಿ ಪಂಚಾಯಿತಿ ಮತ್ತು ಸಖಿ ಸಂಸ್ಥೆಯ ಮಂಜುಳ/ ಪ್ರಹ್ಲಾದ್ ರವರು ಹಮ್ಮಿಕೊಂಡಿದ್ದ ಸ್ವಚ್ಛತಾ ಅರಿವು ಕಾರ್ಯಕ್ರಮದಲ್ಲಿ ತುಂಬಾ ಜನ ಶೌಚಾಲಯ ಕಟ್ಟಿಸಿಕೊಂಡರು ನಾವು ಸಹ ಅವರಲ್ಲಿ ಒಬ್ಬರಂತೆ ಆ ಹಣವನ್ನು ತೆಗೆದುಕೊಂಡೆವು ಹಣದ ಸ್ವೀಕರಿಸಿದ ನಂತರ ನಮ್ಮ ಯಜಮಾನ್ರು ಅದನ್ನು ಕಟ್ಟೋದು ನಿಲ್ಲಿಸಿಬಿಟ್ರು ಕೇಳಿದ್ದಕ್ಕೆ ಅಷ್ಟು ಹಣ ಒಂದು ಅಪ್ರಯೋಜನ ವಿಷಯಕ್ಕೆ ಬಳಸುವ ಬದಲು ಯಾವುದಾದರೊಂದು ಬಾಡಿಗೆ ಬಳಸಿದರೆ ಅಯಿತೆಂದು ಅಂದರು ನಾವು ಕೂಡ ಸುಮ್ಮನಾದೆವು. ಒಂದಂತೂ ನಿಜ ನಮಗೆ ಆಚಕಡೆ ಹೋಗುವುದು ಸಮಸ್ಯೆ ಆದರೆ ಮನೆಯಲ್ಲಿರೋ ಈ ಸಮಸ್ಯೆಗಳ ಮುಂದೆ ಅದೇನೂ ದೊಡ್ಡ ಸಮಸ್ಯೆ ಅಲ್ಲವೆಂಬುದು ನಮ್ಮ ಮನೆಯವರ ಮತ್ತು ನಮ್ಮ ಅಭಿಪ್ರಾಯ ಕೂಡ ಸಾರ್.

ಆಚಕಡೆ ಹೋಗುವುದು ಕಷ್ಟಾನೇ ಆದ್ರ ಅದನ್ನು ಮನೆಯಲ್ಲಿ ಹೇಳಿದ್ರ ಅದಕ್ಕೆ ಸರಿಯಾಗಿ ಸ್ಪಂಧನೆ ಸಿಗುವುದಿಲ್ಲಾ ಒಂದು ವೇಳೆ ಹೇಳಿದರೂ ಕೂಡ ಅದು ನಮ್ಮ ಮೇಲೆ ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ. ಏಕೆಂದರೆ ಇಷ್ಟು ವರ್ಷಗಳಿಂದ ಇಲ್ಲದ ಈ ಸಮಸ್ಯೆ ಈಗ ಮಾತ್ರ ಯಾಕೆ ಆಯಿತೆಂದು ಗುರ್ತಿಸಲ್ಪಡುತ್ತದೆ. ಅದಕ್ಕೆ ಯಾಕೆ ಬೇಕಿತ್ತು ಒಂದು ಸಮಸ್ಯೆಯನ್ನು ಇನ್ನೊಂದು ಸಮಸ್ಯೆಯಾಗಿ ಪರಿಣಮಿಸೋದು ಸಾರ್. ವಿಶೇಷವಾಗಿ ನಮ್ಮ ಮನೆಗಳಲ್ಲಿ ಶೌಚಾಲಯ ಕಟ್ಟೋಕೆ ಮುಂದಾಗುವುದಿಲ್ಲ ಏಕೆಂದರೆ ಅದು ಒಂದು ರೀತಿಯ ಸಂಪ್ರದಾಯ ಮತ್ತು ನಿಶಿದ್ದತೆ ಇದ್ದಂತೆ ಶೌಚಾಲಯ ಏನಿದ್ದರೂ ಊರಿನಿಂದ ಆಚೆಗೆ ಇರಬೇಕು ಅದನ್ನು ಯಾವುದೇ ಕಾರಣಕ್ಕೂ ಊರಿನಲ್ಲಿ ಕಟ್ಟಬಾರದೆಂದು ಮನೆಯವರ ವಾಡಿಕೆ. ನನ್ನ ಸ್ವಂತ ಅಭಿಪ್ರಾಯವೆಂದರೆ ಶೌಚಾಲಯ ಈ ರೀತಿಯ ಸಮಸ್ಯೆಗಳು ತುಂಬಾನೇ ಇವರ ಸಮಾಜದಲ್ಲಿ ವಿಶೇಷವಾಗಿ ಹೆಂಗಸರಿಗೆ ನಾವು ಹೇಳಿಕೊಳ್ಳಲಾಗದ ಸಮಸ್ಯೆಗಳು ಆದ್ದರಿಂದ ಹೇಳಿಕೊಂಡರೂ ಅದಕ್ಕೆ ಸೂಕ್ತ ಸ್ಪಂದನೆ ಬೇರೆ ಸಿಗುವುದಿಲ್ಲ ಆದ್ದರಿಂದ ಎಂದಿನಂತೆ ಬಯಲಿಗೆ ಹೋಗಬೇಕು ಮತ್ತು ನಮ್ಮ ಜಾಗೃತೆ ನಮಗಿರಬೇಕು. ಒಂದು ವೇಳೆ ಏನಾದರೂ ನಡೆಯಬಾರದು ಘಟನೆ ನಡೆದರೂ ಅದನ್ನು ಮನೆಯಲ್ಲಿ ಹೇಳಲಾಗದ ಸ್ಥಿತಿ ಮತ್ತು ಹೇಳಕೂಡದು. ಈ ರೀತಿಯ ಸಮಸ್ಯೆಗಳಿಂದ ದೂರ ಉಳಿಯಬೇಕಾದರೆ ನನ್ನ ಪ್ರಕಾರ ಶೌಚಾಲಯ ಕಟ್ಟಿಸಿಕೊಳ್ಳಬೇಕು. ಇಲ್ಲವಾದರೆ ಊಟ ಮತ್ತು ನೀರು ಮಿತವಾಗಿ ಸೂಕ್ತವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಯಾಕೆಂದರೆ ಈ ಸಮಸ್ಯೆಯ ಕಾರಣದಿಂದಾಗಿ ಸಾರ್.

ನಮ್ಮ ಆರೋಗ್ಯದಲ್ಲಿ ಏರುಪೇರಾದರೂ ನಮಗೆ ಭಗವಂತ ಬರೆದಿದ್ದು ಇಷ್ಟೆ ಅಂತ ಅನ್ನುತ್ತೆ ಸಾರ ಅಷ್ಟೆ. ಒಂದು ವಿಶೇಷವೆಂದರೆ ನಮ್ಮ ಮೇಲೆ ಯಾರಾದ್ರು ಕಣ್ಣು ಮಾಡಿದ್ರೆ ಕೀಟಲೆ ಮಾಡ್ತಿದ್ದಾರೆ ಅಂಥ ನಮ್ಮ ಮನೆಯವರ ಹತ್ರ ಹೇಳಿದ್ರೆ ಸಾಕು ಅವರ ಮೇಲೆ ಹಲ್ಲೆಗೆ ಹೋಗುತ್ತಾರೆ ಆದ್ರೆ ಶೌಚಾಲಯ ಮಾತ್ರ ಕಟ್ಟೋಕೆ ಮುಂದೆ ಬರೋದಿಲ್ಲಾ ಸಾರ್. ಇತ್ತೀಚಿಗೆ ನಮ್ಮ ಓಣಿಯಲ್ಲಿ ಒಬ್ಬ ಗರ್ಭಿಣಿ ಸ್ತ್ರೀ ಶೌಚ ಮಾಡಲು ಬಯಲಿಗೆ ಹೋಗಲು ಹೋಗಿ ಕಾಲು ಜಾರಿ ಬಿದ್ದು ಹೊಟ್ಟೆಗೆ ಪೆಟ್ಟಾಗಿ ಪ್ರಸವವಾಗದೆ ಸಾವನ್ನಪ್ಪಿದಳು ಆದರೆ ಅದನ್ನು ಕಾಲು ಜಾರಿ ಬಿದ್ದಳೆಂದು ತಿಳಿದುಕೊಂಡರಷ್ಟೆ ಅವರ ಮನೆಯವರು ಅದಕ್ಕೆ ಕಾರಣವೇ ಬೇರೆ ಶೌಚಾಲಯ.

ಆದ್ರೂ ಕೂಡ ಅವರ ಮನೆಯಲ್ಲಿ ಶೌಚಾಲಯ ಕಟ್ಟಿಸಿಲ್ಲಾ ಯಾಕೆಂದರೆ ಅದು ಮನೆ ಹತ್ರ ಇರಬಾರದು ಅಂತಾರೆ ಈ ತರ ಸಂಪ್ರದಾಯ ಇದೆ ಸಾರ್. ಪ್ರಾಣ ಹೋದ್ರು ಚಿಂತೆ ಇಲ್ಲಾ ಅಂತಾರ್ ಸಾರ್ ಜನ ನಾವೇನನ ಹೇಳೋಕೆ ಮುಂದಾದರೆ ನಿಂಗೇನು ಗೊತ್ತು ಸುಮ್ಮನಿರು ಅಂತ ನಮ್ಮ ಬಾಯಿ ಮುಚ್ಚಿಸುತ್ತಾರೆ ಸಾರ್. ಅಂಥದ್ದರಲ್ಲಿ ನಾವು ಯಾವ ತರ ನಮ್ಮ ಸಮಸ್ಯೆಗೆ ಪರಿಹಾರ ತೆಗೆದುಕೊಳ್ಳು ಸಾಧ್ಯ ಸಾರ್. ಬಯಲಿಗೆ ಹೋದಾಗ ನಮಗೆ ಏನೇ ಸಮಸ್ಯೆಯಾದ್ರೂ ಕೂಡ ಅದನ್ನು ಸಹಿಸಿಕೊಂಡಿರಬೇಕು ಅಷ್ಟೇ ನಮ್ಮ ಪಾಲಿಗೆ ಸೂಕ್ತ ಸಾರ್.

**ವಿಕಲ ಚೇತನ ಮಹಿಳೆಯೊಂದಿಗೆ ಸಂದರ್ಶನದ ಸಾರಾಂಶ:-**

**ಹೆಸರು: ಮಲ್ಲಿಕಾ, ಎಸ್.ಎಲ್.ಚೌಕಿ, (ಸ್ಲಂ)**

ನಾವು ಕಳೇದ 25 ವರ್ಷಗಳಿಂದ ಈ ಸ್ಲಂನಲ್ಲಿ ವಾಸವಾಗಿದ್ದು ಒಂದಿಷ್ಟು ಸುಖ ಮತ್ತು ದುಃಖಗಳ ನಡುವೆ ಜೀವನ ಸಾಗಿಸುತ್ತಿದ್ದೇವೆ. ಸಮಸ್ಯೆಗಳ ವಿಷಯಕ್ಕೆ ಬಂದಾಗ ಪ್ರಸ್ತುತ ಮತ್ತು ಹಿಂದೆ ನಾವು ತೀವ್ರರೀತಿಯ ಸಮಸ್ಯೆಗಳಿಂದ ಬಳಲಿದ್ದೇವೆ. ಮತ್ತು ಬಳಲುತ್ತಿದ್ದೇವೆ. ಏಕೆಂದರೆ ಸ್ಲಂ ನಲ್ಲಿರುವ ನಾವು ಸದರಿ ಶೋಷಣೆಗೆ ಒಳಗಾಗಿದ್ದು ರಾಜಕಾರಣಿಗಳು ಮತ್ತು ಇತರೆ ನಾಯಕರ ಕಪಿಮುಷ್ಠಿಯಲ್ಲಿ ನರಳುವಂತಾಗಿದೆ. ನಮಗೆ ಸಮಸ್ಯೆ ಎಂದರೆ ನೀರಿನ ಸಮಸ್ಯೆ ಅತೀವವಾಗಿದೆ ಮತ್ತು ನನ್ನ ಪಾಲಿಗೆ ಸೂಕ್ತ ಶೌಚಾಲಯ ಅಗತ್ಯವಿದೆ. ನಮ್ಮ ಸ್ಲಂ ನಲ್ಲಿ ಸಮುದಾಯ ಶೌಚಾಲಯವಿದ್ದು ಅದನ್ನು ಬಳಸಲು ಯೋಗ್ಯಕರವಲ್ಲದ ಸ್ಥಿತಿಯಲ್ಲಿದೆ.

ಈ ಶೌಚಾಲಯ ವಿಷಯದಲ್ಲಿ ನಾನಂತೂ ತುಂಬಾ ತೊಂದರೆಗಳನ್ನು ಅನುಭವಿಸುತ್ತಿದ್ದೇನೆ. ಏಕೆಂದರೆ ಅಂಗವಿಕಲಳಾದ ನಾನು ಬೇರೊಬ್ಬರ ಸಹಾಯವಿಲ್ಲದೆ ಶೌಚಾಲಯಕ್ಕೆ ಹೋಗಲು ಸಾದ್ಯವಿಲ್ಲ. ಮತ್ತು ಒಂದು ವೇಳೆ ಸಹಾಯದೊಂದಿಗೆ ಹೋದರೂ ಕೂಡ ಅಲ್ಲಿ ಮಾನಸಿಕ ಹಿಂಸೆ ಏಕೆಂದರೆ  ಅದು ಅಂಗವಿಕಲರಿಗೆ ಕೂರಲು ಆಗುವುದಿಲ್ಲ. ಆದ್ದರಿಂದ ನಾನು ತುಂಬಾನೇ ವ್ಯಥೆ ಪಟ್ಟಿದ್ದೇನೆ. ಮತ್ತು ನೊಂದಿದ್ದೇನೆ. ಇನ್ನು ಮನೆಯ ಬಳಿ ಶೌಚಾಲಯ ಕಟ್ಟಿಸಿಕೊಳ್ಳು ಜಾಗದ ಕೊರತೆ ಮತ್ತು ಬಡತನ ಈ ರೀತಿಯ ಸಮಸ್ಯೆಗಳಲ್ಲಿ ನಾವು ಶೌಚಾಲಯ ಕಟ್ಟಿಸಿಕೊಳ್ಳು ಸಾಧ್ಯವಿಲ್ಲದಂತಾಗಿದೆ. ಮತ್ತು  ಈ ಸಮಸ್ಯೆಗೆ ಪರಿಹಾರ ಕೂಡ ಕಾಣಿಸಿದಂತಾಗಿದೆ. ಒಂದು ವೇಳೆ ದಿನದ ಹಗಲಿನಲ್ಲಿ ಶೌಚಕ್ಕೆ ಬಂದರೆ ಬೇರೊಬ್ಬರ ಸಹಾಯದಿಂದ ನಾನು ಹೋಗಿ ಬರುತ್ತೇನೆ. ಆದರೆ ರಾತ್ರಿಯ ಹೊತ್ತಲ್ಲಿ ಮತ್ತು ಮುಂಜಾನೆಯಲ್ಲಿ ಬಂದರೆ ಅಂತೂ ತುಂಬಾ ಹಿಂಸೆ ಆಗುತ್ತದೆ. ಮತ್ತು ತೀವ್ರ ರೀತಿಯ ಹಿಂಸೆ ಒಳಗಾಗುತ್ತೇವೆ.

ನನ್ನ ವೈಯುಕ್ತಿಕ ಹಿಂಸೆ ಎಂದರೆ ಒಂದು ದಿನ (ನಾನು ) ನಮ್ಮ ಮನೆಯಲ್ಲಿ ಹಬ್ಬ ಮಾಡಿದ್ದರು ತುಂಬಾ ರುಚಿಕರ ಊಟ ಮಾಡಿದ್ದರೂ ಆ ದಿನ ನಾನು ಹೊಟ್ಟೆ ತುಂಬಾ ಊಟ ಮಾಡಿದೆ ಆದರೆ  ಆ ಸಮಯದಲ್ಲಿ ನನಗೇನೂ ಆನಿಸಲಿಲ್ಲ. ಆದರೆ ಅವತ್ತು ರಾತ್ರಿ ಪೂರಾ

ಹೊಟ್ಟೆನೋವು ಕಾಣಿಸಿಕೊಂಡಿತು ಆದರೆ ನಾನು ನನ್ನ ಮಿತಿಗಿಂತ ಹೆಚ್ಚು ಊಟ ಮಾಡಿಲ್ಲಾ ಆದರೆ ಯಾವತ್ತೂ ರಾತ್ರಿಯ ಹೊತ್ತಲ್ಲಿ ಅಲ್ಪ ಊಟ ಮಾಡುತ್ತಿದ್ದು  ನಾನು ಒಮ್ಮೆಲೆ ಜಾಸ್ತಿ ಊಟ ಮಾಡಿದ್ದಕ್ಕಾಗಿ ಈ ವ್ಯತ್ಯಾಸ ಕಂಡು ಬಂದಿತು. ಮತ್ತು ಅಂದಿನ  ರಾತ್ರಿ ನಾನು ಸುಮಾರು 4 ತಾಸುಗಳಿಗೂ ಹೆಚ್ಚು ಹೊತ್ತು ನೋವು ಅನುಭವಿಸಿದ್ದೇನೆ. ಮತ್ತು ಯಾರನ್ನೂ ಎಬ್ಬಿಸಿಲ್ಲಾ ಯಾಕೆಂದರೆ  ಒಂದು ವೇಳೆ ಎಬ್ಬಿಸಿದರೆ ಅವರಿಗೆ ತೊಂದರೆ ಕೊಟ್ಟಂತಾಗುತ್ತದೆ ಎಂದು ನನ್ನ ನೋವನ್ನು ನಾನೇ ಅನುಭವಿಸಿದ್ದೇನೆ.

ಅಷ್ಟೇ ಅಲ್ಲಲಾ ನಾನು ಶೌಚಾಲಯಕ್ಕೆ ಹೋಗಬೇಕಾದರೂ ಕೂಡ ಕೆಲವೊಂದು ಬಾರಿ ಯಾರನ್ನೂ ಕರೆಯುವುದಿಲ್ಲ. ನಾನೇ ಏಕಾಂಗಿ  ಹೋಗುತ್ತೇನೆ. ಮತ್ತು ತುಂಬಾ ಸಲ ಬಿದ್ದು ಹೋಗಿದ್ದೇನೆ. ಏಕೆಂದರೆ ಸರಿಯಾಗಿ ಕೂರಲು ಮತ್ತು ಎದ್ದೇಳಲು ಆಗದೆ ಆದರೂ ಯಾರಿಗೂ ಈ ವಿಷಯ ಹೇಳೋದಿಲ್ಲ. ಒಂದೊಂದು ಸಲ ಅಂತೂ ಯಾರೇ ಮುಂಡಿಘಟ್ಟ ಎಂದೆನಿಸಿ ಬಿಡುತ್ತೆ ಸಾರ್.ಸಾಯೋದೆ ಲೇಸು ಅನ್ಸುತ್ತೆ (ಅಳು). ಹಗಲಲ್ಲಿ ನಮ್ಮನೇಲಿ ಯಾರೂ ಇರಲ್ಲಾ ಆ ಟೈಂನಲ್ಲಿ ನನಗೆ ಲೆಟ್ರೀನ್ ಬಂದರೆ ನಾನು ಸಮುದಾಯ ಶೌಚಾಲಯಕ್ಕೆ ಹೋಗಲು ಆಗುವುದಿಲ್ಲ ಆದ್ದಿಂದ ನಮ್ಮ ಮನೆಯ ಸುತ್ತಲಲ್ಲಿ ಕೂತು ಬರುತ್ತಿದ್ದೆ. ಆದರೆ ಆ ಥರ ಕೂರುತ್ತಿದ್ದಾಗ ಪಕ್ಕದ ಮನೆಯವರು ನೋಡಿ ಬೈತಾರೆ ಮತ್ತು ನಿಂದಿಸುತ್ತಾರೆ. (ಅವಾಚ್ಯ ಶಬ್ದಗಳಲ್ಲಿ) ಎಲ್ಲನ್ನಾ ಹೋಗಿ ಸತ್ತೋಗು ಅಂತಾರೆ ಮನೆನಲ್ಲಿ ಕೂಡ ಅದೇ ತರ ಅಂತಾರೆ ಸಾರ್ ಯಾಕೆ ಎಲ್ಲರ ಕೈಯಲ್ಲಿ ಬೈಯಿಸ್ತೀಯಾ ಇಲ್ಲಾ ಕಡಿಮೆ ಊಟ ಮಾಡು ಅಥವಾ  ಮಾಡ್ಲೇಬೇಡ ಅಷ್ಟೆ ನಮ್ಮನ್ನು ಮಾತ್ರ ಯಾರತ್ರನೂ ಬೈಯಿಸಬೇಡ ಅಂತಿರುತ್ತಾರೆ. ಆ ಕಡೆ ಅವರು ಬೈತಾರೆ ಈ ಕಡೆ ಮನೆಯಲ್ಲಿ ನಿಂದಿಸುತ್ತಾರೆ. ಆದರೆ ನನ್ನ ಸಮಸ್ಯೆಯಾರಿಗೆ ತಾನೇ ಅರ್ಥ ಆಗುತ್ತೇ ಸಾರ್ ಅದಕ್ಕೆ ತುಂಬಾ ಸಲ ನಿದ್ರೆ ಮಾತ್ರೆ ತೆಗೆದುಕೊಂಡಿದ್ದೀನಿ ಆದ್ರೆ ಪ್ರಾಣ ಮಾತ್ರ ಹೋಗಿಲ್ಲಾ ಸಾರ್ ಆ ಮೇಲೆ ಯೋಚನೆ ಮಾಡಿ ನಂಗೂ ಒಂದು ಜೀವನ ಇದೆ ಅಂತಾ ಸುಮ್ನೆ ಆದೆ.

ಅದಕ್ಕೆ ಈಗ ಊಟ ಕಡಿಮೆ ಮಾಡುತ್ತಿದ್ದೇನೆ. ಮತ್ತು ನೀರು ತುಂಬಾ ಕಡಿಮೆ ಕುಡಿಯುತ್ತಿದ್ದೇನೆ. ಇದರಿಂದ ಆರೋಗ್ಯದಲ್ಲಿ ಏರುಪೇರಾಗುತ್ತಿದೆ ಆದರೆ ಯಾರಿಗೂ ಹೇಳೋಣ ನಮ್ಮ ಸಂಕಷ್ಟ ಹೇಳಿದ್ರ ಪ್ರಯೋಜನವಿಲ್ಲ ಮತ್ತು ಅದನ್ನು ನಿಬಾಯಿಸೋ  ಶಕ್ತಿನೂ ನಂಗೆ ಇಲ್ಲಾ ಅದಕ್ಕೆ ನನ್ನ ಪಾಡಿಗೆ ನಾನು ಇದ್ದೀನಿ.

ನಂಗೆ ಶೌಚಾಲಯ ಕಟ್ಟಿಸಿಕೊಳ್ಳಬೇಕು ಅಂತ ಇದೆ ಆದರೆ ಮನೆನಲ್ಲಿ ನನ್ನ ಜೊತೆಗೆ ಬೆಲೆ ಇಲ್ಲ (ಕುಂಟಿ) ಆಂತ ಲೆಕ್ಕಕ್ಕೆ ತಗೋಳೋದಿಲ್ಲ ನನ್ನನ್ನು ಅದಕ್ಕೆ ನಾನು ಯಾರನ್ನು ಕೇಳಲ್ಲಾ ಮತ್ತೆ ನನ್ನ ಸಮಸ್ಯೆಯಯನ್ನು ಯಾರ ಹತ್ರನ್ನೂ ಹೇಳಲ್ಲಾ ಮತ್ತೆ ನನ್ನ ಸಮಸ್ಯೆಯನ್ನು ಯಾರ ಹತ್ರನೂ ಹೇಳಲ್ಲಾ ಎಷ್ಟು ದಿನ ಬದುಕಿದ್ರೆ ಅಷ್ಟು ದಿನ ಬದುಕಿ ಸಾಯೋದಷ್ಟೆ. ಒಂದು ರೀತಿಯಲ್ಲಿ ಹೇಳ್ಬೇಕಂದ್ರ ನಾನಂತೂ ಡೈಲೀ ಸಾಯ್ತಿದಿನಿ ಅದಂತೂ ನಿಜ. ಆದ್ರೆ ವಿಧಿಯಿಲ್ಲ ಸಾರ್. ಒಂಥರಾ ಶೌಚಾಲಯ ಕಟ್ಟಿಸ್ಕೊಳಕ್ಕೂ ನಂಗೆ ಯೋಗ್ಯತೆ ಇಲ್ಲಾ ಮತ್ತು ಇರೋ ಸಮುದಾಯ ಶೌಚಾಲಯಕ್ಕೆ ಹೋಗೋ ಯೋಗ್ಯತೆ ಇಲ್ಲಾ ಸರಿಯಾಗಿ ನನ್ನ ಸಮಸ್ಯೆನಾ ನಿಬಾಯಿಸೋ ಸಾಮರ್ಥ್ಯ ಕೂಡ ನಂಗೆ ಇಲ್ಲಾ ಯಾಕಪ್ಪಾ ಈ ಅಂಗವಿಕಲ ಹುಟ್ಟು ನಂಗೆ ಅಂತ ಅನ್ಸುತ್ತೆ ಸಾರ್.

**ಮನೆಯವರ ಅಭಿಪ್ರಾಯ.**

ಅವಳಿಗೆ ಯಾವತ್ತಂದ್ರೆ ಆಗ ಮತ್ತೆ ತುಂಬಾ ಸಲಕ ರಾತ್ರೀಲೀ ನಮ್ಮನ್ನು ಎಬ್ಬಿಸುತ್ತಾಳೆ ನಾನು ಆಚೆ ಹೋಗ್ಬೇಕು ಅಂತ ಯಾರಿಗೆ ತಾನೇ ಬೇಜಾರಾಗಲ್ಲ ಸಾರ್ ಅದಕ್ಕೆ ನಾನೇ ಹೇಳಿದ್ದದೆ ಊಟ ಕಡಿಮೆ ಮಾಡು ಮತ್ತು ನಮ್ಮನ್ನು ತೊಂದರೆಗೊಳಿಸಬೇಡ ಅಂತ. ನಮ್ಗಂತೂ ಇವಳಿಂದ ಪಕದ್ಮನೆಯವರೂ ಬೈತಾರೆ ಸಾರ್ ಯಾಕಂದ್ರ ಎಲ್ಲದರಲ್ಲೆ ಲೆಟ್ರಿನ್ ಮಾಡ್ತಾಳೆ ಸಾರ್. ಅದಕ್ಕೆ ಈಕೆಯಿಂದ ನಮಗೂ ಮಾನಸಿಕ ಹಿಂಸೆ ಇವಳನ್ನು ಬೈಯೋಕೂ ಆಗಲ್ಲಾ ಮತ್ತು ಆ ಕಡೆ ಅವರಿಗೆ ಸಮಾಧಾನ ಹೇಳೋಕೂ ಆಗಲ್ಲಾ ನಿಜವಾದ ಹಿಂಸೆ ನಮಗೇನೆ ಸಾರ್.

## ಮಧ್ಯಮ ವಯಸ್ಕ ಮಹಿಳೆಯೊಂದಿಗೆ ಸಂದರ್ಶನ ಸಾರಾಂಶ

**ರಾಧಿಕ ಕಂಪ್ಲಿ**

ನಾನು ಪ್ರಸ್ತುತ ಸಖಿ ಸಂಖೆಯಲ್ಲಿ ಟೈಲರಿಂಗ್ ತರಬೇತಿ ಪಡೆಯುತ್ತಿದ್ದೇನೆ. ನಾನು ಸುಮಾರು ವರ್ಷಗಳಿಂದ ಒಂದು ಸಮಸ್ಯೆಗೆ ಒಳಗಾಗಿದ್ದೇನೆ. ಮತ್ತು ಇದನ್ನು ಸಮಸ್ಯೆ ಎಂದು ಎನ್ನುವುದಕ್ಕಿಂತ ಮಾನಸಿಕ ಹಿಂಸೆ ಎಂದರೇನೇ ಚಂದ ಏಕೆಂದರೆ ನನ್ನ ಮನಸ್ಸಿನ ಮೇಲೆ ಈ ಸಮಸ್ಯೆಯು ಅಷ್ಟರ ಮಟ್ಟಿಗೆ ಪರಿಣಾಮ ಬೀರಿತ್ತು. ವಿಷಯವೆಂದರೆ ಶೌಚಾಲಯದ ಕೊರತೆ ಸಮಸ್ಯೆ ನಮ್ಮ ಮನೆಯಲ್ಲಿ ಶೌಚ್ಚಾಲಯದ ಕೊರತೆ ಇದೆ ಮತ್ತು ನನ್ನ ವಿದ್ಯಾಭ್ಯಾಸವೆಲ್ಲಾ ನಗರದ ಹಾಸ್ಟಲ್‌ನಲ್ಲಿ ನಡೆದಿದ್ದರಿಂದ ನನಗೆ ಆಗ ಯಾವುದೇ ರೀತಿಯ ಸಮಸ್ಯೆಗಳಿರಲಿಲ್ಲ. ಮತ್ತು ನಾನು ಊರಿಗೆ ಬಂದರೆ ನನಗೆ ಈ ಸಮಸ್ಯೆ ಕಾಡುತ್ತಿತ್ತು. ಯಾಕೆಂದರೆ ನಾನು ಬಯಲಿಗೆ ಹೋಗಬೇಕಾಗಿತ್ತು. ಇದು ನನಗೆ ಹವ್ಯಾಸವಿರಲಿಲ್ಲ. ಮತ್ತು ತುಂಬಾ ಮುಜುಗರವಾಗುತ್ತಿತ್ತು. ಏಕೆಂದರೆ ಮುಂಜಾನೆ ಅಥವಾ ರಾತ್ರಿಯ ವೇಳೆಯಲ್ಲಿ (ಚೋಂಬನ್ನು) ತೆಗೆದುಕೊಂಡು ಹೋಗುವುದು ಮತ್ತು ಊರಿನಿಂದ ದೂರ ನಡೆಯುವುದು ಭಯ ಆಗುತ್ತಿತ್ತು. ಈ ರೀತಿಯಾಗಿ ನನಗೆ ಬಯಲು ಶೌಚಾಲಯ ತುಂಬಾ ಹೆದರಿಕೆ ಮುಜುಗರ ನೀಡುತ್ತಿತ್ತು. ಅಲ್ಲದೇ ನಾನು ಹಲವು ಬಾರಿ ಶೌಚಾಲಯಕ್ಕೆ ಬಂದರು ಹೋಗಲು ಭಯವಾಗಿ ಸುಮ್ಮನಿದ್ದ ಸನ್ನಿವೇಶಗಳಿದ್ದವು ಮತ್ತು ಸುಮಾರು ಭಾರಿ ಅವಮಾನಕ್ಕೊಳಗಾದ ಸಂದರ್ಭಗಳಿದ್ದವು.

ಅದರಲ್ಲೂ ವಿಶೇಷವಾಗಿ ನಮ್ಮೂರಿನಲ್ಲಿ ಕಾಡುಪ್ರಾಣಿಗಳ ಕಾಟ ಜಾಸ್ತಿ (ಕರಡಿ) ಅವು ಮುಂಜಾನೆ ಮತ್ತು ರಾತ್ರಿಯ ವೇಳೆಯಲ್ಲಿ ಮಾತ್ರ ಅಡ್ಡಾಡುತ್ತಿರುತ್ತವೆ. ಎಂಬ ಭಯ ಬೇರೆ ಇತ್ತು ಮನದಲ್ಲಿ ಈ ರೀತಿ ಇರಬೇಕಾದರೆ ನನಗೆ ನನ್ನ ಮನೆಗೆ ಹೋಗಬೇಕೆಂದರೆ ಭಯ ಮತ್ತು ಮುಜುಗರವಾಗುತ್ತಿತ್ತು. ಈ ನನ್ನ ಸಮಸ್ಯೆಯನ್ನು ನಮ್ಮ ಮನೆಯವರ ಬಳಿ ಹೇಳಿಕೊಂಡೆ ಆದರೆ ಅದನ್ನು ಅವರು ಕಿವಿಗೆ ಕೂಡ ಹಾಕಿಕೊಳ್ಳಲಿಲ್ಲ ಮತ್ತು ಬದಲಿಗೆ ನನ್ನನ್ನೇ ಬೈದರು ಮತ್ತು ನನ್ನಲ್ಲೇ ತಪ್ಪಿದೆ ಎಂದು ಹಿತ ಹೇಳಲು ಪ್ರಾರಂಭಿಸಿದರು. ಇದರಿಂದ ನನಗೆ ತುಂಬಾನೇ ಬೇಸರವಾಯಿತು. ಮತ್ತು ದುಃಖ ಆಯಿತು ಆದರೆ ಆದನ್ನು ನಾನು ಯಾವ ರೀತಿ ವ್ಯಕ್ತಪಡಿಸಬೇಕೆಂಬುದು ನನಗೆ ಅರ್ಥವಾಗಲಿಲ ಜೊತೆಗೆ ಈ ನನ್ನ ಸಂಕಟವನ್ನು ಅನುಭವಿಸಲು

ನನ್ನ ಕೈಯಲ್ಲಿ ಆಗುತ್ತಿಲ್ಲಾ ಕೊನೆಗೆ ಮತ್ತೆ ನಾನು ನನ್ನ ಹಾಸ್ಟೆಲ್‌ಗೆ ಬಂದೆ ನಂತರ ಮೂರು ತಿಂಗಳ ಮನೆಕಡೆಹೋಗಲಿಲ್ಲಾ ನಮ್ಮ ಮನೆಯವರು ಪದೇ ಪದೇ ಕರೆಯಲು ಪ್ರಾರಂಭಿಸಿದರು. ಕೊನೆಗೆ ನಾನುಊರಿಗೆ ಹೋದೆ ಆಗ ನನ್ನನ್ನು ಕೇಳಿದರು ನಾನು ನನ್ನ ಸಮಸ್ಯೆಯನ್ನು ಅವರ ಮುಂದೆ ಹೇಳಿದಾಗ ಅವರು ಆಗ ಅದನ್ನು ಒಪ್ಪಿಕೊಂಡರು. ಆದರೆ ಶೌಚಾಲಯ ಕಟ್ಟಲು ನಮ್ಮಲ್ಲಿ ಹಣವಿಲ್ಲ ವೆಂಬ ರಾಗ ತೆಗೆದರು ಆಗ ನಾನು ನನ್ನ ಕಿವಿಗೆ ಇಟ್ಟಿದ್ದ ಓಲೆಯನ್ನು ಬಿಚ್ಚಿಕೊಪಡಲು ಮುಂದಾದೆ ಏಕೆಂದರೆ ನನಗೆ ನನ್ನ ಮಾನ ಮುಖ್ಯ ಸಮಾಜದಲ್ಲಿ ಸ್ಥಾನ ಅಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೆ.

ಆದರೆ ಇದರಿಂದ ಖಿನ್ನರಾದ ನಮ್ಮ ತಂದೆಯವರು ಕೊನೆಗೆ ಉತ್ತಮ ರೀತಿಯ ಶೌಚಾಲಯ ಕಟ್ಟಿಸಿಕೊಟ್ಟರು. ಈಗ ನಾನು ಪ್ರತಿ ಶನಿವಾರವೂ ನಮ್ಮ ಮನೆಗೆ ಹೋಗುತ್ತಿದ್ದೇನೆ. ಮತ್ತು ಆರಾಮಾಗಿ ಶೌಚಕ್ಕೆ ಹೋಗುತ್ತಿದ್ದೇನೆ. ಯಾವುದೇ ರೀತಿಯ ಭಯವಿಲ್ಲ. ಮತ್ತು ಯಾರಾದರೂ ಬಂದು ನೋಡುತ್ತಾರೇನೋ ಎಂಬ ಆತಂಕವಿಲ್ಲ ಈ ಎಲ್ಲಾ ಸಮಸ್ಯೆಗಳ ಸುಳಿಯಲ್ಲಿ ನಲುಗುತ್ತಿದ್ದ ನಾನು ಈಗ ಸುಖವಾಗಿದ್ದೇನೆ. ನನ್ನ ಪ್ರಕಾರ ಶೌಚಾಲಯ ಕಟ್ಟಿಸದಿರಲು ಕಾರಣವೆಂದರೆ ನನ್ನ ವಿಷಯದಲ್ಲಿ ನಡೆದದ್ದು ಮೊದಲಿಗೆ ಹಣದ ಸಮಸ್ಯೆ ಮತ್ತು ಜಾಗದ ಕೊರತೆ ಮತ್ತು ತುಂಬಾ ಮನೆಗಳಲ್ಲಿ ಹೆಂಗಸರ ಸಮಸ್ಯೆಗಳನ್ನು ಕಿವಿಗೆ ಕೂಡ ಹಾಕಿಕೊಳ್ಳುವುದಿಲ್ಲ ಗಂಡಸರು ಒಂದು ವೇಳೆ ಗಂಡಸರು ಒಪ್ಪಿಕೊಂಡರೂ ಮನೆಯಲ್ಲಿ ಇರೋ ಹಿರಿಯರು (ವೃದ್ಧರು) ಮಾತ್ರ ಸಂಪ್ರಾದಾಯ ಅದು ಮನೆ ಹತ್ರ ಇರಕೂಡದು ಅನಿಷ್ಠ ಅಂತ ಹೇಳ್ತಾರೆ.

ಆದ್ರೆ ವಯಸ್ಸಿನಲ್ಲಿರುವ ನಮ್ಮಂಥ ಹುಡುಗಿಯರಿಗಂತೂ ಅದು ತುಂಬಾನೇ ಸಮಸ್ಯೆ ಎಂದೆನಿಸಿದೆ ಯಾಕೆಂದರೆ ನಾವು ತಿಂಗಳಲ್ಲಿ ಆಗುವ ಮುಟ್ಟಿನ ಸಮಸ್ಯೆಯು ನಮಗೆ ತುಂಬಾ ನೋವು ತಂದುಕೊಡುತ್ತದೆ. ಆ ಸಂದರ್ಭದಲ್ಲಿ ನಾವು ಹೆಚ್ಚು ಸಮಯವನ್ನು ಅಲ್ಲಿ ಕಳೆಯಬೇಕಾಗುತ್ತದೆ. ಅಲ್ಲದೇ ತುಂಬಾನೇ ಹೊಟ್ಟೆ ನೋವು ಕಾಣಿಸುತ್ತದೆ. ಈ ಸಂದರ್ಭದಲ್ಲಿ ನರಕವು ಕಣ್ಣುಮುಂದೆ ನಿಂತಂತಿರುತ್ತದೆ. ಮತ್ತು ತೀವ್ರ ರೀತಿಯ ಸಮಸ್ಯೆ ಹಿಂಸೆಗೆ ದಾರಿ ಮಾಡಿಕೊಡುತ್ತದೆ. ಒಟ್ಟಾರೆಯಾಗಿ ನನಗೆ ಈಗ ಯಾವುದೇ ರೀತಿಯ ಸಮಸ್ಯೆಗಳಿಲ್ಲದೇ, ನೆಮ್ಮದಿಯಾಗಿ ಶೌಚಾಲಯಕ್ಕೆ ಹೋಗುತ್ತಿದ್ದೇನೆ.

ನನ್ನ ಅನುಭವದಲ್ಲಿ ನಾನು ನೋಡಿದಂತ ಅನೇಕ ಮನೆಗಳಲ್ಲಿ ನನ್ನಂಥಹ ಯುವತಿಯರು ಮಧ್ಯಮ ವಯಸ್ಸಿನ ಹೆಣ್ಣು ಮಕ್ಕಳು ಶೌಚಾಲಯದ ಕೊರತೆ ಸಮಸ್ಯೆಯನ್ನು ಎದುರಿಸುತ್ತಿದ್ದು ಅವರಿಗೆ ಶೌಚಾಲಯದ ಅಗತ್ಯತೆಯು ಅನಿವಾರ್ಯವಾಗಿರುತ್ತದೆ. ಆದರೆ ಮನೆಯಲ್ಲಿರುವ ಯಜಮಾನರುಮನೆಯವರು ಶೌಚಾಲಯ ಕಟ್ಟಲು ಮುಂದಾಗುವುದಿಲ್ಲಾ ಆದ್ದರಿಂದ ಅನೇಕ ನನ್ನಂಥ ಹೆಣ್ಣು ಮಕ್ಕಳು ಅಲ್ಲಿ ಸಮಸ್ಯೆಯನ್ನು ಅನುಭವಿಸಲಾಗದೆ ಇಲ್ಲಿ ಸಮಸ್ಯೆಗೆ ಪರಿಹಾರ ಸಿಗದೆ ನಿರಂತರ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ.

## ಮಧ್ಯಮ ವಯಸ್ಕ ಮಹಿಳೆಯೊಂದಿಗಿನ ಸಂದರ್ಶನ

**ಪದ್ಮಮ್ಮ ಕೂಲಿಕಾರ್ಮಿಕ (ದೇವದಾಸಿ)**

ನಾನು ಡಣಾಪುರ ವಾಸಿಯಾಗಿದ್ದು ನಮ್ಮ ಮನೆಯಲ್ಲಿ ಸೂಕ್ತ ರೀತಿಯ ಶೌಚಾಲಯವಿದೆ ಆದರೆ ನಮ್ಮ ನೆರೆಹೊರೆಯವರ ಮನೆಯಲ್ಲಿ ಮತ್ತು ನಮ್ಮ ಸಂಬಂಧಿಕರ ಮನೆಗಳಲ್ಲಿ ಕೂಡ ಶೌಚಾಲಯವಿಲ್ಲ. ಹಿಂದೆ ನಮ್ಮ ಮನೆಯಲ್ಲಿ ಕೂಡ ಶೌಚಾಲಯವಿರಲಿಲ್ಲ. ಆಗ ನಾನು ಕೂಡ ತುಂಬಾ ಕಷ್ಟ ಅನುಭವಿಸಿದ್ದೀನಿ ನಮ್ಮೂರ ರಸ್ತೆ ಬದಿಯಲ್ಲಿರುವ ಕಾರಣ ರಸ್ತೆಯಲ್ಲಿ ಓಡಾಡುವ ಜನರೆಲ್ಲಾ ನೋಡುವಂತೆ ನಮ್ಮೂರು ಕಾಣುತ್ತಿರುತ್ತದೆ. ಜೊತೆಗೆ ನಮ್ಮ ಊರು ಇತ್ತೀಚಿಗೆ ನಗರೀಕರಣದತ್ತ ದಾಪುಗಾಲು ಹಾಕುತ್ತಿರುವುದರಿಂದ ಎಲ್ಲರೂ ತಮ್ಮ ತಮ್ಮ ಜಮೀನುಗಳಿಗೆ ಬೇಲಿ ಮತ್ತು ಮುಳ್ಳುಗಂಬಿಯನ್ನು ಹಾಕಿಕೊಂಡು ಭದ್ರಪಡಿಸಿಕೊಳ್ಳುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಹೆಂಗಸರಾದ ನಾವು ಎಲ್ಲಿ ಶೌಚ ಮಾಡಬೇಕು ಎಂಬುದು ತುಂಬಾ ದುಃಖದ ಸಂಗತಿಯಾಗಿದೆ. ಮೊದಲಿನಿಂದಲೂ ಬಯಲನ್ನೇ ಅವಲಂಬಿಸಿರುವ ನಾವು ಒಮ್ಮೆಲೆ ಈ ಬದಲಾವಣೆಗಳನ್ನು ಕಂಡ ಮೇಲೆ ವಿಚಲಿತರಾಗಿದ್ದೇವೆ. ಯಾವುದಾದರೂ ಬಯಲಲ್ಲಿ ಕೂರಬೇಕೆಂದರೆ ಆ ಜಮೀನಿನವರ ಕಾಟ, ರಸ್ತೆಯ ಇಕ್ಕೆಲಗಳಲ್ಲಿ ಕೂರೋಣವೆಂದರೆ ವಾಹನ ಸವಾರರ ಮತ್ತು ಓಡಾಡುವವರ ಕಾಟ, ಈ ರೀತಿಯ ಪರಿಸ್ಥಿತಿಗಳಲ್ಲಿ ನನಗೆ ದಿಕ್ಕು ತೋಚದಂತಾಗುತ್ತಿತ್ತು. ಕಡೆಗೆ ಧೈರ್ಯಮಾಡಿ ನಾವು ಸಾಕುತ್ತಿದ್ದ ಎಮ್ಮೆಯನ್ನು ಮಾರಿ ಬಂದ 6000/– ಹಣದಲ್ಲಿ ಶೌಚಾಲಯ ನಿರ್ಮಿಸಿದ್ದೇವೆ. ಯಾಕೆಂದರೆ ಎಷ್ಟು ಬಾರಿ ಅಂತ ಹೊರಗಡೆ ಹೋಗೋದು ಮತ್ತು ಎಷ್ಟು ಸಲ ಅಂತ ಅವರಿವರ ಬಳಿ ಬೈಯಿಸಿಕೊಳ್ಳೋದು ಮತ್ತು ಯಾವ ರೀತಿ ಮಾನಸಿಕ ಹಿಂಸೆಯನ್ನು ತಡೆದುಕೊಳ್ಳೊದು ಅಂತ ಚಿಂತಿಸಿ ಈ ನಿರ್ಧಾರ ಕೈಗೊಂಡಿದ್ದೇನೆ. ಅಂದರೆ ಅಷ್ಟರ ಮಟ್ಟಿಗೆ ಆ ಸಮಸ್ಯೆ ನಮಗೆ ಹಿಂಸೆ ನೀಡಿತ್ತು. ಈಗ ನಾನು ಮತ್ತು ನನ್ನ ಮಗಳು ನೆಮ್ಮದಿ ಶೌಚಾಲಯಕ್ಕೆ ಹೋಗುತ್ತಿದ್ದೇವೆ. ನೆಮ್ಮದಿಯಾಗಿ ಕೂತು ಬರುತ್ತಿದ್ದೇವೆ. ಈ ರೀತಿಯ ಸಮಸ್ಯೆಗಳು ತುಂಬಾ ಹೆಂಗಸರಿಗೆ ಇದೆ ಅದರಲ್ಲೂ ಯವ್ವೌನದ ಯುವತಿಯರ ಪಾಡಂತೂ ತುಂಬಾ ಶೋಚನೀಯ ಆದರೂ ಶೌಚಾಲಯ ಕಟ್ಟಿಸಿಕೊಳ್ಳು ಮುಂದೆ ಬರುವುದಿಲ್ಲ. ಕಾರಣ

ಒಡತನ ಎನ್ನುವುದು ಕೆಲವ ಮಾತಾದರೆ ಅನಿಷ್ಠ ಎನ್ನುವುದು ಕೆಲವರ ಮಾತಾಗಿದೆ. ಅನಿಷ್ಠ ಎನ್ನುವುದು ಕೆಲವರಮಾತಾಗಿದೆ.

ನಾನು ಒಂದು ಬಾರಿ ನಮ್ಮ ನೆಂಟರ ಊರಿಗೆ ಹೋಗಿದ್ದೆ ಅದು ಮದುವೆ ಅಲ್ಲಿ ಆ ಊರಿನಲ್ಲಿ ಶೌಚಾಲಯವೇ ಇಲ್ಲಾ ಎಲ್ಲರೂ ಬಯಲಿಗೆ ಹೋಗುತ್ತಿದ್ದರು. ಮದುವೆಗೆ ಬಂದಿದ್ದ ಎಲ್ಲಾ ಹೆಂಗಸರು ಒಂದೇ ಸಲ ಎಲ್ಲಿ ಅಂತ ಹೋಗುವುದು ಅದು ಹೊಸ ಸ್ಥಳ ಬೇರೆ ಸುತ್ತಲೂ ಗದ್ದೆ, ತೋಟಗಳು ಓಡಾಡುವ ಜನರು ಎಲ್ಲಿ ನಾವು ಕೂರಬೇಕೋ ಯಾರು ಬರುತ್ತಾರೋ ಎಂಬ ಚಿಂತೆಯಾಗಿತ್ತು. ನಾನು ಅಲ್ಲಿದ್ದ 2 ದಿನ ಎರಡು ಬಾರಿ ಮಾತ್ರ ಊಟ ಮಾಡಿದ್ದೇನೆ. ಅಂದರೆ ದಿನಕ್ಕೆ ಒಂದು ಬಾರಿ ಏಕೆಂದರೆ ಎಲ್ಲಿ ಊಟ ಮಾಡಿದರೆ ಶೌಚಾಲಯಕ್ಕೆ ಹೋಗಬೇಕೋ ಎನ್ನುವ ಭಯ ನಾನೇ ಅಲ್ಲಾ ವಿಶೇಷವೆಂದರೆ ಮದುವೆಯ ಮಧುಮಗಳಿಗೂ ಊಟ ಕಡಿಮೆ ನೀಡಲಾಗತ್ತಿತ್ತು. ಕಾರಣ ನಮ್ಮ ಸಂಪ್ರಾದಯದಂತೆ ಮದುವೆ ಹೆಣ್ಣು ಮದುವೆಯಲ್ಲಿ ಕಡಿಮೆ ಊಟ ಮಾಡಬೇಕೆಂಬುದು ವಾಡಿಕೆ ಆದರೆ ನಿಜವಾದ ಸಂಗತಿಯೆಂದರೆ ಆಕೆ ಒಂಟಿಯಾಗಿ ಆಚೆಗೆ ಹೋಗಬಾರದು ಮತ್ತು ಎಲ್ಲಿ ತಂಗಬಾರದು ಆದ್ದರಿಂದ ಒಂದು ವೇಳೆ ಆಕೆ ಹೆಚ್ಚಾಗಿ ಊಟ ಮಾಡಿದರೆ ಶೌಚಾಲಯಕ್ಕೆ ಹೋಗಬೇಕಾಗುತ್ತದೆ., ಶೌಚಾಲಯದ ಕೊರತೆಯ ಕಾರಣವಾಗಿ ಆಕೆಯನ್ನು ಬಯಲಿಗೆ ಕರೆದುಕೊಂಡು ಹೋಗಬೇಕಾಗುತ್ತದೆ ಇದು ಸಂಪ್ರಾಯವಲ್ಲವೆಂದು ಸಂಪ್ರದಾಯದ ಹೆಸರಿನಲ್ಲಿ ಸಮಸ್ಯೆಯನ್ನು ಮುಚ್ಚಿಸುತ್ತಿದ್ದಾರೆ ಎಂಬುದು ಸತ್ಯ ಸಂಗತಿ.

ನಾನೇ ಅಲ್ಲ ಅಲ್ಲಿದ್ದ ಸುಮಾರು ಜನ ಮಹಿಳೆಯರು ಸರಿಯಾಗಿ ಊಟ ಮಾಡುತ್ತಿರಲಿಲ್ಲ. ಕಾರಣವೇನೆಂದರೆ ಎಲ್ಲರೂ ಎನ್ನುತ್ತಾರೆ (ಗಂಡಸರು) ಮಹಿಳೆಯರು ಕೆಲಸಗಳಲ್ಲಿ ತುಂಬಾ ಕಾರ್ಯನಿರತರಾಗಿದ್ದಾರೆ. ಆದ್ದರಿಂದ ಅವರು ಹೆಚ್ಚಾಗಿ ಊಟ ಮತ್ತು ನೀರು ಕುಡಿಯುತ್ತಿಲ್ಲ ಎಂದು ಆದರೆ ಅದರರ್ಥನೇ ಬೇರೆಯಾಗಿದೆ. ನಾವು ಊಟ ಮತ್ತು ನೀರು ಹೆಚ್ಚಾಗಿ ಕುಡಿದರೆ ಶೌಚಾಲಕಯಕ್ಕೆ ಹೋಗಬೇಕಾದೀತು. ಆ ತೊಂದರೆಗೋಸ್ಕರ ನಾವು ಊಟ ಮಾಡುತ್ತಿಲ್ಲಾ ಆದರೆ ಈ ವಿಷಯವನ್ನು ಹೇಳು ನಮಗೆ ಮುಜುಗರವಾಗುತ್ತದೆ. ಈ ರೀತಿ ನಾವು ಹೇಳದೆ ನಾವು ಅನುಭವಿಸಲಾಗದ ನಮ್ಮ ನೋವನ್ನು ನಾವೇ ಅಡಗಿಸಿಕೊಳ್ಳುತ್ತಿದ್ದೇವೆ. ಮತ್ತು ಸದಾ

ಮನೋವೇದನೆಗೆ ಒಳಗಾಗುತ್ತಿದ್ದೇವೆ. ಆದರೆ ನೋಡುರ ಕಣ್ಣಿಗೆ ಅದು ತಿಳಿಯುವುದು ಬೇರೆ ರೀತಿಯಲ್ಲಿ ಈ ರೀತಿಯ ಹಿಂಸೆಗೆ ನಮ್ಮಂಥ ಹೆಂಗಸರು ಬಲಿಯಾಗುತ್ತಿದ್ದಾರೆ.

ಈ ರೀತಿಯ ಸಮಸ್ಯೆಗಳನ್ನು ಗಂಡಂದಿರ ಅಥವಾ ಮನೆ ಮಂದಿಯ ಬಳಿ ಚರ್ಚೆ ಮಾಡುವುದು ಅವಮಾನಕಾರವಾಗುತ್ತದೆ. ಒಂದು ವೇಳೆ ಚರ್ಚೆ ಮಾಡಿದರೂ ಕೂಡ ಅದಕ್ಕೆ ತಕ್ಕ ಉತ್ತರ ಸಿಗುವುದಿಲ್ಲ ಅವರ ಕಡೆಯಿಂದ ಬದಲಿಗೆ ನಮ್ಮನ್ನೇ ದೋಷಿಸುತ್ತಾರೆ. ನನಗೆ ಗಂಡ ಇಲ್ಲಾ (ದೇವದಾಸಿ) ಆದ ಕಾರಣ ನಾನೇ ದುಡಿದು ಸಂಪಾದಿಸಿದ್ದೆ. ಅದಕ್ಕೆ ನಾನೇ ಅದನ್ನು ಮಾರಿದೆ (ಎಮ್ಮೆ) ಶೌಚಾಲಯ ಕಟ್ಟಿಸಿಕೊಂಡೆ ಏಕೆಂದರೆ ನಾನು ಪಡುತ್ತಿದ್ದ ಹಿಂಸೆ, ಕಷ್ಟ ನನ್ನ ಮಗಳಿಗೆ ಬೇಡ ಎನ್ನುವ ಒಂದು ಪರಿಕರದ ಮೇಲೆ ಈ ರೀತಿ ಮಾಡಿದೆ. ಆದರೆ ಒಂದಂತೂ ನಿಜ ಸಾರ್ ನಮ್ಮಂಥ ಹೆಂಗಸರಿಗೆ ಶೌಚಾಲಯದ ಅಗತ್ಯ ಇದೆ. ಆದ್ರೆ ಮನೆಯಲ್ಲಿ ಅದನ್ನು ಒಪ್ಪಿಒಕೊಳ್ಳುವುದಿಲ್ಲ. ಹೆಂಗಸರ ಬೇಡಿಕೆಗಳಿಗೆ ಸ್ಪಂದನೆ ಸಿಗುವುದಿಲ್ಲಾ ಸಾರ್ ಯಾಕೆಂದರೆ ಸುಮಾರು ನನ್ನ ಸ್ನೇಹಿತರು ನನ್ನ ಬಳಿ ಹೇಳಿದ್ದಾರೆ. ಅವರೂ ಕೂಡ ಈ ಹಿಂಸೆನ ಅನುಭವಿಸುತ್ತಿದ್ದಾರೆ. ಮತ್ತು ಹಲವು ಸಲ ಅವರು ಅವರವರ ಮನೆಗಳಲ್ಲಿ ಚರ್ಚೆ ಕೂಡ ಮಾಡಿದ್ದಾರೆ. ಆದರೆ ಪರಿಹಾರ ಸಿಕ್ಕಿಲ್ಲಾ ಈಗಲೂ ಸುಮಾರು ನಮ್ಮ ಅಕ್ಕ ಪಕ್ಕದ ಹೆಣ್ಣು ಮಕ್ಕಳು ನಮ್ಮ ಶೌಚಾಲಯವನ್ನು ಬಳಸುತ್ತಿದ್ದಾರೆ. ಯಾಕೆಂದರೆ ಅವರಿಗೆ ಬಯಲಿನ ಸಮಸ್ಯೆ ಅಷ್ಟು ತೀವ್ರರೀತಿಯಲ್ಲಿದೆ ಮತ್ತು ನಾನು ಅದನ್ನು ಅನುಭವಿಸಿದ್ದೇನೆ. ಆದ್ದರಿಂದ ನಾನೇನು ಅವರನ್ನು ಅನ್ನುವುದಿಲ್ಲಾ ಸಾರ್.

## ವಿಕಲಚೇತನರೊಂದಿಗಿನ ಸಂದರ್ಶನ

**ಹೆಸರು: ಗಂಗಾ (ಅವಿವಾಹಿತೆ)**

ನಾನು ರಾಮಸಾಗರದಲ್ಲಿ ವಾಸಿಸುತ್ತಿದ್ದು ನನಗೆ ಈಗ 38 ವರ್ಷ ವಯಸ್ಸು ನಾನು ಹುಟ್ಟಿನಿಂದ ಅಂಗವಿಕಲೆ ಎರಡೂ ಕಾಲು ಕೂಡ ಊನ ಸ್ಥಿತಿಯಲ್ಲಿವೆ ನಾನು ಸರಿಯಾಗಿ ನಡೆಯಲು ಮತ್ತು ಕೊರಲು ಏರಲು ಆಗುವುದಿಲ್ಲಾ. ನಾನು ಎಲ್ಲಿಗಗೆ ಹೋಗಬೇಕಾದರೂ ನಮ್ಮ ಮನೆಯವರು ನನ್ನನ್ನು ಕರೆದೊಯ್ಯುತ್ತಾರೆ ಮತ್ತು ನನಗೆ ಏನೂ ಬೇಕೆಂದರೂ ಅವರೇ ತಂದು ಕೊಡುತ್ತಾರೆ. ಶೌಚಾಲಯ ವಿಷಯಕ್ಕೆ ಬಂದಾಗ ನನಗೆ ತುಂಬಾನೇ ಕಷ್ಟ ಅನಿಸುತ್ತದೆ ಏಕೆಂದರೆ ಬೇರೊಬ್ಬರ ಸಹಾಯದ ಮೂಲಕ ಕೆಲಸ ಕಾರ್ಯಗಳನ್ನು ಮಾಡುತ್ತಿರುವ ನಾನು ಈ ಕಾರ್ಯಕ್ಕೆ ಬೇರೊಬ್ಬರ ಸಹಾಯ ಪಡೆಯಲು ಬೇಸರವಾಗುತ್ತದೆ. ಏಕೆಂದರೆ ಅವರೇನು ಅಂದುಕೊಳ್ಳುತ್ತಾರೋ ಮತ್ತು ನಾನು ಶೌಚಾಲಯ ಮಾಡಬೇಕಾದರೆ ಅವರನ್ನು ನಮ್ಮ ಮುಂದೆ ನಿಲ್ಲಿಸಿಕೊಳ್ಳಬೇಕು ಅದಕ್ಕೆ ಅವರೆಷ್ಟು ಬೇಸರ ಮಾಡಿಕೊಳ್ಳುತ್ತಾರೋ ಎಂಬ ಮನೋ ವೇದನೆ ಕಾಡುತ್ತಿರುತ್ತದೆ.

ನಮ್ಮ ಮನೆಯಲ್ಲಿ ಶೌಚಾಲಯ ಇಲ್ಲ ಆದ್ದರಿಂದ ನಾನು ಬಯಲಿಗೆ ಹೋಗಿ ಬರುತ್ತೇನೆ. ಕೆಲವು ಬಾರಿ ಮನೆಯವರ ಸಹಾಯದೊಂದಿಗೆ ಹೋಗುತ್ತೇನೆ. ಕೆಲವು ಬಾರಿ ನಾನೇ ಹೋಗುತ್ತೇನೆ. ನಾನೇ ಒಂಟಿಯಾಗಿ ಹೋಗುವ ವೇಳೆಯಲ್ಲಿ ತುಂಬಾ ಕಷ್ಟ ಮತ್ತು ನೋವು ಅನಿಸುತ್ತದೆ. ಏಕೆಂದರೆ ಎಲ್ಲಾ ಹೆಂಗಸರೂ ಶೌಚ ಮಾಡಲು ಅದೇ ಸ್ಥಳಕ್ಕೆ ಹೋಗುತ್ತಾರೆ. ನಾನೂ ಕೂಡ ಅದೇ ಸ್ಥಳಕ್ಕೆ ಹೋಗಬೇಕಾಗುತ್ತದೆ. ಅಂಥಹ ಸಂದರ್ಭದಲ್ಲಿ ಮೊದಲೇ ಗಲೀಜಿನಿಂದ ಕೂಡಿದ ಆ ಸ್ಥಳವನ್ನು ನಾನು ಕೈಯಲ್ಲಿ ಮುಟ್ಟುತ್ತಾ ಹೋಗಬೇಕು. ಮತ್ತು ಕಾಲಲ್ಲಿ ಅದನ್ನು ತುಳಿಯುತ್ತಾ ಹೋಗಬೇಕು ಅದೊಂದು ಹಿಂಸೆಯಾಗುತ್ತದೆ. ಮತ್ತು ಅಲ್ಲಿಗೆ ಹೋದ ಮೇಲೆ ಸರಿಯಾಗಿ ಕೂರಲು ಆಗುವುದಿಲ್ಲ. ಮತ್ತೆ ಯಾರನ್ನಾ ಬಂದರೆ ತಕ್ಷಣ ಎದ್ದು ನಿಲ್ಲಲಂತೂ ಆಗುವುದೇ ಇಲ್ಲಾ ಒಂದು ವಏಳೆ ಯಾರಾದರೂ ನೋಡಿದರೂ ಕೂಡ ಸುಮ್ಮನಿರಬೇಕಾದೀತು. ಈ ರೀತಿಯ ಅವಮಾನಗಳಿಗೆ ನಾನು ಗುರಿಯಾಗಿದ್ದೇವೆ. ಗುರಿಯಾಗಿದ್ದೇನೆ. ಮತ್ತು ನನ್ನ ವೈಯುಕ್ತಿಕ ವಿಷಯವೆಂದರೆ ಹೆಣ್ಣಾದ ನಾನು ಮಸಾಂತ್ಯದಲ್ಲಿ ಆಗುವ ಮುಟ್ಟಿನ ಸಮಸ್ಯೆಯಂತೂ ನನ್ನನ್ನು ತುಂಬಾ ವೇದಿಸುತ್ತದೆ. ಯಾಕೆಂದರೆ ಕನಿಷ್ಠ ಪಕ್ಷ 10 ರಿಂದ 15 ನಿಮಿಷ ನಾವು ಈ

ನೋವನ್ನು ಅನುಭವಿಸಬೇಕಾಗುತ್ತದೆ. ಮತ್ತು ಮಾನಸಿಕ ವೇದನೆಗೆ ಗುರಿತಯಾಗಬೇಕಾಗುತ್ತದೆ. ಆಂತಹ ಪರಿಸ್ಥಿತಿಯಲ್ಲಿ ಮೊದಲೇ ಅಂಗವಿಕಲಳಾದ ನಾನು ಆ ಸ್ಥಿತಿಯಲ್ಲಂತೂ ತುಂಬಾನೇ ಹಿಂಸೆಯನ್ನು ಅನುಭವಿಸುತ್ತೇವೆ. (ಆಳುತ್ತೇನೆ)

ಮೊದಲೇ ಏರಲು ಕೂರಲು ಆಗದ ನನಗೆ ಈ ಸಮಸ್ಯೆ ಯಾರ ಬಳಿ ಹೇಳಬೇಕು ಮತ್ತು ಯಾವ ರೀತಿ ಹೇಳಬೇಕು ಎಂದು ಚಿಂತಿಗೀಡು ಮಾಡುತ್ತದೆ. ತಿಂಗಳ ಮುಟ್ಟಿನ ದಿನಾಂಕ ಬರುತ್ತಿದೆಯೆಂದರೆ ಸಾಕು ನನಗೆ ಭಯ ಮತ್ತು ಬೇಸರ ಆಗುತ್ತಿರುತ್ತದೆ. ಒಂದೊಂದು ಬಾರಿ ಆ ಸಮಸ್ಯೆ ರಾತ್ರಿ ವೇಳೆಯಲ್ಲಿ ಆಗುತ್ತದೆ., ಆಗಂತೂ ಸಾಯುವುದೇ ಲೇಸೆಂದು ಅನಿಸುತ್ತದೆ. ಮತ್ತು ರಾತ್ರಿಯಿಡೀ ನಿದ್ದೆಯನ್ನು ಮಾಡದೇ ನೋವು ಮತ್ತು ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಸುಮಾರು ಬಾರಿ ನನಗೆ ಈ ರೀತಿಯಾಗಿದ್ದು ಆಗ ನಾನು ಯಾರಿಗೂ ಹೇಳದೆ ಮನೆಯ ಹಿಂಬದಿಯಲ್ಲಿ ಮತ್ತು ಯಾವುದೇ ಒಂದು ಗಿಡದ ಕೆಳಗೆ ಕೂತು ಬಂದಿದ್ದೇನೆ. ಆ ಥರ ಕೂರೋ ಸ್ಥಿತಿಯಲ್ಲಿ ಕೂಡ ನೆಮ್ಮದಿ ಇರುವುದಿಲ್ಲಾ. ಏಕೆಂದರೆ ನಾಯಿಗಳ ಕಾಟ ಮತ್ತು ಪಕ್ಕದ ಮನೆಯವರು ನೋಡುತ್ತಾರೇನೋ ಅಥವಾ ಯಾರಾದರೂ ಗಂಡಸರು ನೋಡುತ್ತಾರೇನೋ ಎಂಬ ಭಯ ನಮ್ಮನ್ನು ಸಾಯಿಸುತ್ತದೆ. ಹಲವು ರೀತಿ ಹೋಗಲು ಹೋಗಿ ಬಿದ್ದು ಹೋಗಿದ್ದೇನೆ. ಮತ್ತು ತುಂಬಾ ಪೆಟ್ಟುಗಳು ಕೂಡ ಆಗಿವೆ. ಇದೆಲ್ಲಾ ನನ್ನ ಈ ರೀತಿ ಜನ್ಮದ ಕರ್ಮ ಎಂದು ತಿಳಿದು ಸುಮ್ಮನಾಗಿದ್ದೇನೆ ಅಷ್ಟೇ ಸಾರ್. ಶೌಚಾಲಯ ಕಟ್ಟಿಸೋ ವಿಷಯಕ್ಕೆ ಬಂದರೆ ನನಗನಿಸುತ್ತೇ ಸಾರ್ ನಾನು ತಿನ್ನುತ್ತಿರುವ ಊಟವೇ ಹೆಚ್ಚು ನಮ್ಮ ಮನೆಯಲ್ಲಿ ಅಂತದ್ದರಲ್ಲಿ ನನಗೋಸ್ಕರ ಶೌಚಾಲಯ ಕಟ್ಟಿಸಿಕೊಡಿ ಎಂದು ಕೇಳುವ ಧೈರ್ಯ ನನಗಿಲ್ಲ. ಒಂದು ವೇಳೆ ಕೇಳಿದರೂ ಅವರ ಮನಸ್ಸಿನಲ್ಲಿ ಬರುವ ಭಾವನೆ ಇದೇ ಆಗಿರುತ್ತದೆ. ಆದರೆ ನಮ್ಮ ಮನೆಯಲ್ಲಿ ಇರುವ ನಮ್ಮ ಅಮ್ಮ ನನ್ನ ತಂಗಿ ಮತ್ತು ನಮ್ಮ ಅತ್ತಿಗೆಗೆ ಕೂಡ ಈ ಸಮಸ್ಯೆ ಇದೆ ಆದರೆ ನನ್ನ ರೀತಿಯ ಗಂಭೀರವಾಗಿಲ್ಲ. ಏಕೆಂದರೆ ಅವರು ಒಂದು ಕಡೆ ಅಲ್ಲವೆಂದು ಇನ್ನೊಂದು ಕಡೆ ಕೂತು ಬರುತ್ತಾರೆ. ಆದರೆ ನಾನು ಆ ರೀತಿ ಮಾಡಲು ಸಾಧ್ಯವಿಲ್ಲವಲ್ಲಾ ಸಾರ್.

ಆದರೆ ಸಮಸ್ಯೆ ಮಾತ್ರ ಎಲ್ಲಾ ಹೆಂಗಸರಿಗೂ ಇದೆ ಅದರಲ್ಲಿ ನನ್ನಂಥ ಅಂಗವಿಕಲರಿಗೆ ತೀವ್ರ ರೀತಿಯಲ್ಲಿದೆ.

## ಗುಂಪು ಕೇಂದ್ರಿತ ಚರ್ಚೆಯ ಸಾರಾಂಶ

## ಹದಿ ಹರೆಯದವರ ಗುಂಪು , ಮರಿಯಮ್ಮನಹಳ್ಳಿ

ಮೊದಲಿಗೆ ನನ್ನ ಮತ್ತು ಗುಂಪು ಚರ್ಚೆಯ ಉದ್ದೇಶಗಳು ಮತ್ತು ಧ್ಯೇಯವನ್ನು ಎಲ್ಲರಿಗೂ ತಿಳಿಸಲಾಯಿತು. ತದನಂತರ ವ್ಯಕ್ತಿಗತ ಪರಿಚಯವನ್ನು ಮಾಡಿಕೊಳ್ಳಲಾಯಿತು. ಒಟ್ಟಾರೆ 14 ಹದಿ ಹರೆಯದ ವಯಸ್ಸಿನವರಿದ್ದ ಗುಂಪು ಇದಾಗಿದ್ದು ಪ್ರತಿಯೊಬ್ಬರು ತನ್ನದೇ ಆದ ವಿಭಿನ್ನ ರೀತಿಯ ಭಾವನೆ ಮತ್ತು ಹಿನ್ನೆಲೆಗಳನ್ನು ಹೊಂದಿದ್ದರು. ಹಲವರು ಮೇಲ್ಜಾತಿ ಮತ್ತು ಕೆಳಜಾತಿ ಮತ್ತು ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ಹುಡುಗಿಯರು ಕೂಡ ಇದ್ದರು. ಈ ಗುಂಪಿನವರು ಗ್ರಾಮೀಣ ಭಾಗದವರಾಗಿದ್ದರು.

**ಗುಂಪಿನ ಚರ್ಚಿತ ವಿಷಯಗಳು**

**ಮೊದಲಿಗೆ ನಾವು ಗ್ರಾಮ ಪಂಚಾಯಿತಯ ಬಗ್ಗೆ ಚರ್ಚಿಸಿದೆವು**

**ಗ್ರಾಮ ಪಂಚಾಯಿತಿ ಎಂದರೇನು?**

**ಅದರ ಮುಖ್ಯ ಧ್ಯೇಯೋದ್ದೇಶಗಳೇನು?**

**ಅದರ ಕಾರ್ಯಕ್ರಮಗಳೇನು ಎಂಬುದರ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು.**

ಈ ಅಂಶಕ್ಕೆ ಸಂಬಂಧಿಸಿದಂತೆ ಅನೇಕ ಯುವತಿಯರಿಗೆ ಗ್ರಾಮ ಪಂಚಾಯಿತಯ ಬಗ್ಗೆ ಅರಿವು ಇದೆ ಆದರೆ ಅದರ ಮುಖ್ಯ ಉದ್ದೇಶಗಳೇನು ಮತ್ತು ಅದು ಏಕೆ ರಚಿತವಾಗಿದೆ ಮತ್ತು ಅದರ ಸದಸ್ಯರ ವಿವರಗಳು ಮತ್ತು ಚುನಾಯಿತ ಪ್ರತಿನಿಧಿಗಳ ರೀತಿ ಮತ್ತು ಅದರ ಅರ್ಹತೆಗಳು ಮತ್ತು ಸುತ್ತುವಳಿಯ ಬಗ್ಗೆ ಅರಿವಿಲ್ಲ. ಸುಮಾರು ಯುವತಿಯರು ಗ್ರಾಮ ಪಂಚಾಯಿಇ ಇರುವುದು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಮತ್ತು ಗ್ರಾಮಗಳ ಸಾಮಸ್ಯೆ ಪರಿಹಾರಕ್ಕಾಗಿ ಎಂದರೂ  ಕೂಡ ಅದರ ವ್ಯಾಪ್ತಿ ಮತ್ತು ಸದಸ್ಯರ ಚುನಾವೆ ಮತ್ತು ಆಯ್ಕೆಯ ರೀತಿ ನೀತಿಗಳ ಬಗ್ಗೆ ಗೊತ್ತಿರಲಿಲ್ಲ.

ಕೆಲವು ಯುವತಿಯರು ಗ್ರಾಮ ಪಂಚಾಯಿತಿ ಇರುವುದು ನಾವು ನಮ್ಮ ಸಮಸ್ಯೆಗಳನ್ನು ಚುನಾಯಿತ ಪ್ರತಿನಿಧಿಗಳ ಮುಂದೆ ಚರ್ಚಿಸಿ ಅವರ ಸ್ಪಂದನೆಯನ್ನು ಪಡೆದು ಸಮಸ್ಯೆಯ ಪರಿಹಾರಗಳನ್ನು ಹುಡುಕುವ ನಿಟ್ಟಿನಲ್ಲಿ ರಚಿತವಾಗಿರುವ ಕೇಂದ್ರಗಳೇ ಗ್ರಾಮ ಪಂಚಾಯಿತಿಗಳೆಂದು ತಿಳಿಸಿದರೂ. ಕೂಡ ಯಾವ ರೀತಿ ಸದಸ್ಯರ ಆಯ್ಕೆ ನಡೆಯುತ್ತದೆ ಮತ್ತು ಯಾವ ರೀತಿಯ ಕಾರ್ಯಕ್ರಮಗಳನ್ನು ಪಂಚಾಯಿತಿ ಜಾರಿಗೆ ಮತ್ತು ನಿಗಾವಹಿಸುತ್ತದೆ ಎಂಬುದರ ಬಗ್ಗೆ ಅಷ್ಟಾಗಿ ತಿಳಿದಿರಲಿಲ್ಲ. ಇನ್ನೂ ಕೆಲವು ಯುವತಿಯರು ಗ್ರಾಮ ಪಂಚಾಯಿತಿ ಎಂದರೆ ಕೇಳಿದ್ದೀವಿ ಆದರೆ ಅದರ ಬಗ್ಗತೆ ಅಷ್ಟಾಗಿ ತಿಳಿದಿಲ್ಲ ಎಂದರು. ನಮ್ಮ ಮನೆಯವರಿಗೆ ಗೊತ್ತಿದೆ ಎಂದು ಹೇಳುತ್ತಿದ್ದರು. ಒಟ್ಟಾರೆಯಾಗಿ ಈ ಗುಂಪಿನಲ್ಲಿ ಗ್ರಾಮ ಪಂಚಾಯಿತಿಯ ಬಗ್ಗೆ ಅರಿವು ಇತ್ತಾದರೂ ಅದು ಸೀಮಿತವಾಗಿತ್ತು ಅಂದರೆ ಅದರ ಬಗ್ಗೆ ಅಷ್ಟಾಗಿ ತಿಳಿದಿರಲಿಲ್ಲ. ಮತ್ತೊಂದು ಕುತೂಹಲ ವಿಷಯವೆಂದರೆ ಈ ಗುಂಪಿನಲ್ಲಿ ಗ್ರಾಮ ಪಂಚಾಯಿತಿಯ ವ್ಯಾಪ್ತಿ ತಿಳಿದಿಲ್ಲಾ ಆದರೆ ಶೌಚಾಲಯ ಮಾತ್ರ ಗ್ರಾಮ ಪಂಚಾಯಿತಯ ವ್ಯಾಪ್ತಿ ಒಳಪಡುತ್ತದೆಮದು ಯುವತಿಯರು ಹೇಳಿದರು. ಹೇಗೆಂದರೆ ಸಖಿ ಮತ್ತು ಹಲವು ಸಂಘ ಸಂಸ್ಥೆಗಳ ನೆರವಿನಿಂದ ಮತ್ತು ಕೆಲವೊಂದು ಶೌಚಾಲಯ ನಿರ್ಮಾಣ ಕಾರ್ಯಕ್ರಮ ಫಲಕಗಳನ್ನು ನಮ್ಮ ಊರುಗಳಲ್ಲಿ ಉತ್ತರಿಸಲಾಗಿದೆಯೆಂದು ಹೇಳಿದರು,.

ಗ್ರಾಮ ಪಂಚಾಯಿತಯ ಕಾರ್ಯ ವೈಖರಿಯ ಬಗ್ಗೆ ಕೇಳಿದಾಗ ಈ ಗುಂಪಿನಲ್ಲಿ ಕಾರ್ಯವೈಖರಿಯು ಚೆನ್ನಾಗಿಲ್ಲಾ ಎಂದು ಹೇಳಿದರು ಏಕೆಂದರೆ ನಮ್ಮ ಊರುಗಳಲ್ಲಿ ಸರಿಯಾದ ಸ್ವಚ್ಛತೆ ಇಲ್ಲ ಮತ್ತು ಶೌಚಾಲಯಗಳಿಲ್ಲ ಎಂದು ಕೆಲವರು ಅಂದರೆ ಆದರೆ ಕೆಲವರು ಅದಕ್ಕೂ ಗ್ರಾಮ ಪಂಚಾಯಿತಿಗೂ ಸಂಬಂಧವಿಲ್ಲ ಸಾರ್ ಯಾಕೆಂದರೆ ಆ ಸ್ವಚ್ಛತೆಯನ್ನು ಕಾಪಾಡಬೇಕಾದ ಅಗತ್ಯತೆ ನಮಗೂ ಇರಬೇಕು ನೀವು ಎಲ್ಲಂದರಲ್ಲಿ ಏನಾದರೂ ಬಿಸಾಕುವುದು ಮತ್ತು ನಿಮಗಿಷ್ಟ ಸ್ಥಳದಲ್ಲಿ ಮಲಮೂತ್ರ ವಿಸರ್ಜಿಸುವುದು ಮಾಡಿದರೆ ಅದನ್ನು ಸ್ವಚ್ಛಗೊಳಿಸುವವರೇನು ಸಲೀಸಾಗಿ ಸಿಗುವರೇ ಎಂದು ತೀವ್ರ ರೀತಿಯ ವಾಗ್ವಾದ ನಡೆಸಿದರು. ಮತ್ತೊಬ್ಬರು ಅದಕ್ಕಾಗಿ ಸ್ವಚ್ಛತೆಗಾಗಿ ಊರಲ್ಲಿ ಕೆಲವೊಂದು ಜನಾಂದ ಇದೆಯಲ್ಲಾ ಅಂದಿದ್ದಕ್ಕೆ ಅವರೇನು ನಿಮಗೆ ಆಳುಗಳೇ ಅವರೇ ಏಕೆ ಮಾಡಬೇಕು ಆ ಕೆಲಸ ನೋಡಿ ಸಾರ್ ಇದೆ ಅಲ್ಲಾ ಸಾರ್ ಪ್ರತಿಯೊಬ್ಬರ ಮನಸ್ಸು ಈಗೆ

ಇದೆ ಇನ್ನೂ ಊರುಗಳಲ್ಲಿ ಅವರವರೇ ಗಲೀಜು ಮಾಡುವುದು ಅದನ್ನು ಬೇರೆಯವರ ಕೆಲಸವೆಂದು ಬಿಡುವುದು.

ಈ ತಾರತಮ್ಯತೆಗಳು ಒಳ್ಳೆಯದಲ್ಲಾ ಅದನ್ನು ಬಿಡಬೇಕು ಎಂದು ಒಮ್ಮೆಲೇ ಗುಂಪಿನ ಚರ್ಚೆ ಜಾತಿ ಚರ್ಚಿತ ವಿಷಯವಾಯಿತು. ಆಗ ಎಚ್ಚೆತ್ತುಕೊಂಡ ನಾನು ಅದನ್ನು ಸಮಾಧಾನಕರ ಹೇಳಿಕೆಯೊಂದಿಗೆ ಮುಗಿಸಿ ಮುಂದಿನ ಅಂಶವನ್ನು ಪರಿಚಯಿಸಿದನು. ನಂತರದ ಚರ್ಚಿತ ಅಂಶವು ಮೂಲಭೂತ ಸೌಕರ್ಯಗಳೆಂದರೇನು ಅವು ಯಾವುವು ಮತ್ತು ಅವು ಏಕೆ ಬೇಕು ನಮಗೆ. ಎಂಬ ಅಂಶದ ಮೇರೆಗೆ ಚರ್ಚೆ ಪ್ರಾರಂಭವಾದಾಗ ಕೆಲ ಯುವತಿಯರು ಮೂಲಭೂತ ಸೌಕರ್ಯಗಳು ಮನುಷ್ಯನಿಗೆ ತುಂಬಾ ಅತ್ಯಗತ್ಯ ಸಾರ್. ಅವಿಲ್ಲದೆ ನಾವು ಬಾಳಲು ಸಾಧ್ಯವಿಲ್ಲ ಮತ್ತು ಅವುಗಳನ್ನು ಪಡೆಯುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ತಉಂಬಾ ಕಷ್ಟವೆಂದೆನಿಸಿದೆ ಎಂದರು. ಕೆಲಸ ಯುವತಿಯರು ಮೂಲಭೂತ ಸೌಕರ್ಯಗಳಾದ ನೀರು ಶೌಚಾಲಯ ಮತ್ತು ಕಸ ನಿರ್ವಹಣೆ ಮನೆ ಈ ವಸತಿಗಳು ಇರಲೇ ಬೇಕು ಜೊತೆಗೆ ಮನುಷ್ಯನಿಗೂ ಕೂಡ ಅದರ ಅಗತ್ಯಕ ಮತ್ತು ಅದರ ಇತಿಮಿತಗಳು ತಿಳಿಯಬೇಕೆಂದರು ಏಕೆಂದರೆ ತುಂಬಾ ಜನ ಊರುಗಳಲ್ಲಿ ನೀರನ್ನು ಯಥೇಚ್ಛವಾಗಿ ಪೋಲು ಮಾಡುತ್ತಾರೆ ಮತ್ತು ಆ ಚರಂಡಿ ವ್ಯವಸ್ಥೆ ಹದೆಗೆಟ್ಟು ದುರ್ವಾಸನೆ ಹಾಗೂ ಹಲವು ಸಂಕ್ರಾಮಿಕ ರೋಗಗಳಿಗೆ ನಾಂದಿಯಾಗುತ್ತದೆ. ಆದ್ದರಿಂದ ಮೂಲಭೂತ ಸೌಕರ್ಯಗಳ ಅವಶ್ಯಕತೆ ಹಾಗೂ ಅಂತೆಯೇ ಅವುಗಳ ನಿರ್ವಹಣೆ ಮತ್ತು ಕಾಪಾಡುವಿಕೆ ಕೂಡ ಮುಖ್ಯವೆಂದು ಕೆಲವರು ಅಭಿಪ್ರಾಯ ಪಟ್ಟರು. ನಂತರ ಮೂಲಭೂತ ಸೌಕರ್ಯಕೊರತೆಯಿಂದಾಗುವ ದುಷ್ಪರಿಣಾಮಗಳೇನು ಎಂದು ಕೇಳಿದಾಗ ಹಲವರು ಉತ್ತರಿಸಿದರು ತುಂಬಾ ಸಮಸ್ಯೆಯಾಗುತ್ತದೆ. ಜೀವಿಸಲು ಕಷ್ಟಕರವಾಗುತ್ತದೆ ಅವಿಲ್ಲದಿದ್ದರೂ ಜೀವಿಸಲು ಸಾದ್ಯ ಆದರೆ ಸ್ವಲ್ಪ ರೀತಿಯಲ್ಲಿ ಕಷ್ಟವಾಗಬಹುದು ಕೆಲವು ಸಲ ಹರಸಾಹಸ ಪಡೆಬೇಕಗುತ್ತದೆ ಸಾರ್ ಎಂದರು. ಒಟ್ಟಾರೆಯಾಗಿ ಮೂಲಭೂತ ಸೌಕರ್ಯಗಳ ಬಗ್ಗೆ ಅವಗಾಹನೆ ಇದೆಯಾದರೂ ಅಷ್ಟರ ಮಟ್ಟಿಗೆ ಅರಿವಿಲ್ಲವೆಂದು ತಿಳಿಯಿತು. ಏಕೆಂದರೆ ಆವುಗಳ ಅಲಭ್ಯತೆಯಲ್ಲೂ ಕೂಡ ಮನುಷ್ಯ ಜೀವನ ಸಾಗಿಸಬಲ್ಲನೆಂಬ ಅಲ್ಪ ನಂಬಿಕೆ ಕೆಲವರಲ್ಲಿ ಉಳಿದಿತ್ತು. ಪ್ರಸ್ತುತ ಪರಿಸ್ಥಿತಿಯಲ್ಲಿ ಹಳ್ಳಿಯಲ್ಲಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚೆಯಾದಾಗ.



Community Health Library and Information Centre
SOPHEA-SOCHARA
Koramangala
Bangalore - 34
★ (CLIC) ★
E-140
16716

ಹಲವರು ಅದು ಒಂದು ದೊಡ್ಡ ಸಮಸ್ಯೆ ಶರ್ ನಮ್ಮೂರಲ್ಲಿ ಸರಿಯಾಗಿ ಯಾವ ರೀತಿಯ ಸೌಕರ್ಯಗಳು ಇಲ್ಲಾ ಸಾರ್ ನಮ್ಮೂರಲ್ಲಿ ಎರಡು ಕೇರಿಗಳಿದ್ದು ಒಂದು ಕೇರಿಯವರು ಮೇಲ್ಜಾತಿಯವರು ಮತ್ತೊಂದು ಕೇರಿಯವರು ಕೆಳಜಾತಿಯವರಾಗಿದ್ದು ಈ ಸೌಕರ್ಯಗಳು ಕೂಡ ಅದರಂತೆ ವಿಭಾಗವಾಗಿವೆ ಎಂದರು. ಇದಕ್ಕೆ ಪ್ರತ್ಯುತ್ತರ ನೀಡಿದ ಹಲವರು ಅವರ ಊರಿನಲ್ಲಿ ಅ ರೀತಿಯೇನೋ ಗೊತ್ತಿಲ್ಲಾ ಆದರೆ ನಮ್ಮ ಊರಿನಲ್ಲಿ ಮಾತ್ರ ನಾವೆಲ್ಲಾ ಒಟ್ಟಾಗಿ ನೀರಿಗೆರ ಬರುತ್ತೇವೆ ಮತ್ತು ಒಟ್ಟಾಗಿ ಸಮುದಾಯ ಶೌಚಾಲಯ ಉಪಯೋಗಿಸುತ್ತೇವೆ ಎಂದರು. ಇದಕ್ಕೆ ಪ್ರತ್ಯುತ್ತರ ನೀಡಿದ ಕೆಲವರು  ಸಾರ್ ಒಂದಂತೂ ನಿಜ ಯಾರು ಹಣಕಾಸಿನ ವಿಷಯದಲ್ಲಿ ಪ್ರಬಲರಾಗಿರುತ್ತಾರೋ ಮತ್ತು ಯಾರು ಗ್ರಾಮ ಪಂಚಾಯಿತಿಗಳೊಂದಿಗೆ ಸಖ್ಯದಿಂದ ಇರುತ್ತಾರೋ ಅವರು ಮಾತ್ರ ಈ ಸೌಕರ್ಯಗಳನ್ನು ಬಹುಬೇಗ ಪಡೆಯುತ್ತಾರೆ.

ಈ ಒಡನಾಟ ಇಲ್ಲದವರು ಮಾತ್ರ ಶೋಷಿತರಾಗೇ ಉಳಿಯುತ್ತಾರೆ ಸಾರ್ ಎಂದರು. ಕೆಲವು ಯುವತಿಯ ಇದಕ್ಕೆ ಪ್ರತ್ಯುತ್ತರವಾಗಿ ಹಳ್ಳಿಯಲ್ಲಿನ ಜನ ಸಾಮಾನ್ಯರಿಗೆ ಅವರದೇ ಆದ ಬಿಗುವು ಇದೆ ಸಾರ್.

ಉದಾ: ಒಬ್ಬರ ಮನೆ ಮುಂದೆ ನೀರಿನ  ಟ್ಯಾಂಕ್ ಹಾಕಿದ್ರೆ, ಯಾಕೆ ಅವರ ಮನೆ ಮುಂದೆ ಹಾಕಿದ್ದಾರೆ ಮತ್ತು ನಾವ್ಯಾಕೆ ಅಲ್ಲಿಗೆ ಹೋಗಬೇಕು ಮತ್ತು ನಮ್ಮ ಮನೆ ಮುಂದೆ ಯಾಕೆ ಹಾಕ್ಲಿಲ್ಲ ಅಂಥ ಯೋಜನೆ ಮಾಡ್ತಾರೆ ಸಾ.

ಅಲ್ಲದೇ ಶೌಚಾಲಯದಲ್ಲೂ ಅಷ್ಟೆ ಸಾರ್ ಅದು ಊರ ಅಚೆ ಇರೋದರಿಂದ ಅಷ್ಟು ದೂರ ಯಾಕೆ ಹೋಗೋದು ಇಲ್ಲೇ ಎಲ್ಲನ್ನ ಪಕ್ಕದಲ್ಲೇ ಮಾಡಿ ಬಂದು ಬಿಡಿ ಅಂತ ಅವರೇ ಬಯಲು ಶೌಚಾಲಯಕ್ಕೆ ಪ್ರೋತ್ಸಾಹ ನೀಡುತ್ತಾರೆ ಸಾರ್ ಎಂದರು. ಒಟ್ಟಾರೆಯಾಗಿ ಮೂಲಭೂತ ಸೌಕರ್ಯಗಳ  ಕೊರತೆಯು ಮನುಷ್ಯನನ್ನು ಧೃತಿಗೆಡೆಸುತ್ತದೆಂಬ ವಿಷಯಕ್ಕೆ ಒಮ್ಮತ ಅಭಿಪ್ರಾಯ ಗುಂಪಿನಲ್ಲಿ ಬರಲಿಲ್ಲ. ನಂತರ ಚರ್ಚಿತ ವಿಷಯವಾದ ಸ್ವಚ್ಛತೆ ಎಂದರೇನು ಅದರ ಮಹತ್ವವೇನು ಅದರ ಕೊರತೆಯಿಂದಾಗುವ ಸಮಸ್ಯೆಗಳೇನು ಎಂಬುದರ ಬಗ್ಗೆ ಕುತೂಹಲ ರೀತಿಯಲ್ಲಿ ಚರ್ಚೆ ನಡೆಯಿತು.

ಈ ಚರ್ಚೆಯಲ್ಲಿ ಕೆಲವು ಯುವತಿಯರು ಸ್ವಚ್ಛತೆ ಎಂದರೆ ನಮ್ಮ ಸುತ್ತಮುತ್ತಲಿನ ವಾತಾವರಣ ಮತ್ತು ಪರಿಸರವನ್ನು ಶುಚಿಯಾಗಿರಿಸಿಕೊಳ್ಳುವುದು ಎಂದರೆ ಕೆಲವು ಯುವತಿಯರ ಪ್ರಕಾರ ನಮ್ಮ ಪರಿಸರ ಕಾಪಾಡಿಕೊಳ್ಳುವುದು ಮತ್ತು ಸುತ್ತಮುತ್ತಲಿನ ಅಸ್ವಚ್ಛತಾ ಕ್ರಮಗಳನ್ನು ನಿರ್ಮೂಲನೆ ಮಾಡಿ ಸೂಕ್ತ ರೀತಿಯ ಸ್ವಚ್ಛತಾ ಕ್ರಮಗಳನ್ನು ಕೈಗೊಳ್ಳುವುದು ಕೆಲವರು ನಾವು ನಮ್ಮ ಸುತ್ತಮುತ್ತಲಿನ ಪರಿಸರ ಕಾಪಾಡಿಕೊಳ್ಳಬೇಕು ಮತ್ತು ಅದಕ್ಕಾಗಿ ನೇಮಿಸಲ್ಪಟ್ಟವರನ್ನು ಕೆಲಸದಲ್ಲಿ ಮಗ್ನರಾಗುವಂತೆ ನೋಡಿಕೊಳ್ಳಬೇಕು. ಏಕೆಂದರೆ ಎಲ್ಲಾ ನಾವೇ ಮಾಡಿಕೊಂಡರೆ ಅವರೇನು ಮಾಡುತ್ತಾರೆ ಮತ್ತು ಸರ್ಕಾರ ಅವರನ್ನು ಏಕೆ ನೇಮಿಸಿದೆ ಎಂದರು (ಉದಾ: ನಗರ ಪಾಲಕರು ಪೌರ ಕಾರ್ಮಿಕರು) ಮೂಲಭೂತ ಸೌಕರ್ಯಗಳ ಅಲಭ್ಯತೆಯಿಂದಾಗುವ ಸಮಸ್ಯೆಗಳಿಗೆ ಗುಂಪಿನಲ್ಲಿ ತೀವ್ರ ರೀತಿಯ ಚರ್ಚೆಯಾಯಿತು. ಏಕೆಂದರೆ ಒಬ್ಬರ ಅಭಿಪ್ರಾಯವನ್ನು ಒಬ್ಬರು ಒಪ್ಪಲೇ ಇಲ್ಲ. ಅಲ್ಲದೇ ಕೆಲವರು ನೀರಿನ ಅಗತ್ಯವಿದೆ ಆದರೆ ಸಮೀಪವಿರುವ ಖಾಸಗಿ ಬೋರ್‌ವೆಲ್‌ಗಳಿಂದ ಕೂಡ ನಾವು ತರಿಸಿಕೊಳ್ಳಬಹುದೆಂದು

ಕೆಲವರು ಎಷ್ಟು ದಿನ ಅಂತ ಕೆಲಸ ಮಾಡುವುದೆಂದರು ಅದಕ್ಕೆ ಪ್ರತ್ಯುತ್ತರವಾಗಿ ನಮ್ಮ ಹಳ್ಳಿಗಳಲ್ಲಿ ಕುಡಿಯುವ ಸಿಹಿ ನೀರಿನ ಕೊರತೆ ಇದ್ದು ಕೇವಲ ಉಪ್ಪು ನೀರಿನ ಅಲಭ್ಯತೆ ಇದ್ದು ಅದು ಕುಡಿಯಲು ಯೋಗ್ಯವಿಲ್ಲವೆಂದರು. ಅದಕ್ಕೆ ಹಲವರು ಅದಕ್ಕಾಗಿ ಬೇರೆ ಕಡೆಯಿಂದ ನೀರು ತರಿಸಲು ಆದರೂ ಕೂಡ ಆ ನೀರನ್ನು ಹಿಡಿಯಲು ಸೂಕ್ತ ಸಮಯ ನಿಗಧಿ ಇರಬೇಕು. ಏಕೆಂದರೆ ಮೊದಲೇ ಕೂಲಿ ಕಾರ್ಮಿಕರಾದ ಹಳ್ಳಿಯ ಜನ ಆ ನೀರಿಗಾಗಿ ಕುಳಿತರೇ ಜೀವನ ಸಾಗಿಸಲಾಗದೆಂದು ನಮ್ಮ ಹಳ್ಳಿಗಳಲ್ಲಿ ಈ ಪರಿಸ್ಥಿತಿ ಇದೆಯೆಂದು ಹಲವರು ಹೇಳಿಕೊಂಡರು.

**ಶೌಚಾಲಯ ವಿಷಯಕ್ಕೆ ಬಂದಾಗ:**

ಇತ್ತೀಚಿನ ದಿನಗಳಲ್ಲಿ ಇದೊಂದು ಅಹಿತಕರ ಘಟನೆಯಾಗಿದೆ ಸಾರ್ ಯಾಕಂದ್ರ ಜನ ಬಯಲು ಮಲ ವಿಸರ್ಜನೆಯಿಂದ ಬೀಸುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ಮಹಿಳೆಯರು ಮಹಿಳಾ ಸಮುದಾಯವಾದ ನಾವು ಹೇಳಬೇಕೆಂದರೆ ಹೀನಾಯ ಸ್ಥಿತಿಯಲ್ಲಿದ್ದೇವೆ. ಅದಕ್ಕೆ ಕಾರಣ ಸೂಕ್ತ ಶೌಚಾಲಯಗಳನ್ನು ಕಟ್ಟಿಸಿಕೊಡದ ಗ್ರಾಮ ಪಂಚಾಯಿತಿಗಳ ಅರಕ್ಷತೆ ಉದಾಹರಣೆ ಎಂದು ಹಲವರು ಬಣ್ಣಿಸಿದರು.

ಆದರೆ ಕೆಲ ಯುವತಿಯರು ಶೌಚಾಲಯದ ಕೊರತೆಯಿಂದ ಬೇಸತ್ತಿರುವ ಮಹಿಳೆಯರು ಅದರಲ್ಲೂ ನಮ್ಮಂತ ಯುವತಿಯರು ಅನುಭವಿಸುತ್ತಿರುವ ಸಮಸ್ಯೆಗಳು ಹೇಳತೀರದು ಒಂದು ವೇಳೆ ಹೇಳಿದರೂ ಕೂಡ ಆ ಸಮಸ್ಯೆಗೆ ಸೂಕ್ತ ಪರಿಹಾರ ಸಿಗದ ವಾತಾವರಣದಲ್ಲಿ ನಾವು ಬದುಕುತ್ತಿದ್ದೇವೆ. ಕೆಲವೊಂದು ಯುವತಿಯರು ಶೌಚಾಲಯ ಕೊರತೆಗೆ ಗ್ರಾಮ ಪಂಚಾಯಿಯು ಕಾರಣವಲ್ಲ ಎಂದರು. ಏಕೆಂದರೆ ಹಲವು ಗ್ರಾಮಗಳಲ್ಲಿ ಪಂಚಾಯತಿ ಕಡೆಯಿಂದ ಶೌಚಾಲಯ ಕಟ್ಟಿಸಿಕೊಟ್ಟಿದ್ದರೂ ಕೂಡ ಜನ ಅದನ್ನು ಬಳಸದೇ ಇನ್ನೂ ಕೂಡ ಬಯಲನ್ನು ಅವಲಂಬಿಸಿದ್ದಾರೆ. ಅಲ್ಲದೇ ಕಾರಣ ಶೌಚಾಲಯವೆಂಬುದು ಅವರ ದೃಷ್ಟಿಯಲ್ಲಿ ಅನಿಷ್ಟವೆಂಬ ಅಂಶವಿದೆ. ಮತ್ತು ಅದು ಮನೆಯ ಹತ್ತಿರ ಮತ್ತು ಊರಿನಲ್ಲಿ ಇರಬಾರದೆಂಬ ವಾಡಿಕೆ ಇದೆ ಈ ರೀತಿಯ ಶಿಷ್ಠಾಚಾರ ಪದ್ಧತಿ ನಮ್ಮ ಊರುಗಳಲ್ಲಿದೆ ಎಂದು ಹಲವು ಯುವತಿಯರು ಹಂಚಿಕೊಂಡರು.

ಇದನ್ನು ಪ್ರಬಲವಾಗಿ ವಿರೋಧಿಸಿದ ಕೆಲ ಯುವತಿಯರು ಗ್ರಾಮ ಪಂಚಾಯಿತಿಗಳು ಕೇವಲ ಶೌಚಾಲಯ ಕಟ್ಟಿಕೊಳ್ಳಿ ಎಂದು ಹೇಳುತ್ತಾರೆ ಒಂದಷ್ಟು ಹಣ ಕೊಟ್ಟು ಹುರಿದುಂಬಿಸಿ ನಂತರ ಕೈ ತೊಳೆದುಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಆದರೆ ಜನರೇ ಮುಂದೇ ಬಂದು ಅವರವರ ಮನೆಯ ಬಳಿ ಸ್ವಂತ  ಶೌಚಾಲಯವನ್ನು ಕಟ್ಟಿಸಿಕೊಂಡಿದ್ದಾರೆ ಎಂದರು. ಇದರಿಂದ ಶೌಚಾಲಯದ ಅಗತ್ಯವಿದೆಯೆಂದು ಎಲ್ಲಾ ಜನರು ಮನಗಂಡಿದ್ದಾರೆ ಎಂದು ಹೇಳಿದರು. ಕೆಲವೊಂದು ಯುವತಿಯರು ಶೌಚಾಲಯದ ಕೊರತೆಯಿಂದಾಗಿ ಯುವತಿಯರಾದ ನಾವು ತುಂಬಾ ಮಾನಸಿಕ ಹಿಂಸೆ3ಯನ್ನು ಎದುರಿಸುತ್ತಿದ್ದೇವೆ. ಮತ್ತು ಈ ಹಿಂಸೆ ಅಥವಾ ಈ ಸಮಸ್ಯೆಯನ್ನು ಕುಟುಂಬದ ಸದಸ್ಯರ ಬಳಿ ಹಂಚಿಕೊಂಡರೂ ಸಹ ನಮಗೆ ಸೂಕ್ತ ಬೆಂಬಲ ಮತ್ತು ಪರಿಹಾರ ಸಿಗಲಿಲ್ಲ. ಕಾರಣ ನಮ್ಮ ಸ್ನೇಹಿತರು ತಿಳಿಸದಂತೆ.

- ಸ್ಥಳದ ಸಮಸ್ಯೆ
- ಸಂಪ್ರದಾಯ
- ಬಡತನ (ಹಣಕಾಸಿನ ಕೊರತೆ)
- ನೀರಿನ ಸಮಸ್ಯೆ
- ಪುರುಕ್ಷಿ ಪ್ರಧಾನ ಕುಟುಂಬ ಸಮುದಾಯ

ಕೆಲವು ಯುವತಿಯರು ಈ ಸಮಸ್ಯೆಯಂತೂ ತುಂಬಾ ನೋವನಿಸುತ್ತಿದೆ. ಇತ್ತ ಮನೆಯಲ್ಲಾ ಅತ್ತ ಸಮಾಜದಲ್ಲೂ ಕೂಡ ಮಹಿಳೆಗೆ ಹಿಂಸೆಯಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಹದಿಹರೆಯದ ವಯಸ್ಸಿನವರಾದ ನಾವು ಎದುರಿಸುತ್ತಿರುವ ಸಮಸ್ಯೆಯಂತೂ ಹೇಳತೀರದು ಏಕೆಂದರೆ ಮೊದಲೇ ಪುರುಷ ಪ್ರಧಾನ ಸಮಾಜ ಯುವತಿಯನ್ನು ಒಂದು ರೀತಿಯ ದೃಷ್ಠಿಯಿಂದ ನೋಡುತ್ತದೆ. ಮತ್ತು ಅವರನ್ನು ಮಾತನಾಡಿಸುವ ಶೈಲಿಯೇ ಬೇರೆ ಇರುತ್ತದೆ. ಅಂತದ್ದರಲ್ಲಿ ಈ ರೀತಿಯ ಪರಿಸ್ಥಿತಿಯಲ್ಲಿ ಅವರ ಕಣ್ಣಿಗೆ ಬಿದ್ದರೆ ಬೆಂಕಿಯಲ್ಲಿ ಬಿದ್ದು ಬೆಂದಂತೆ ಎಂದರು.

ಅತ್ತ ಸಮುದಾಯ ಶೌಚಾಲಯಕ್ಕೆ ಹೋದರೂ ಸಮಸ್ಯೆ ಮತ್ತು ಇತ್ತ ಬಯಲಿಗೆ ಹೋದರೂ ಸಮಸ್ಯೆ ಒಂದು ವೇಳೆ ಬಯಲಿಗೆ ಹೋದಾಗ ನಡೆದ ಘಟನೆಗಳ ಬಗ್ಗೆ ಕುಟುಂಬದ ಬಳಿ ಹೇಳಿದಾಗ ನ್ನಮ ಮನೆಗಳವರು ಜಗಳಕ್ಕೆ ಸಿದ್ಧರಾಗುರತ್ತಾರೆ. ಆದರೆ ಶೌಚಾಲಯ ಕಟ್ಟುವಲ್ಲಿ ಮಾತ್ರ ಸಿದ್ದರಿರುವುದಿಲ್ಲ. ಈ ರೀತಿಯ ಜಗಳ ನಮ್ಮಿಂದ ಅದು ಒಂದು ಹೆಣ್ಣಿಂದ ಅಂದರೆ ಊರು ಊರಿಗೆ ತಿಳಿದು ಹೋಗುತ್ತದೆ. ಅದು ಒಂದು ರೀತಿ ಅವಮಾನ ಮತ್ತು ಹಿಂಸೆ ಈ ಎಲ್ಲಾ ಮಾನಸಿಕ ಸಮಸ್ಯೆಗಳೂ ನಮಗೆ ಒಂದು ದೊಡ್ಡ ರೀತಿಯ ಹಿಂಸೆಗೆ ಒಳಪಡಿಸಿ ಮಾನಸಿಕ ಖಿನ್ನತೆಯತ್ತ ತಳ್ಳಿವೆ. ಒಟ್ಟಾರೆಯಾಗಿ ಶೌಚಾಲಯದ ಕೊರತೆ ಹಲವು ರೀತಿಯ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆಂದು ಗುಂಪಿನ ಮೂಲಕ ತಿಳಿದು ಬಂದಚಿತು.

ನಂತರ ವಿಷಯವಾದ ಶೌಚಾಲಯದ ಕೊರತೆಯಿಂದಾಗಿ ಮಹಿಳೆಗೆ ಆಗುವ ಮಾನಸಿಕ ಮತ್ತು ಸಮಾಜಾತ್ಮಕ ಸಮಸ್ಯೆಗಳ ಬಗ್ಗೆ ಚರ್ಚಿಸಿದಾಗ. ಚರ್ಚೆಯು ತುಂಬಾ ಆಸಕ್ತಿಕರವಾಗಿತ್ತು. ಮತ್ತು ಭಾವನಾತ್ಮಕ ಹೋಲಿಕೆಗಳನ್ನು ಕಲುಕುವಂತಿತ್ತು. ಹಲವರು ಮಾನಸಿಕ ಹಿಂಸೆಗಳನ್ನು ಈಗೆ ಹಂಚಿಕೊಂಡರು ಗಂಡಸರು/ ಎದುರಾದಾಗ ಮತ್ತು ಗಂಡಸರು/ ಹುಡುಗರು ಓಡಾಡುವ ಜಾಗದಲ್ಲಿ ಶೌಚ ಮಾಡುವ ಸ್ಥಿತಿಯಲ್ಲಿ ಯಾರು ನೋಡುತ್ತಾರೋ ಎಂದು ಭಯದಿಂದ ಮತ್ತು ಅವಸರವಾಗಿ ಮುಗಿಸಿ ಬರಬೇಕಾದೀತು ಮತ್ತು ನೆಮ್ಮದಿ ಇರುವುದಿಲ್ಲ. ಒಂದು ರೀತಿಯ ಹಿಂಸೆ ವೇದನೆ.

ಮುಟ್ಟುಗಳ ಸಂದರ್ಭದಲ್ಲಿ ಜಾಸ್ತಿ ಸಮಯ ತೆಗೆದುಕೊಳ್ಳೋದರಿಂದ ಭಯ ದುಃಖ ಆಗುತ್ತೆ ಹಾಗೂ ಮಾನಸಿಕ ಖಿನ್ನತೆಗೊಳಗಾಗುತ್ತದೆ. ಬಯಲಿಗೆ ಹೋದ ಸಂದರ್ಭದಲ್ಲಿ ಇರುವ ಬೀದಿ ನಾಯಿ ಮತ್ತು ಹಂದಿಗಳ ಕಾಟದಿಂದ ನೆಮ್ಮದಿಯಾಗಿ ಶೌಚಾ ಮಾಡಲು ಆಗುವುದಿಲ್ಲ ಮತ್ತು ಮಾನಸಿಕ ಹಿಂಸೆ ಒಳಗಾಗುತ್ತಿರುತ್ತಾರೆ. ಹಾಗೂ ಹಲವು ಮಾನಸಿಕ ಹಿಂಸೆಗಳಾದ ಮನೆಯಲ್ಲಿನ ಬಡತನ ಮತ್ತು ದಿಕ್ಕು ತೋಚದ ಸ್ಥಿತಿ ಅದರಲ್ಲೂ ಈ ಸಮಸ್ಯೆಯನ್ನು ಯಾರ ಬಳಿಯೂ ಕೂಡ ಹೇಳಿಕೊಳ್ಳಲಾಗದ ಮಾನಸಿಕ ಖಿನ್ನತೆ ಈ ರೀತಿಯ ಹಲವು ಮಾನಸಿಕ ಹಿಂಸೆಗಳಿಗೆ ಒಳಗಾಗಿ ನಂತರ ಹಿಂಸೆಗೆ ಒಳಗಾಗುತ್ತಿದ್ದೇವೆ ಎಂಬುದು ಸತ್ಯ ಸಂಗತಿ ಎಂದು ಹೇಳುವುದು ಸೂಕ್ತವಾಗಿದೆ.

ಸಾಮಾಜಿಕ ಸಮಸ್ಯೆಗಳನ್ನು ಈ ರೀತಿ ಹಂಚಿಕೊಳ್ಳಾಯಿತು.

ನಮ್ಮ ಊರುಗಳಲ್ಲಿ ಗಂಡಸರು ಮತ್ತು ಅದರಲ್ಲೂ ಯುವಕರು ಹೆಚ್ಚಾಗಿದ್ದು, ಅವರು ನಿರಂತರವಾಗಿ ಮಹಿಳೆಯನ್ನು ಚುಡಾಯಿಸುವ ಮತ್ತು ಅವರನ್ನು ಕೆಟ್ಟ ದೃಷ್ಠಿಯಿಂದ ನೋಡುವುದು ಸರ್ವೇ ಸಮಾನವಾದ ವಿಷಯವಾಗಿದೆ. ಆದ್ದರಿಂದ ನಾವು ಸ್ವಾತಂತ್ರ್ಯವಾಗಿ ಬಯಲಿಗೆ ಮತ್ತು ಸಮುದಾಯ ಶೌಚಾಲಯಕ್ಕೆ ಹೋಗಲು ಸಾಧ್ಯವೇ ಇಲ್ಲ. ಅದರಲ್ಲೂ ನಾವು ಆಚೆ ಕಡೆ ನಡೆಯುವ ಈ ಕೃತ್ಯಗಳನ್ನು ನಮ್ಮ ಮನೆಗಳಲ್ಲಿ ಹೇಳಿದರೂ ಕೂಡ ಅದನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಏಕೆಂದರೆ ಅಲ್ಲೂ ಸ್ತ್ರೀಗೆ ಸ್ತ್ರಿಯು ಶೋಷಣೆ ಒಳಗಾಗಿದ್ದಾರೆ.

ಏಕೆಂದರೆ ಹಲವರು ತಮ್ಮ ಮನೆಗಳಲ್ಲಿ ತಂದೆ ಅಥವಾ ಅಣ್ಣ (ಪುರುಷ)ರೇ ತೀರ್ಮಾನಕರು ಆದ್ದರಿಂದ ನಾವು ಯಾವತ್ತೂ ಹೇಳಿಕೊಂಡರೂ ಕೂಡ ಅದನ್ನು ಪರಿಹರಿಸುವ ಶಕ್ತಿ ಅಧಿಕಾರ ಪುರುಷರಿಗೆ ಮಾತ್ರ ಇರುತ್ತದೆ. ಆದ್ದರಿಂದ ನಾವು ಸಮಾಜದತ್ತವಾಗಿ ಕೂಡ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಈ ಸಮಸ್ಯೆಗಳೂ ಕೂಡ ನಮ್ಮ ಸಮಸ್ಯೆಯನ್ನು ತುಂಬಾ ಉಲ್ಬಣಗೊಳ್ಳುವಲ್ಲಿ ತನ್ನದೇ ಆದ ಪಾತ್ರವಿದೆ ಎಂದರು. ಒಟ್ಟಾರೆಯಾಗಿ ಗುಂಪಿನಲ್ಲಿ ತಿಳಿದು ಬಂದಿದ್ದೆಂದರೆ ಈ ಎಲ್ಲಾ ಸಮಸ್ಯೆಗಳೂ ಕೂಡ ನಮ್ಮ ಮಾನಸಿಕ ವೇದನೆ ಕಾರಣವಾಗಿದೆ ಎಂದು ಈ ಗುಂಪಿನಲ್ಲಿ ತಿಳಿದು ಬಂದಿತು. ನಂತರ ಶೌಚಾಲಯ ಕೊರತೆಯಿಂದಾಗುವ ಈ ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳು ಯಾವ ರೀತಿಯಲ್ಲಿ ಮಾನಸಿಕ ಅನಾರೋಗ್ಯದ ಮೇಲೆ

ಪರಿಣಾಮ ಬೀರುತ್ತದೆ ಮತ್ತು ಈ ಸಮಸ್ಯೆಯು ಮಾನಸಿಕ ಅನಾರೋಗ್ಯಕ್ಕೆ ಕಾರಣವೇ ಎಂಬ ಅಂಶವನ್ನು ಚರ್ಚಿಸಲಾಯಿತು.

ಈ ವಿಷಯಾಧಾರಿತ ಚರ್ಚೆಯು ತುಂಬಾ ಆಸಕ್ತಿಕರವಾಗಿತ್ತು. ಮತ್ತು ಗುಂಪಿನಲ್ಲಿ ಕೂಡ ಎಲ್ಲರೂ ಅಷ್ಟೆ ಪೂರ್ಣ ಪ್ರಮಾಣದಲ್ಲಿ ಭಾವಹಿಸಿದರು. ಕೆಲವು ಯುವತಿಯರು ನಾವು ಅನುಭವಿಸುತ್ತಿರುವ ಹಿಂಸೆಯು ಮಾನಸಿಕವಾಗಿದೆಯೆಂದು ಗೊತ್ತು ಅದು ನಮ್ಮ ಮಾನಸಿಕ ಅನಾರೋಗ್ಯ ಎಂದು ನಮಗೆ ಗೊತ್ತಿಲ್ಲ ಮತ್ತು ನಾವು ಆ ರೀತಿ ಭಾವಿಸಲ್ಲಾ ಸಾರ್. ನಾವು ಸಬಲರೇ ಮಾನಸಿಕ ಅನಾರೋಗ್ಯಸ್ಥರೆಂದರೆ ಅವರು ನೋಡಲು ಮತ್ತು ಮಾಡುವ ಕೆಲಸಗಳು ವಿಭಿನ್ನವಾಗಿರುತ್ತೇವೆ ಅಂದರು. ಆದರೆ ಕೆಲ ಯುವತಿಯರು ಮಾತ್ರ ಈ ರೀತಿಯ ಹಿಂಸೆಗಳಿಗೆ ಒಳಗಾಗಿ ಹಲವು ಹೆಣ್ಣು ಮಕ್ಕಳು ಮತ್ತು ಯುವತಿಯರು ಹುಚ್ಚರಾದರಂತೆ ಎಂಬ ಪ್ರಕರಣಗಳು ನಾವು ಕೇಳಿದ್ದೇವೆ. ಆದರೆ ಒಂದಂತೂ ಸತ್ಯ ಸಾರ್, ಈ ಹಿಂಸೆ ನಮ್ಮನ್ನು ತೀವ್ರ ರೀತಿಯಲ್ಲಿ ಕಾಡುತ್ತಿದೆ. ಮತ್ತು ಹಲವು ಬಾರಿ ಪರಿತಪಿಸಿದ್ದೇವೆ ಮತ್ತು ಯಾರನ್ನು ಸಂಪರ್ಕಿಸಿದೆ ಮತ್ತು ಯಾರ ಬಳಿಯೂ ಹೇಳಿಕೊಳ್ಳಲಾಗದೆ ಹಿಂಸೆ ಅನುಭವಿಸಿದ್ದೇವೆ. ಅನುಭವಿಸುತ್ತಿದ್ದೇವೆ. ಹಲವಾರು ಬಾರಿ ಹತ್ತಿದ್ದೇವೆ. ಮತ್ತು ದುಃಖಿತರಾಗಿದ್ದೇವೆ. ಎಷ್ಟೋ ಬಾರಿ ಊಟ ಕೂಡ ಬಿಟ್ಟು ಮಲಗಿರುವ ರಾತ್ರಿಗಳಿವೆ. ಮತ್ತು ನಮ್ಮ ಆರೋಗ್ಯದಲ್ಲಿ ಏರುಪೇರಾಗಿ ಹೊಟ್ಟೆನೋವು, ರಕ್ತಹೀನತೆಯಂತಹ ಸಮಸ್ಯೆಗಳು ನಮ್ಮ ಹದಿಹರೆಯದವರಲ್ಲಿ ಕಂಡು ಬಂದಿವೆ.

ಈ ಎಲ್ಲಾ ಸಮಸ್ಯೆಗಳು ಮಾನಸಿಕ ಅನಾರೋಗ್ಯಕ್ಕೆ ಸೂಚನೆಗಳಾದರೆ ಖಂಡಿತವಾಗಿ ಈ ಹಿಂಸೆ ಸಮಸ್ಯೆಯಾಗಿದೆ. ಎನ್ನುವುದರಲ್ಲಿ ಸಂಶಯವಿಲ್ಲ ಎಂದು ಅಭಿಪ್ರಾಯ ಪಟ್ಟರು. ಇನ್ನೂ ಹಲವು ಯುವತಿಯರು ಬಯಲಿಗೆ ಹೋದ ಹೆಣ್ಣು ಮಗಳ ಮೇಲೆ ಅತ್ಯಾಚಾರ ಘಟನೆಗಳು ನಡೆದು ಆಕೆ ಮಾನಸಿಕ ಜಿಗುಪ್ಸೆಗೆ ಒಳಗಾಗಿ ಆತ್ಮಹತ್ಯೆಗೆ ತುತ್ತಾಗಿರುವ ಘಟನೆಗಳನ್ನು ನಾವು ಕೂಡ ಕೇಳಿದ್ದೇವೆ.

ನಾವು ತಿಂಗಳಿನಲ್ಲಿ ಮುಟ್ಟು ಆದಾಗ ಹೊಟ್ಟೆ ನೋವಿಗೆ ದಿನದ ರಾತ್ರಿ ಪೂರ ನಿದ್ದೆ ಮಾಡಲ್ಲಾ ಸಾರ್ ಈ ರೀತಿಯ ಮಾನಸಿಕ ಹಿಂಸೆಯನ್ನು ಕೂಡ ಅನುಭವಿಸಿದ್ದೇವೆ. ಒಬ್ಬ

ಯುವತಿ ತಮ್ಮ ಊರಿನಲ್ಲಿ ನಡೆದಿರುವ ಘಟನೆಯನ್ನು ವಿವರಿಸಿದರು. ಒಬ್ಬ ಯುವತಿಯು ಬಯಲು ಶೌಚಾ ಮಾಡಲು ಹೋದಾಗ ಆಕೆಯ ಮೇಲೆ ಮೊದಲೇ ಕಣ್ಣಿಟ್ಟಿದ್ದ ಒಬ್ಬ ಮದುವೆಯಾಗಿದ್ದ ಗಂಡಸು ಆಕೆಯ ಕೈ ಹಿಡಿದು ಎಳೆದಿದ್ದು ಆಕೆ ಕೂಗಿದರೂ, ಚೀರಿದರೂ ಬಿಡದ ಆತನು ಆಕೆಯನ್ನು ಬಲತ್ಕಾರ ಮಾಡಲು ಯತ್ನಿಸಿದ್ದಾನೆ. ಕೊನೆಗೆ ತಪ್ಪಿಉಸಿಕೊಂಡು ಓಡಿ ಬಂದಲು ಆಕೆ ವಿವಸ್ತ್ರಳಾಗಿ ಅದನ್ನು ಕಂಡ ಹಲವರು ಆಶ್ಚರ್ಯ ಚಿಕಿತರಾದರು ಮತ್ತು ಕೊನೆಗೆ ಆಕೆಗೆ ಹುಚ್ಚಿ (ಆಕೆಗೆ ತಲೆ ಸರಿ ಇಲ್ಲ ಆದ್ದರಿಂದ ಇತ್ತೀಚಿಗೆ ಹಾಗೆ ಮಾಡುತ್ತಿದ್ದಾಳೆ) ಎಂದು ಹುಚ್ಚಿ ಪಟ್ಟ ಕಟ್ಟಿಬಿಟ್ಟರು. ಇದನ್ನು ಕೇಳಿ ಬೇಸರದಿಂದ ಆಕೆ ನೇಣು ಬಿಗಿದು ಕೊಂಡು ಆತ್ಮಹತ್ಯ ಮಾಡಿಕೊಂಡಳು. ಈ ರೀತಿ ಸಮಾಜದ ಕಣ್ಣಿಗೆ ಬಿದ್ದು ಬಾಳುವುದಕ್ಕಿಂತ ಸಾಯೋದೆ ಲೇಸೆಂದು ಹಲವು ಹದಿಹರೆಯದ ಹೆಣ್ಣುಮಕ್ಕಳು ಸಾಯುತ್ತಿದ್ದಾರೆ ಸಾರ್.

ಈ ಹಿಂಸೆಗಳು ಮಾನಸಿಕ ಅನಾರೋಗ್ಯಕ್ಕೆ ಕಾರಣವಾಗಿದೆ ಎಂಬುದರಲ್ಲಿ ಸಂಶಯವಿಲ್ಲಾ ಸಾರ್ ಎಂದು. ಇನ್ನೂ ಕೆಲ ಯುವತಿಯರು ನಾವೀಗ ಹಿಂಸೆಯನ್ನು ಅನುಭವಿಸುತ್ತಿದ್ದೀವಿ ಆದರೆ ನಾವು ಮಾನಸಿಕ ಅನಾರೋಗ್ಯಸ್ಥರಲ್ಲಾ ಒಂದು ವೇಳೆ ಇದೇ ರೀತಿಯ ಹಿಂಸೆಯು ಮುಂದುವರಿದರೆ ಇದರಂತೆ ಮಾನಸಿಕ ರೋಗಿಗಳಾಗುವುದು ಖಚಿತವಾಗಿದೆ ಸಾರ್. ಒಬ್ಬ ಯುವತಿಯು ಈ ರೀತಿಯ ಘಟನೆಗಳು ನಮ್ಮೂರಲ್ಲೂ ಆಗಿವೆ ಸಾರ್ ಆದರೆ ಅದು ಆಗಿರುವವರ ಮನೆಯಲ್ಲಿ ಈವರೆಗೂ ಟಾಯಲೆಟ್ (ಶೌಚಾಲಯ) ಕಟ್ಟಿಸಿಕೊಂಡಿಲ್ಲಾ. ಅಂದ್ರ ಅರ್ಥ ಮಾಡ್ಕೋಳಿ ಯಾವ ರೀತಿ ಜನ ಯೋಚನೆ ಮಾಡ್ತಾರೆ ಮಹಿಳೆಯರ ಸಮಸ್ಯೆಗಳ ಬಗ್ಗೆ ಸಾರ್.

ಈ ಎಲ್ಲಾ ಹಿಂಸೆ ಮತ್ತು ಸಮಸ್ಯೆಗಳಿಗೆ ಸೂಕ್ತ ಶೌಚಾಲಯ ಒಂದೇ ಪರಿಹಾರ ಆದರೆ ಅದನ್ನು ಯಾವ ರೀತಿ ತಿಳಿ ಹೇಳಬೇಕೋ ಗೊತ್ತಿಲ್ಲಾ ಸಾರ್ ಎಂದು ತಮ್ಮ ಅಳಲು ತೋಡಿಕೊಂಡರು.

## ಗುಂಪು ಕೇಂದ್ರಿತ ಚರ್ಚೆಯ ಸಾರಾಂಶ:-

## (ಹದಿಹರೆಯದವರ ಗುಂಪು (ನಾಗೇನಹಳ್ಳಿ)

ಗುಂಪು ಚರ್ಚೆಯನ್ನು ಪ್ರಾರಂಭಿಸುವ ಮುನ್ನ ನನ್ನ ಮತ್ತು ಗುಂಪಿನ ಭಾಗವಹಿತರ ಪರಿಚಯ ವಾಯಿತು ಮತ್ತು ಚರ್ಚೆಯ ಉದ್ದೇಶ ಮತ್ತು ಧ್ಯೇಯಗಳನ್ನು ಸುಸೂತ್ರವಾಗಿ ಅವರಿಗೆ ತಿಳಿಹೇಳಲಾಯಿತು. ಅವರೆಲ್ಲರ ಒಪ್ಪಿಗೆಯ ಮೇರೆಗೆ ಚರ್ಚೆಯನ್ನು ಪ್ರಾರಂಭಿಸಲಾಯಿತು.

**ಮೊದಲಿಗೆ ಚರ್ಚಿತ ವಿಷಯವು ಸ್ವಚ್ಛತೆ ಎಂದರೇನು?**

ಈ ವಿಷಯಕ್ಕೆ ಸಂಬಂಧಿಸಿದಂತೆ ಉತ್ತಮ ರೀತಿಯ ಸ್ಪಂದನೆ ಮತ್ತು ಅಭಿಪ್ರಾಯವನ್ನು ಗುಂಪಿನಿಂದ ಸಂಗ್ರಹಿಸಲಾಯಿತು. ಕೆಲವು ಯುವತಿಯರು ಸ್ವಚ್ಛತೆ ಎಂದರೆ ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಕಾಪಾಡುವುದೆಂದರೆ ಕೆಲವು ಯುವತಿಯರು ಪರಿಸರ ಕಾಪಾಡುವಿಕೆಯ ಜೊತೆಗೆ ಮನುಷ್ಯ ಪಾತ್ರ ಜವಾಬ್ದಾರಿಗಳು ಕೂಡ ಅನಿವಾರ್ಯವೆಂದು ಅಭಿಪ್ರಾಯಪಟ್ಟರು. ನಂತರ ಚರ್ಚೆ ವಿಷಯ ಮೂಲಭೂತ ಸೌಕರ್ಯಗಳು ಎಂದರೇನು? ಮತ್ತು ಅವು ಏತಕ್ಕೆ ಬೇಕು ಮಾನವನಿಗೆ ಈ ಚರ್ಚೆಯು ತುಂಬಾ ರಸವತ್ತಾಗಿ ಮೂಡಿ ಬಂತು ಏಕೆ ನನ್ನ ನಿರೀಕ್ಷೆಯಂತೆ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕೆಲವರು ಮಾನವನಿಗೆ ಅತ್ಯಗತ್ಯವೆಂದ ಸಾಕರ್ಯಗಳಾದ ನೀರು, ಮನೆ, ಬಟ್ಟೆ, ಆಹಾರ, ಶೌಚಾಲಯ ಇವೆಲ್ಲಾ ಇಲ್ಲದೆ ಬದುಕಲಾಗುವುದಿಲ್ಲ ವೆಂದು ತುಂಬಾ ಚೊಕ್ಕವಾಗಿ ಚರ್ಚೆ ನಡೆಯಿತು. ನಂತರದ ವಿಷಯ ಪ್ತಸ್ತುತ ಸೌಕರ್ಯಗಳು ಹಳ್ಳಿಯಲ್ಲಿ ಎಂಬ ವಿಷಯಕ್ಕೆ ಬಂದಾಗ ಕೆಲವು ನೀರು ಮತ್ತು ಶೌಚಾಲಯ ಸಮಸ್ಯೆ ಅತೀವವಾಗಿದೆ ಎಂದರು. ಆದರೆ ಕೆಲವು ಶೌಚಾಲಯವಿದೆಯಾದರೂ ಯಾರೂ ಅದನ್ನು ಬಳಸುತ್ತಿಲ್ಲಾ ಎಂದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೆಲ ಯುವತಿಯರು ಅಲ್ಲಿನ ವ್ಯವಸ್ಥೆ ಸರಿ ಇಲ್ಲ ಅದರಲ್ಲೂ ಅಲ್ಲಿ ಹಂದಿ ಮತ್ತು ಹಾವುಗಳ ಕಾಟ ಜಾಸ್ತಿ ಇದೆ ಅದನ್ನು ಬಳಸಲು ಯೋಗ್ಯವಲ್ಲ ಎಂದು ಆಭಿಪ್ರಾಯಪಟ್ಟರು. ಕೆಲ ಯುವತಿಯರು ಒಂದು ವೇಳೆ ಬಳಸಲು ಹೋದರೂ ಕೂಡ ಅಲ್ಲಿ ಭಯ ಆಗುತ್ತೇ ಯಾಕೆಂದರೆ

ಎತ್ತರದ ಗೋಡೆಗಳಿರುವ ಆ ಶೌಚಾಲಯ (ಸಮುದಾಯ ಶೌಚಾಲಯ) ಒಳಗೆ ಏನಾದರೂ ನಡೆದರೂ ಈಚೆ ಇರುವವರೆಗೆ ಗೊತ್ತಾಗುವುದಿಲ್ಲಾ.

ಮತ್ತೆ ಕೆಲಯುವತಿಯರು ಹಲವು ಮನೆಗಳ ಹತ್ತಿರ ಶೌಚಾಲಯ ಇದೆ ಆದರೂ ಅವರು ಬಳಸುತ್ತಿಲ್ಲ ಸಾರ್ ಯಾಕೆಂದರೆ  ಅವರಿಗೆ ಅದು ಇಷ್ಟವಿಲ್ಲ ಮತ್ತು ಪ್ರತಿ ಸಾರಿ ಬಯಲಿಗೆ ಹೋಗೋ  ಅವರು (ನಾವು) ಒಂದು ನಾಲ್ಕು ಗೋಡೆಗಳ ಮಧ್ಯ ಕುಳಿತು ಬರುವುದು ಬೇಸರ ಆಗುತ್ತದೆ. ಇದಕ್ಕೆ ಪ್ರತ್ಯುತ್ತರ ನೀಡಿದ ಕೆಲ ಯುವತಿಯರು ಅದಲ್ಲಾ ಸಾರ್ ಸರಿಯಾಗಿ ನೀರು ಬರೋದಿಲ್ಲ ಮತ್ತೇ ಸುತ್ಲೂ ಗಂಡಸರು ಇರ್ತಾರೆ ಮತ್ತು ನಾವೇನಾದ್ರು ಒಳಗಡೆ ಹೋದ್ರೆ ಆ ಶೌಚಾಲಯ ಮೇಲೆ ಕಲ್ಲಾಕೋದು ಆ ಥರ ಮಾಡ್ತಾರೆ ಮತ್ತು ನಮ್ಮನೆಗಳಲ್ಲಿ ನಾವೆಲ್ಲ ಬಳಸುತ್ತಿವಿ (ಮಹಿಳೆಯರು) ಗಂಡಸರು ಈಗ್ಲೂ ಆಚೆಕಡೆ ಹೋಗ್ತಾರೆ ಯಾಕಂದ್ರೆ ಅವರಿಗೆ ಅದೇ ವಾಡಿಕೆ. ನಂತರದ ಚರ್ಚಿತ ವಿಷಯವು ಶೌಚಾಲಯ ಮಹತ್ವ ಮತ್ತು ಉಪಯೋಗ ಈ ಚರ್ಚಿತ ಅಂಶವು ತುಂಬಾ ಉತ್ಸುಕ ರೀತಿಯಲ್ಲಿ  ಬಂದಿತು. ಕೆಲ ಯುವತಿಯರು ಶೌಚಾಲಯವು ಅತ್ಯಮೂಲ್ಯವೆಂದರೆ ನಮ್ಗೆ ಸಾರ್ ಯಾಕಂದ್ರ ಗಂಡಸರೇನೋ ಎಲ್ಲಂದರಲ್ಲೆ ಹೋಗಿ ಬರ್ತಾರೆ ಆದ್ರ ಮಹಿಳೆಯರು ನಾವು ಎಲ್ಲಂತ ಹೋಗೋದು ನಮ್ಗೆ ಒಂಥರ ಮುಜುಗರ ಆಗುತ್ತೆ ಸಾರ್.

ಕೆಲ ಯುವತಿಯರು ಶೌಚಾಲಯಕ್ಕೆ ಅಂತ ಹೋದ್ರ ಸರ್ ನಮ್ಗೆ ತುಂಬಾನೇ ಭಯ ಆಗುತ್ತೆ ಸಾರ್ ಒಂದು ಕಡೆ ಕೂತ್ಕೋಬೇಕಂದ್ರ ಸುತ್ಲೂ 30 ಸಲ ನೋಡ್ಬೇಕು ಮತ್ತೆ ಮತ್ತೆ ನೋಡ್ತಿರ್ಬೇಕು ಆದ್ರೂ ಭಯಾನೇ ಯಾರನ್ನಾ ಬರ್ತಾರೇನೋ ನೋಡ್ತಾರೇನೋ ಅಂತ ಕೆಲ ಯುವತಿಯುರು ನೈಟಲ್ಲೇನನ್ನಾ ಹೋಗ್ಬೇಕಂದ್ರ ತುಂಬಾ ಹೆದರಿಕೆ ಸಾರ್ ಯಾಕಂದ್ರ ರಾತ್ರಿ ಬೇರೆ ಕತ್ಲು ಮತ್ತು ಬೀದಿನಾಯಿಗಳು ಕೋತಿಗಳು ಮತ್ತು ಅದರಲ್ಲೂ ಕುಡುಕರು ಈ ಎಲ್ಲರಿಗೂ ತಪ್ಪಿಸಿಕೊಂಡು ಹೋಗಿ ಕೂತು ಬರ್ಬೇಕು. ಕೆಲ ಯುವತಿಯರು ಶೌಚಾಲಯಕ್ಕೆ ಬಂದ್ರೇನೇ ಬೇಜಾರಾಗುತ್ತೇ ಸಾರ್ ಯಾರಾದ್ರೂ ಬರುತ್ತೇ ಅಂಥ  ಮತ್ತು ಹೋಗ್ಬೇಕು ಅಂತ ಅದಕ್ಕೆ ಶೌಚಾಲಯ ಮನೆ ಹತ್ರ ಇದ್ರ ಎಲ್ಲದಕ್ಕೂ ಸರಿ ಹೋಗುತ್ತೆ  ಮತ್ತು ಯಾವುದೇ ತರ ಭಯ ಇರಲ್ಲಾ ಸಾರ್ ನಮ್ಗೆ ಅದಕ್ಕೆ ಶೌಚಾಲಯ ಬೇಕೆ ಬೇಕು ಮನೆಗಳಿಗೆ.

**ನಂತರದ ಚರ್ಚಿತ ವಿಷಯವು ಶೌಚಾಲಯ ಕೊರತೆಯಿಂದಾಗುತ್ತಿರುವ ಸಮಸ್ಯೆಗಳು.**

ಈ ಸಮಯದಲ್ಲಿ ನನಗೆ ವಿಭಿನ್ನ ರೀತಿಯ ಅನುಭವವಾಯಿತು ಯಾಕೆಂದರೆ ಕೆಲ ಯುವತಿಯರ ಪ್ರಕಾರ ಶೌಚಾಲಯಕ್ಕೆ ಹೋಗಬೇಕಾದ ಸಂದರ್ಭದಲ್ಲಿ ಹೆಚ್ಚಾಗಿ ಬಲಿಯಾಗುತ್ತಿರುವುದು ಸಮಸ್ಯೆಗಳಿಗೆ ಮಹಿಳೆಯರೇ ಅದರಲ್ಲೂ ನಮ್ಮಂತಹ ಯುವತಿಯುರು ಯಾಕಂದ್ರ ಮನೆಯಿಂದ ಅರ್ಧ ಕಿಲೋಮೀಟರ್ ದೂರ ಹೋಗಬೇಕಾದ ಪರಿಸ್ಥಿತಿ ಇರೋಂದ್ರಿಂದ ನಮ್ಗಂತೂ ತುಂಬಾನೇ ಸಮಸ್ಯೆಯಾಗುತ್ತಿದೆ. ಕೆಲಯುವತಿಯರೂ ಶೌಚಾಕ್ಕೆ ಹೋಗಬೇಕಾದ್ರೆ ನಾವು ತುಂಬಾನೆ ಸಮಸ್ಯೆಗಳನ್ನು ನೋಡ್ಬೇಕು ಒಂದೊಂದು ಸಲ ಗಂಡಸರು ಹುಡುಗರೂ ಬೇಕಾದ್ರು ಬಂದು ನಮ್ಮ ಕಡೆ ಬರುತ್ತಾರೆ. ಮತ್ತು ಚುಡಾಯಿಸುತ್ತಾರೆ ಮತ್ತು ರೇಗಿಸುತ್ತಾರೆ. ಮತ್ತೆ ಕೇಳಿದ್ರೆ ನಾವೇನು ನಿಮ್ಮನ್ನ ನೋಡಕ್ಕೆ ಬಂದಿಲ್ಲಾ ಅಂತ ಮಾತು ಬದಲಾಯಿಸುತ್ತಾರೆ.

ಕೆಲಯುವತಿಯರು ಗಂಡಸರ ಕಾಟ ಮಾತ್ರ ಅಲ್ಲ ಸಾರ್ ಕೋತಿಗಳು ಬೇರೆ ಓಡಾಡ್ತಿರ್ತಾವೆ ಇಲ್ಲಿ ನಾವೇ ನನ್ನಾ ಅಚೆ ಕಡೆ ಹೋಗಿ ಕೂತ್ರಿದ್ರೆ ಕಚ್ಚೋಕೆ ಬರ್ತಾವೆ ಮತ್ತು ಹೆದರಿಸ್ತಾವೆ. ಅದಕ್ಕೂ ಭಯ ಮತ್ತೆ ರಾತ್ರಿಲಿ ಹೋಗ್ಬೇಕಂದ್ರ ಹಾವು ಚೇಳುಗಳ ಕಾಟ ಸಾರ್ ಆದ್ರೂ ಹೋಗ್ಲೇ ಬೇಕಲ್ವ ಸಾರ್ ನಮ್ಮ ಸಂಕಟ ನಮ್ಗೆ ಗೊತ್ತು. ಕೆಲ ಯುವತಿಯರು ಅದರಲ್ಲೂ ನಮ್ಮ ಕೆಲಸ ಮನೆಗಳಲ್ಲಿ ಅನುಮಾನ ಸಾರ ನಾವೇನನ್ನಾ ಒಂದು ಕಡೆ ಹೋಗಿ ಕೂತು ಲೇಟಾಗಿ ಮನೆಗೆ ಬಂದ್ರ ಮನೇಲಿ ಇರೋರಿಗೆ ನಮ್ಮೇಲೇ ಅನುಮಾನ ಎಲ್ಲಿಗೆ ಹೋಗಿದ್ದೆ ಎಷ್ಟು ಹೊತ್ತು ಹೋಗಿದ್ದೆ, ಯಾಕೆ ಯಾವಾಗ್ಲೂ ಆ ಕಡೆ ಹೋಗ್ತಿಯಾ ಏನಿದೆ ಅಲ್ಲಿ ಯಾರಿದ್ದಾರೆ ಅಲ್ಲಿ ಅಂತ ಅನುಮಾನದಿಂದ ಕೇಳ್ತಾರೆ ಸಾರ್.

ಕೆಲ ಯುವತಿಯರು ನಾವೇನನ್ನಾ ಸಮಸ್ಯೆಗೆ ಒಳಗಾಗಿ ಅದನ್ನು ಬೇರೆಯವರತ್ರ ಹೇಳೋಕೆ ಬೇಜಾರಾಗುತ್ತೇ ಸಾರ್ ಯಾಕಂದ್ರ ಅದು ಮುಜುಗರ ಒಂದ್ವೇಳೆ ಹೇಳಿದ್ರೂ ಅದಕ್ಕೆ ಪರಿಹಾರ ಸಿಗಲ್ಲಾ ಯಾಕಂದ್ರ ನಿನೊಬ್ಬಳೇ ಊರಲ್ಲಿ ಹುಡುಗಿ ಅವರೆಲ್ಲಾ ಯಾವತರ ಹೊಗ್ತಾರೋ ನಿನೂ ಹಂಗೆ ಹೋಗಿ ಬಾ ಅಂತಾರೆ. ಕೆಲ ಯುವತಿಯರು ಈ ಸಮಾಜ ಹೆಂಗಂದ್ರ ಸಾರ್ ನಾವೇನನ್ನಾ ವಿಚಿತ್ರ ರೀತಿಯಲ್ಲಿ ಕಾಣಿಸಿದ್ರೆ ಸಾಕಂತ ಎದುರು ನೋಡ್ತಾ ಇರ್ತಾರೆ ಸಾರ್. ಒದ್ವೇಳೆ

ನಾವೆನನ್ನು ಅ ಥರ ಕಾಣ್ಸಿದ್ರೆ ಸಾಕು ನಮ್ಮ ಮಾನ ಹರಾಜು ಹಾಕ್ತಾರೆ ಮತ್ತೇ ನಾವೇ ಅವರ ಮುಂದೆ ಹೋಗೋಕೆ ನಾಚಿಕೆ ಆಗುತ್ತೆ. ನಂತರದ ಗುಂಪಿನ ಚರ್ಚಿತ ವಿಷಯ ಯಾರಿಗೆ ಸಮಸ್ಯೆ ತೀವ್ರರೀತಿಯಲ್ಲಿದೆ ಮಹಿಳೆಯರಲ್ಲಿ ಮತ್ತು  ಯಾಕೆ. ಕೆಲ ಯುವತಿಯರು ಅತೀ ಹೆಚ್ಚು ಮಹಿಳೆಯರಲ್ಲಿ ಯುವತಿಯರಿಗೆ ಸಾರ್ ಯಾಕಂದ್ರೆ ನಾವು ತಿಂಗಳಲ್ಲಿ ಆಗೋ ಮುಟ್ಟು ರೀತಿಯಲ್ಲಿ ತುಂಬಾನೇ ಹೊಟ್ಟೆನೋವು ಮತ್ತು ರಕ್ತ ಹೀನತೆಗೆ ಒಳಗಾಗುತ್ತೇವೆ ಮತ್ತು ಆ ಸ್ಥಿತಿಯಲ್ಲಿ ನಾವು ಶೌಚಾಲಯದಲ್ಲಿ ತುಂಬಾ ಸಮಯ ಕಳೆಯಬೇಕಾಗುತ್ತದೆ. ಮತ್ತು ಶೌಚಾಲಯಕ್ಕೆ ಹೋಗಬೇಕಂದ್ರು ಕೂಡ ಗಂಡಸರು ಅತೀ ಹೆಚ್ಚು ರೇಗಿಸೋದು ಚುಡಾಯಿಸೋದು ನಮ್ಮನೇ ಸಾರ್.

ಕೆಲ ಯುವತಿಯರು ಅವರಂದಂಗೆ ನಮ್ಗ ಸಮಸ್ಯೆ ಇದೆ ಅಂತೆಯೇ ಎಲ್ಲಾ ಮಹಿಳೆಯರಿಗೂ ಸಮಸ್ಯೆ ಇದೆ ಸಾರ್ ಯಾಕಂದ್ರ ನಾವೆಲ್ಲಾ ಮಹಿಳೆಯರು ನಾವೇನೂ ಯುವತಿಯರು ಈ ಜಾಗ ಅಲ್ಲ ಅಂದ್ರ ಇನ್ನೊಂದು ಜಾಗದಲ್ಲಿ ಕೂತು ಬರ್ತೀವಿ. ಆದ್ರ ಗರ್ಭಿಣಿ ಮತ್ತು ಮುದಿಯರು ತುಂಬಾನೇ ಹಿಂಸೆ ಅನುಭವಿಸುತ್ತಾರೆ. ಯಾಕಂದ್ರ ಅವರಿಗೆ ಕೂತ್ಕೋಳೋಕೆ ಅಗಲ್ಲಾ ಸರಿಯಾಗಿ ಮತ್ತೆ ಎದ್ದೋಳೋಕೆ ಆಗಲ್ಲಾ ಅಂಥ ಸಂದಭದಲ್ಲಿ  ಈ ತರ ಸಮಸ್ಯೆಗಳು ಅವರಿಗೂ ತೀವ್ರ ರೀತಿಯ ನೋವು ಮತ್ತು ಹಿಂಸೆ ಸಾರ್. ಕೆಲ ಯುವತಿಯರು ಅವರಿಗೂ ಸಮಸ್ಯೆ ಇದೆ ಆದ್ರ ತುಂಬಾ ಜನರಿಗೆ ಹೆದರಿಕೆ ಇರೋದು ಗಂಡಸರ ಬಗ್ಗೆ ಆ ವಿಷಯಕ್ಕೆ ಬಂದ್ರ ಹೆಚ್ಚಾಗಿ ಗಂಡಸರು ಹುಡುಗರು ರೇಗಿಸೋದು ಯುವತಿಯರನ್ನೇ ಅದಕ್ಕೆ ನಮ್ಗನೇ ಸಮಸ್ಯೆ. ಗರ್ಭೀಣಿರು ಮತ್ತು ಮುದಿಯರು ಮದುವೆಯಾಗಿ ಸಮಾಜದಲ್ಲಿ ಒಂದು ಸ್ಥಾನ ಇರೋರು ಅದ್ರ ನಾವು ಒಂದು ಸಲ ಅಥರ ಅವಮಾನಕ್ಕೆ ಒಳಗಾದರೆ ಮತ್ತೆ  ಜೀವನದಲ್ಲಿ ಮರ್ಯಾದೆ ಮತ್ತು ಮದುವೆ ಏನೋ ಇಲ್ದೆ ಮಾಡುತ್ತೇ ಈ ಸಮಾಜ ಸಾರ್.

ಶೌಚಾಲಯ ಕಟ್ಟಿಸದಿರಲು ಕಾರಣವೇನು ಎಂಬುದು ನಂತಗರದ ಚರ್ಚಿತ ವಿಷಯವಾಗಿತ್ತು. ಕೆಲ  ಯುವತಿಯರು ಹಣದ ಕೊರತೆ (ಬಡತನ ಅಂತಾರೆ ಸಾರ್) ಮನೆನಲ್ಲಿ ಯಾಕಂದ್ರ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಅದ್ದರಿಂದ ಸಮಸ್ಯೆ ಸಮಸ್ಯೆಯಾಗಿಯೇ ಇದೆ.

ಕೆಲ ಯುವತಿಯರು ಹಣ ಇದ್ದರೂ ಕಟ್ಟೋದಿಲ್ಲ ಸಾರ್ ಯಾಕಂದ್ರ ಶೌಚಾಲಯ ಮನೆ ಹತ್ರ ಇರಬಾರದೆಂಬ ತಪ್ಪು ಕಲ್ಪನೆ ಮತ್ತು ಇದ್ರ ಅನಿಷ್ಠ (ದೇವರ ಪೂಜೆ ಪುರಸ್ಕಾರ ನಡೆಯುತ್ತೇ ಮನೆನಲ್ಲಿ) ಕೆಲ ಯುವತಿಯರು  ನಮ್ಮನೇಲಿ ನಮ್ಮಪ್ಪ ಕಟ್ಸಲ್ಲಾ ಸಾರ್ ಯಾಕಂದ್ರ ಅದಕ್ಕೆಲ್ಲಾ ಸಪರೇಟ್ ಜಾಗ ಬೇಕು ಯಾಕೆ ಮನೆ ಮುಂದೆ ಅದು ಮತ್ತೆ (5) ನಿಮಿಷದ ಕೆಲಸಕ್ಕೆಲ್ಲಾ ಯಾಕೆ ತಕರಾರು ಅಂತಾರೆ. ಕೆಲಯುವತಿಯರು ನಮ್ಮ ಸಮಸ್ಯೆಗಳನ್ನು ನಮ್ಮ ತಾಯಿ ಹತ್ರ ಹೇಳಿದಾಗ ಅವರಿಂದ ತುಂಬಾನೇ ಉತ್ತಮ ರೀತಿಯ ಸ್ಪಂದನೆ ಬಂತು ಅದ್ರೆ ನಮ್ಮ ತಾಯಿ ನಮ್ಮ ತಂದೆ ಮತ್ತು ಅಣ್ಣ ಹತ್ರ  ಕೇಳಿದಾಗ ಅವ್ರು ಬೈದರು ಮತ್ತು ನೀವು ಮೊದಲು ಬುದ್ದಿಯಾಗಿ ಹೋಗಿ ಬನ್ನಿ ಎಲ್ಲಾ ಸರಿಹೋಗುತ್ತೆ ಅಂದ್ರು ಅದಕ್ಕೆ ನಮ್ಮಮ್ಮ ನಾನು ಸುಮ್ನ ಆಗ್ಬಿಟ್ವೆ ಒಟ್ಟಾರೆಯಾಗಿ ಯುವತಿಯರಿಗೆ ಶೌಚಾಲಯದ ಅಗತ್ಯವಿದೆ ಅದರೆ ಮನೆಯಲ್ಲಿ ಈ ಸಮಸ್ಯೆಗೆ ಸೂಕ್ತ ಸ್ಪಂದನೆ ಇಲ್ಲಾ.

ಈ ಸಮಸ್ಯೆಗೆ ಪರಿಹಾರ ಏನೆಂದು ಭಾವಿಸಿದ್ದೀರಿ ಎಂದು ನಂತರದ ಚರ್ಚಿತ ವಿಷಯವಾಗಿತ್ತು. ಕೆಲ ಯುವತಿಯರು ಸಮಸ್ಯೆ ಇದ್ದದ್ದೆ ಸುಮ್ನೆ ನಾವೇ ಯಾರೂ ಇಲ್ದೆಇರೋ ಸ್ಥಳ ನೋಡಿ ಅಥವಾ ಯಾರೂ ಓಡಾಡದೇ ಇರುವ ಸಮಯ ನೋಡಿ ಕೂತು ಬಂದ್ರ ಆಯ್ತು ಅಂತ ಅನ್ಕೊಂಡಿದ್ದೀವಿ. ಕೆಲ ಯುವತಿಯರು ಬಯಲಿಗೆ  ಹೋದಾಗ ಒಂದ್ವೇಳೆ ಏನನ್ನಾ ಆದಾಗ ಯಾರ್ಗೂ ಹೇಳ್ಬಾರ್ದು ಯಾಕಂದ್ರಮತ್ತ ಅದು ಅವಮಾನ ಸುಮ್ನೆ ನಂಪಾಡಿಗೆ ನಾವು ಬರ್ಬೇಕು ಅಂತ ಅನ್ಸುತ್ತೆ ಸಾರ್. ಯಾರಾದ್ರು ರೇಗಿಸದ್ರೂ ನೋಡಿದ್ರೂ ಕೂಡ ನಾವು ಕೂತು ಬರ್ಬೇಕು ಯಾಕಂದ್ರ ನಮ್ಮ ಸಂಕಟ ನಮ್ಗೆ ತಾನೇ ಗೊತ್ತು ಕೆಲಯುವತಿಯರು:  ನಾವು ನಮ್ಮನೇಲಿ ಹೇಳಿದಾಗ  ಮತ್ತು ನಾವು ಅಂದುಕೊಂಡಿರೊದು ಕಡಿಮೆ ಊಟ ಮತ್ತು ನೀರು ಕುಡಿಯೋದೆ ಪರಿಹಾರ ಅನ್ಕೊಂಡಿದ್ದೀವಿ ಸಾರ್. ಕೆಲಯುವತಿಯರು: ಆ ಸ್ಥಿತೀಲಿ ಸಾರ್ ತಡ್ಕೋಳಕ್ಕಾಗಲ್ಲ ಮತ್ತೇ ಹೆಳ್ಕೋಳ್ಳೋಕಾಗಲ್ಲ ಯಾಕಪ್ಪ ಹೆಣ್ಣಿಗೆ ಮಾತ್ರ ಈ ಸ್ಥಿತಿ ಅಂತ ಸಿಟ್ಟು ಬರುತ್ತೇ ಮತ್ತೆ ಈ ಜೀವನವೇ ಬೇಡ ಅಂತ ಆನ್ಸುತ್ತೇ ಸಾರ್

ಆದ್ರ ಸಾರ್ ನಾವಂತೂ ನಮ್ಮ ಮದುವೆ ಆದ್ರೆ ಆ ಮನೇಲಿ ಶೌಚಾಲಯ ಇದ್ರೆ ಮಾತ್ರ ಹೋಗ್ತೀವಿ ಸಾರ್ ಇಲ್ಲಾಂದ್ರ ಹೋಗಲ್ಲಾ ಮದುವೆ ಆಗಲ್ಲ ಸಾರ್.

## (1) CASE STUDY

### Sujatha

ನಾನು ಕಂಪ್ಲಿ ನಗರಕ್ಕೆ ಸೇರಿದ್ದು ನಾನು ಮದುವೆಯಾಗಿ ಸೋಮನಾಥಪುರ ಎಂಬ ಹಳ್ಳಿಗೆ ಹೋದೆ ಅಲ್ಲಿ ನಮ್ಮ ಗಂಡನ ಮನೆಯಲ್ಲಿ ಶೌಚಾಲಯ ಇರಲಿಲ್ಲ. ಬದಲಿಗೆ ಸಮುದಾಯ ಶೌಚಾಲಯ ಇತ್ತು ಊರಿನ ಎಲ್ಲಾ ಮಹಿಳೆಯರೂ ಅಲ್ಲಿಗೆ ಹೋಗುತ್ತಿದ್ದರು. ಮತ್ತು ಅದನ್ನೇ ಬಳಸುತ್ತಿದ್ದರು. ಸಾಮಾನ್ಯವಾಗಿ ಹೆಚ್ಚು ಮಹಿಳೆಯರು ಹೋಗುವುದು ಮುಂಜಾನೆಯೇ ನಾನು ಕೂಡ ಮುಂಜಾನೇಯ ಹೋಗಬೇಕಾಗಿ ಬರುತ್ತಿತ್ತು. ಆದರೆ ಅಲ್ಲಿ ವಿಶೇಷವೆಂದರೆ ತುಂಬಾ ಹೆಂಗಸರು ಒಮ್ಮೇಲೆ ಬರುವುದರಿಂದ ಅಲ್ಲಿ ಜನ ಸಂದಣಿ ಹೆಚ್ಚಾಗುತ್ತಿತ್ತು. ಮತ್ತು ಎಲ್ಲರೂ ಸಾಲಾಗಿ ನಿಲ್ಲಬೇಕಾದ ಪರಿಸ್ಥಿತಿ ಏರ್ಪಡುತ್ತಿತ್ತು. ನಾನು ಕೂಡ ಹಲವು ಬಾರಿ ಆ ಸಾಲಿನಲ್ಲಿ ನಿಂತಿದ್ದೇನೆ. ಆದರೆ ಆ ರೀತಿ ನಿಲ್ಲಬೇಕಾದರೆ ಒಂದುಯ ರೀತಿಯ ಮುಜುಗರ ಆಗುತ್ತಿತ್ತು ಮತ್ತು ನಾಚಿಕೆಯಾಗುತ್ತಿತ್ತು. ಏಕೆಂದರೆ ಅದು ಗಂಡಸರು ಮತ್ತು ಹುಡುಗರು ಓಡಾಡುವ ಸ್ಥಳವಾಗಿತ್ತು ಮತ್ತು ರಸ್ತೆಯ ಬದಿಯಲ್ಲಿದ್ದರಿಂದ ಹಲವು ವಾಹನ ಸವಾರರು ಕೂಡ ನಮ್ಮನ್ನು ನೋಡಿಕೊಂಡು ಹೋಗುತ್ತಿದ್ದರು. ನಗುತ್ತಿದ್ದರು. ಹೊಸದಾಗಿ ಮದುವೆಯಾಗಿ ಆ ಊರಿಗೆ ಹೋಗಿರುವ ನಾನು ಎಲ್ಲರಿಗೂ ಅಪರಿಚಿತಳು ಮತ್ತು ನನಗೂ ಅವರು ಮತ್ತು ಆ ಸನ್ನಿವೇಶಗಳು ತುಂಬಾ ಹೊಸತು ಆದ್ದರಿಂದ ನನಗೆ ಆ ಸನ್ನಿವೇಶಕ್ಕೆ ಹೊಂದಿಕೊಳ್ಳಲು ತುಂಬಾ ಕಷ್ಟವಾಯಿತು. ಮತ್ತು ನನ್ನ ಕೈಯಲ್ಲಿ ಆ ಸನ್ನಿವೇಶಕ್ಕೆ ಹೊಂದಿಕೊಳ್ಳಲಾಗಲಿಲ್ಲ. ಕಾರಣ ನಮ್ಮ ತವರುಮನೆಯಲ್ಲಿ ಶೌಚಾಲಯ ವ್ಯವಸ್ಥೆ ಸುಗಮವಾಗಿತ್ತು ಮತ್ತು ಉತ್ತಮ ರೀತಿಯಾಗಿತ್ತು. ಆದ ಕಾರಣ ನಾನಂತೂ ತುಂಬಾ ತೀವ್ರ ರೀತಿಯ ಸಮಸ್ಯೆಯನ್ನು ಎದುರಿಸಿದೆ.

ಈ ರೀತಿಯ ವಿಷಯಗಳನ್ನು ನಮ್ಮ ಮನೆಯಲ್ಲಿ ಹೇಳು ನನ್ನ ಕೈಯಲ್ಲಿ ಆಗಲಿಲ್ಲ. ಮತ್ತು ಅದನ್ನು ಬಚ್ಚಿಡಲೂ ಆಗಲಿಲ್ಲ ಒಂದು ದಿನ ಧೈರ್ಯಮಾಡಿ ನನ್ನ ಗಂಡನ ಬಳಿ ಹೇಳಿದೆ ನನಗೆ ಹೊರಗಡೆ ಶೌಚಾಲಯಕ್ಕೆ ಹೋಗಲು ಕಷ್ಟವಾಗುತ್ತಿದೆ ಅಂತ ಅದಕ್ಕೆ ಆತನು ಯಾವುದೇ ಪ್ರತಿಕ್ರೆಯೆ ನೀಡಲಿಲ್ಲ. ಜೊತೆಗೆ ನನ್ನ ಮಾತನ್ನು ಪೂರ್ತಿಯಾಗಿ ಕೇಳಲಿಲ್ಲ. ಆದರೆ ನಾನು ಈ ಮುಜುಗರ ವಿಷಯವನ್ನು ಯಾವ ರೀತಿಯಲ್ಲಿ ನಮ್ಮ ಮನೆ ಹಿರಿಯರ ಹತ್ತಿರ ಹೇಳಲಿ ಎಂದು ಆತಂಕ್ಕಕೊಳಗಾದೆ.

ಒಂದು ವೇಳೆ ಹೇಳಿದರೆ ಅವರು ನನ್ನನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ ಏನಪ್ಪಾ ಈಯಮ್ಮ ನಿನ್ನ ಬಂದು ಸಮಸ್ಯೆ ಅಂತಿದ್ದಾಳೆ ನಮ್ಮನೇಲಿ ಯಾರೂ ಈ ಥರ ಅಂದಿಲ್ಲಾ ಇವರೇನೂ ಲಕ್ಷಾಧಿಕಾರಿಗಳೇ ಎಂದು ಎಲ್ಲಿ ಅಂದುಕೊಳ್ಳುತ್ತಾರೆ. ಅಂತ ಸ್ವತಃ ನಾನೇ ದಿನಕ್ಕೆ ಒಂದು ಬಾರಿ ಊಟ ಮಾಡುತ್ತಿದ್ದೆ. ಮತ್ತು ಮಧ್ಯಾಹ್ನದ ಹೊತ್ತಿನಲ್ಲಿ ಶೌಚಾಲಯ ಬಳಸಲು ಪ್ರಾರಂಭಿಸಿದೆ ಆದರೆ ೧ ತಿಂಗಳ ನಂತರ ನನಗೆ ಗ್ಯಾಸ್ಟ್ರಿಕ್ಟ್ ಸಮಸ್ಯೆಯಿಂದ ಅನಾರೋಗ್ಯಕ್ಕೆ ಒಳಗಾದೆ ದಿನವಿಡೀ ತೀರಾ ಎದೆಯಲ್ಲಿ ಉರಿ ಮತ್ತು ತುಂಬಾ ಹೊಟ್ಟೆ ನೋವು ಕಾಣಿಸಿಕೊಂಡಿತು. ಆದರೆ ನಾನು ಯಾರ ಹತ್ರನೂ ಹೇಳಲಿಲ್ಲ. ನನ್ನಲ್ಲಿ ನಾನೇ ಸಮಸ್ಯೆಯನ್ನು ಅನುಭವಿಸುತ್ತಿದ್ದೆ. ಕೊನೆಗೆ ನನಗೆ ಹೊಟ್ಟೆ ನೋವಿನ ಸಮಸ್ಯೆ ತೀವ್ರರೀತಿಯಲ್ಲಿ ಕಾಣಿಸಿಕೊಂಡಿತು. ಆ ಸಂದರ್ಭದಲ್ಲಿ ನಾನು ನನ್ನ ಗಂಡನ

ಮತ್ತು ಮನೆಯವರ ಬಳಿ ಹೇಳಿಕೊಂಡೆ ಒಂದೆರಡು ಬಾರಿ ನನಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಅವರು ನಂತರ ನಮ್ಮಲ್ಲಿ ಹಣವಿಲ್ಲ ಎಂದು ಸುಮ್ಮನಾದರು.

ಆದರೆ ನನ್ನ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯಿತು. ಕೊನೆಗೆ ನನ್ನ ಹೊಟ್ಟೆನೋವಿಗೆ ಕಾರಣವೇನು ಮತ್ತು ಯಾಕೆ ಪ್ರಾರಂಭವಾಯಿತೆಂದು ಹೇಳುಲು ಮುಂದಾದೆ, ಹೇಳಿದೆ ಆದರೆ ವಿಶೇಷವೆಂದರೆ ನನ್ನ ಈ ಸಮಸ್ಯೆಯನ್ನು ಯಾರೂ ನಂಬಲಿಲ್ಲ ಮತ್ತು ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂಬಂತೆ ಮಾತನಾಡಿದರು. ಮತ್ತು ನನ್ನ ಮೇಲೆ ಸಿಟ್ಟಾದರೂ. ಈ ರೀತಿಯ ನೋವಿನಿಂದ ನನಗೆ ತುಂಬಾ ಬೇಸರವಾಯಿತು ಮತ್ತು ದುಃಖವಾಯಿತು.

ಏಕೆಂದರೆ ಸಮಸ್ಯೆಗೆ ಕಾರಣಹೇಳಿದರೆ ಯಾರೂ ನಂಬಲ್ಲ ಅಲ್ಲಿ ಸಮಸ್ಯೆಯಿಂದ ಆದ ಪರಿಣಾಮ ಕೂಡ ಯಾರೂ  ನಂಬಲ್ಲ ಒಮ್ಮೆಲೆ ನನಗೆ ವಿಪರೀತ ದುಃಖವಾಯಿತು. ಮತ್ತು ತೀವ್ರ ರೀತಿಯ ವೇದನೆಯಾಯಿತು. ಕೊನೆಗೆ ಈ ಸಮಸ್ಯೆಯಿಂದ ಹೊರಬರಬೇಕೆಂದು ಸ್ವಲ್ಪ ಚೇತರಿಸಿಕೊಂಡಿದ್ದೇನೆ. ಮತ್ತು ಯಾವುದೇ ಕಾರಣಕ್ಕೂ ಆ ಊರಿಗೆ ಹೋರಬಾರದೆಂದು ನಿರ್ಧರಿಸಿದ್ದೇನೆ. ಏಕೆಂದರೆ ನನಗೆ ಆ ಸಮಸ್ಯೆ ಅಷ್ಟರ ಮಟ್ಟಿಗೆ ನನ್ನ ಮೇಲೆ ಪ್ರಭಾವ ಬೀರಿತ್ತು.

# (2) CASE STUDY

## Radhika (kampli)

ನಾನು ಪ್ರಸ್ತುತ ಸಖಿ ಸಂಖೆಯಲ್ಲಿ ಟೈಲರಿಂಗ್ ತರಬೇತಿ ಪಡೆಯುತ್ತಿದ್ದೇನೆ. ನಾನು ಸುಮಾರು ವರ್ಷಗಳಿಂದ ಒಂದು ಸಮಸ್ಯೆಗೆ ಒಳಗಾಗಿದ್ದೇನೆ. ಮತ್ತು ಇದನ್ನು ಸಮಸ್ಯೆ ಎಂದು ಎನ್ನುವುದಕ್ಕಿಂತ ಮಾನಸಿಕ ಹಿಂಸೆ ಎಂದರೇನೇ ಚಂದ, ಏಕೆಂದರೆ ನನ್ನ ಮನಸ್ಸಿನ ಮೇಲೆ ಈ ಸಮಸ್ಯೆಯು ಅಷ್ಟರ ಮಟ್ಟಿಗೆ ಪರಿಣಾಮ ಬೀರಿತ್ತು. ವಿಷಯವೆಂದರೆ ಶೌಚಾಲಯದ ಕೊರತೆ ಸಮಸ್ಯೆ ನಮ್ಮ ಮನೆಯಲ್ಲಿ ಶೌಚಾಲಯದ ಕೊರತೆ ಇದೆ ಮತ್ತು ನನ್ನ ವಿದ್ಯಾಭ್ಯಾಸವೆಲ್ಲಾ ನಗರದ ಹಾಸ್ಟಲ್‌ನಲ್ಲಿ ನಡೆದಿದ್ದರಿಂದ ನನಗೆ ಆಗ ಯಾವುದೇ ರೀತಿಯ ಸಮಸ್ಯೆಗಳಿರಲಿಲ್ಲ. ಮತ್ತು ನಾನು ಊರಿಗೆ ಬಂದರೆ ನನಗೆ ಈ ಸಮಸ್ಯೆ ಕಾಡುತ್ತಿತ್ತು. ಯಾಕೆಂದರೆ ನಾನು ಬಯಲಿಗೆ ಹೋಗಬೇಕಾಗಿತ್ತು. ಇದು ನನಗೆ ಹವ್ಯಾಸವಿರಲಿಲ್ಲ. ಮತ್ತು ತುಂಬಾ ಮುಜುಗರವಾಗುತ್ತಿತ್ತು. ಏಕೆಂದರೆ ಮುಂಜಾನೆ ಅಥವಾ ರಾತ್ರಿಯ ವೇಳೆಯಲ್ಲಿ (ಚೋಂಭನ್ನು) ತೆಗೆದುಕೊಂಡು ಹೋಗುವುದು ಮತ್ತು ಊರಿನಿಂದ ದೂರ ನಡೆಯುವುದು ಭಯ ಆಗುತ್ತಿತ್ತು. ಈ ರೀತಿಯಾಗಿ ನನಗೆ ಬಯಲು ಶೌಚಾಲಯ ತುಂಬಾ ಹೆದರಿಕೆ ಮುಜುಗರ ನೀಡುತ್ತಿತ್ತು. ಅಲ್ಲದೇ ನಾನು ಹಲವು ಬಾರಿ ಶೌಚಾಲಯಕ್ಕೆ ಬಂದರು ಹೋಗಲು ಭಯವಾಗಿ ಸುಮ್ಮನಿದ್ದ ಸನ್ನಿವೇಶಗಳಿದ್ದವು ಮತ್ತು ಸುಮಾರು ಭಾರಿ ಅವಮಾನಕ್ಕೊಳಗಾದ ಸಂದರ್ಭಗಳಿದ್ದವು.

ಅದರಲ್ಲೂ ವಿಶೇಷವಾಗಿ ನಮ್ಮೂರಿನಲ್ಲಿ ಕಾಡುಪ್ರಾಣಿಗಳ ಕಾಟ ಜಾಸ್ತಿ (ಕರಡಿ) ಅವು ಮುಂಜಾನೆ ಮತ್ತು ರಾತ್ರಿಯ ವೇಳೆಯಲ್ಲಿ ಮಾತ್ರ ಅಡ್ಡಾಡುತ್ತಿರುತ್ತವೆ. ಎಂಬ ಭಯ ಬೇರೆ ಇತ್ತು ಮನದಲ್ಲಿ ಈ ರೀತಿ ಇರಬೇಕಾದರೆ ನನಗೆ ನನ್ನ ಮನೆಗೆ ಹೋಗಬೇಕೆಂದರೆ ಭಯ ಮತ್ತು ಮುಜುಗರವಾಗುತ್ತಿತ್ತು. ಈ ನನ್ನ ಸಮಸ್ಯೆಯನ್ನು ನಮ್ಮ ಮನೆಯವರ ಬಳಿ ಹೇಳಿಕೊಂಡೆ ಆದರೆ ಅದನ್ನು ಅವರು ಕಿವಿಗೆ ಕೂಡ ಹಾಕಿಕೊಳ್ಳಲಿಲ್ಲ ಮತ್ತು ಬದಲಿಗೆ ನನ್ನನ್ನೇ ಬೈದರು ಮತ್ತು ನನ್ನಲ್ಲೇ ತಪ್ಪಿದೆ ಎಂದು ಹಿತ ಹೇಳಲು ಪ್ರಾರಂಭಿಸಿದರು. ಇದರಿಂದ ನನಗೆ ತುಂಬಾನೇ ಬೇಸರವಾಯಿತು. ಮತ್ತು ದುಃಖ ಆಯಿತು ಆದರೆ ಆದನ್ನು ನಾನು ಯಾವ ರೀತಿ ವ್ಯಕ್ತಪಡಿಸಬೇಕೆಂಬುದು ನನಗೆ ಅರ್ಥವಾಗಲಿಲ ಜೊತೆಗೆ ಈ ನನ್ನ ಸಂಕಟವನ್ನು ಅನುಭವಿಸಲು ನನ್ನ ಕೈಯಲ್ಲಿ ಆಗುತ್ತಿಲ್ಲಾ ಕೊನೆಗೆ ಮತ್ತೆ ನಾನು ನನ್ನ ಹಾಸ್ಟೆಲ್‌ಗೆ ಬಂದೆ ನಂತರ ಮೂರು ತಿಂಗಳ ಮನೆಕಡೆಹೋಗಲಿಲ್ಲಾ ನಮ್ಮ ಮನೆಯವರು ಪದೇ ಪದೇ ಕರೆಯಲು ಪ್ರಾರಂಭಿಸಿದರು. ಕೊನೆಗೆ ನಾನುಊರಿಗೆ ಹೋದೆ ಆಗ ನನ್ನನ್ನು ಕೇಳಿದರು ನಾನು ನನ್ನ ಸಮಸ್ಯೆಯನ್ನು ಅವರ ಮುಂದೆ ಹೇಳಿದಾಗ ಅವರು ಆಗ ಅದನ್ನು ಒಪ್ಪಿಕೊಂಡರು. ಆದರೆ ಶೌಚಾಲಯ ಕಟ್ಟಲು ನಮ್ಮಲ್ಲಿ ಹಣವಿಲ್ಲ ವೆಂಬ ರಾಗ ತೆಗೆದರು ಆಗ ನಾನು ನನ್ನ ಕಿವಿಗೆ ಇಟ್ಟಿದ್ದ ಓಲೆಯನ್ನು ಬಿಚ್ಚಿಕೊಪಡಲು ಮುಂದಾದೆ ಏಕೆಂದರೆ ನನಗೆ ನನ್ನ ಮಾನ ಮುಖ್ಯ ಸಮಾಜದಲ್ಲಿ ಸ್ಥಾನ ಅಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೆ.

ಆದರೆ ಇದರಿಂದ ಖಿನ್ನರಾದ ನಮ್ಮ ತಂದೆಯವರು ಕೊನೆಗೆ ಉತ್ತಮ ರೀತಿಯ ಶೌಚಾಲಯ

ಕಟ್ಟಿಸಿಕೊಟ್ಟರು. ಈಗ ನಾನು ಪ್ರತಿ ಶನಿವಾರವೂ ನಮ್ಮ ಮನೆಗೆ ಹೋಗುತ್ತಿದ್ದೇನೆ. ಮತ್ತು ಆರಾಮಾಗಿ ಶೌಚಕ್ಕೆ ಹೋಗುತ್ತಿದ್ದೇನೆ. ಯಾವುದೇ ರೀತಿಯ ಭಯವಿಲ್ಲ. ಮತ್ತು ಯಾರಾದರೂ ಬಂದು ನೋಡುತ್ತಾರೇನೋ ಎಂಬ ಆತಂಕವಿಲ್ಲ ಈ ಎಲ್ಲಾ ಸಮಸ್ಯೆಗಳ ಸುಳಿಯಲ್ಲಿ ನಲುಗುತ್ತಿದ್ದ ನಾನು ಈಗ ಸುಖವಾಗಿದ್ದೇನೆ. ನನ್ನ ಪ್ರಕಾರ ಶೌಚಾಲಯ ಕಟ್ಟಿಸದಿರಲು ಕಾರಣವೆಂದರೆ ನನ್ನ ವಿಷಯದಲ್ಲಿ ನಡೆದದ್ದು ಮೊದಲಿಗೆ ಹಣದ ಸಮಸ್ಯೆ ಮತ್ತು ಜಾಗದ ಕೊರತೆ ಮತ್ತು ತುಂಬಾ ಮನೆಗಳಲ್ಲಿ ಹೆಂಗಸರ ಸಮಸ್ಯೆಗಳನ್ನು ಕಿವಿಗೆ ಕೂಡ ಹಾಕಿಕೊಳ್ಳುವುದಿಲ್ಲ ಗಂಡಸರು ಒಂದು ವೇಳೆ ಗಂಡಸರು ಒಪ್ಪಿಕೊಂಡರೂ ಮನೆಯಲ್ಲಿ ಇರೋ ಹಿರಿಯರು (ವೃದ್ಧರು) ಮಾತ್ರ ಸಂಪ್ರಾದಾಯ ಅದು ಮನೆ ಹತ್ರ ಇರಕೂಡದು ಅನಿಷ್ಠ ಅಂತ ಹೇಳ್ತಾರೆ.

ಆದ್ರೆ ವಯಸ್ಸಿನಲ್ಲಿರುವ ನಮ್ಮಂಥ ಹುಡುಗಿಯರಿಗಂತೂ ಅದು ತುಂಬಾನೇ ಸಮಸ್ಯೆ ಎಂದೆನಿಸಿದೆ ಯಾಕೆಂದರೆ ನಾವು ತಿಂಗಳಲ್ಲಿ ಆಗುವ ಮುಟ್ಟಿನ ಸಮಸ್ಯೆಯು ನಮಗೆ ತುಂಬಾ ನೋವು ತಂದುಕೊಡುತ್ತದೆ. ಆ ಸಂದರ್ಭದಲ್ಲಿ ನಾವು ಹೆಚ್ಚು ಸಮಯವನ್ನು ಅಲ್ಲಿ ಕಳೆಯಬೇಕಾಗುತ್ತದೆ. ಅಲ್ಲದೇ ತುಂಬಾನೇ ಹೊಟ್ಟೆ ನೋವು ಕಾಣಿಸುತ್ತದೆ. ಈ ಸಂದರ್ಭದಲ್ಲಿ ನರಕವು ಕಣ್ಣುಮುಂದೆ ನಿಂತಂತಿರುತ್ತದೆ. ಮತ್ತು ತೀವ್ರ ರೀತಿಯ ಸಮಸ್ಯೆ ಹಿಂಸೆಗೆ ದಾರಿ ಮಾಡಿಕೊಡುತ್ತದೆ. ಒಟ್ಟಾರೆಯಾಗಿ ನನಗೆ ಈಗ ಯಾವುದೇ ರೀತಿಯ ಸಮಸ್ಯೆಗಳಿಲ್ಲದೇ, ನೆಮ್ಮದಿಯಾಗಿ ಶೌಚಾಲಯಕ್ಕೆ ಹೋಗುತ್ತಿದ್ದೇನೆ.

ನನ್ನ ಅನುಭವದಲ್ಲಿ ನಾನು ನೋಡಿದಂತ ಅನೇಕ ಮನೆಗಳಲ್ಲಿ ನನ್ನಂಥಹ ಯುವತಿಯರು ಮಧ್ಯಮ ವಯಸ್ಸಿನ ಹೆಣ್ಣು ಮಕ್ಕಳು ಶೌಚಾಲಯದ ಕೊರತೆ ಸಮಸ್ಯೆಯನ್ನು ಎದುರಿಸುತ್ತಿದ್ದು ಅವರಿಗೆ ಶೌಚಾಲಯದ ಅಗತ್ಯತೆಯು ಅನಿವಾರ್ಯವಾಗಿರುತ್ತದೆ. ಆದರೆ ಮನೆಯಲ್ಲಿರುವ ಯಜಮಾನರುಮನೆಯವರು ಶೌಚಾಲಯ ಕಟ್ಟಲು ಮುಂದಾಗುವುದಿಲ್ಲಾ ಆದ್ದರಿಂದ ಅನೇಕ ನನ್ನಂಥ ಹೆಣ್ಣು ಮಕ್ಕಳು ಅಲ್ಲಿ ಸಮಸ್ಯೆಯನ್ನು ಅನುಭವಿಸಲಾಗದೆ ಇಲ್ಲಿ ಸಮಸ್ಯೆಗೆ ಪರಿಹಾರ ಸಿಗದೆ ನಿಂತರ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ.

## (3) CASE STUDY

## Padmavathi

ನಾನು ಡಣಾಪುರ ವಾಸಿಯಾಗಿದ್ದು ನಮ್ಮ ಮನೆಯಲ್ಲಿ ಸೂಕ್ತ ರೀತಿಯ ಶೌಚಾಲಯವಿದೆ ಆದರೆ ನಮ್ಮ ನೆರೆಹೊರೆಯವರ ಮನೆಯಲ್ಲಿ ಮತ್ತು ನಮ್ಮ ಸಂಬಂಧಿಕರ ಮನೆಗಳಲ್ಲಿ ಕೂಡ ಶೌಚಾಲಯವಿಲ್ಲ. ಹಿಂದೆ ನಮ್ಮ ಮನೆಯಲ್ಲಿ ಕೂಡ ಶೌಚಾಲಯವಿರಲಿಲ್ಲ. ಆಗ ನಾನು ಕೂಡ ತುಂಬಾ ಕಷ್ಟ ಅನುಭವಿಸಿದ್ದೀನಿ ನಮ್ಮೂರ ರಸ್ತೆ ಬದಿಯಲ್ಲಿರುವ ಕಾರಣ ರಸ್ತೆಯಲ್ಲಿ ಓಡಾಡುವ ಜನರೆಲ್ಲಾ ನೋಡುವಂತೆ ನಮ್ಮೂರು ಕಾಣುತ್ತಿರುತ್ತದೆ. ಜೊತೆಗೆ ನಮ್ಮ ಊರು ಇತ್ತೀಚಿಗೆ ನಗರೀಕರಣದತ್ತ ದಾಪುಗಾಲು ಹಾಕುತ್ತಿರುವುದರಿಂದ ಎಲ್ಲರೂ ತಮ್ಮ ತಮ್ಮ ಜಮೀನುಗಳಿಗೆ ಬೇಲಿ ಮತ್ತು ಮುಳ್ಳುಗಂಬಿಯನ್ನು ಹಾಕಿಕೊಂಡು ಭದ್ರಪಡಿಸಿಕೊಳ್ಳುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಹೆಂಗಸರಾದ ನಾವು ಎಲ್ಲಿ ಶೌಚ ಮಾಡಬೇಕು ಎಂಬುದು ತುಂಬಾ ದುಃಖದ ಸಂಗತಿಯಾಗಿದೆ. ಮೊದಲಿನಿಂದಲೂ ಬಯಲನ್ನೇ ಅವಲಂಬಿಸಿರುವ ನಾವು ಒಮ್ಮೆಲೆ ಈ ಬದಲಾವಣೆಗಳನ್ನು ಕಂಡ ಮೇಲೆ ವಿಚಲಿತರಾಗಿದ್ದೇವೆ. ಯಾವುದಾದರೂ ಬಯಲಲ್ಲಿ ಕೂರಬೇಕೆಂದರೆ ಆ ಜಮೀನಿನವರ ಕಾಟ, ರಸ್ತೆಯ ಇಕ್ಕೆಲಗಳಲ್ಲಿ ಕೂರೋಣವೆಂದರೆ ವಾಹನ ಸವಾರರ ಮತ್ತು ಓಡಾಡುವವರ ಕಾಟ, ಈ ರೀತಿಯ ಪರಿಸ್ಥಿತಿಗಳಲ್ಲಿ ನನಗೆ ದಿಕ್ಕು ತೋಚದಂತಾಗುತ್ತಿತ್ತು. ಕಡೆಗೆ ಧೈರ್ಯಮಾಡಿ ನಾವು ಸಾಕುತ್ತಿದ್ದ ಎಮ್ಮೆಯನ್ನು ಮಾರಿ ಬಂದ ೬೦೦೦/- ಹಣದಲ್ಲಿ ಶೌಚಾಲಯ ನಿರ್ಮಿಸಿದ್ದೇವೆ. ಯಾಕೆಂದರೆ ಎಷ್ಟು ಬಾರಿ ಅಂತ ಹೊರಗಡೆ ಹೋಗೋದು ಮತ್ತು ಎಷ್ಟು ಸಲ ಅಂತ ಅವರಿವರ ಬಳಿ ಬೈಯಿಸಿಕೊಳ್ಳೋದು ಮತ್ತು ಯಾವ ರೀತಿ ಮಾನಸಿಕ ಹಿಂಸೆಯನ್ನು ತಡೆದುಕೊಳ್ಳೋದು ಅಂತ ಚಿಂತಿಸಿ ಈ ನಿರ್ಧಾರ ಕೈಗೊಂಡಿದ್ದೇನೆ. ಅಂದರೆ ಅಷ್ಟರ ಮಟ್ಟಿಗೆ ಆ ಸಮಸ್ಯೆ ನಮಗೆ ಹಿಂಸೆ ನೀಡಿತ್ತು. ಈಗ ನಾನು ಮತ್ತು ನನ್ನ ಮಗಳು ನೆಮ್ಮದಿ ಶೌಚಾಲಯಕ್ಕೆ ಹೋಗುತ್ತಿದ್ದೇವೆ. ನೆಮ್ಮದಿಯಾಗಿ ಕೂತು ಬರುತ್ತಿದ್ದೇವೆ. ಈ ರೀತಿಯ ಸಮಸ್ಯೆಗಳು ತುಂಬಾ ಹೆಂಗಸರಿಗೆ ಇದೆ ಅದರಲ್ಲೂ ಯವ್ವೌನದ ಯುವತಿಯರ ಪಾಡಂತೂ ತುಂಬಾ ಶೋಚನೀಯ ಆದರೂ ಶೌಚಾಲಯ ಕಟ್ಟಿಸಿಕೊಳ್ಳು ಮುಂದೆ ಬರುವುದಿಲ್ಲ. ಕಾರಣ ಬಡತನ ಎನ್ನುವುದು ಕೆಲವ ಮಾತಾದರೆ ಅನಿಷ್ಠ ಎನ್ನುವುದು ಕೆಲವರ ಮಾತಾಗಿದೆ. ಅನಿಷ್ಠ ಎನ್ನುವುದು ಕೆಲವರಮಾತಾಗಿದೆ.

ನಾನು ಒಂದು ಬಾರಿ ನಮ್ಮ ನೆಂಟರ ಊರಿಗೆ ಹೋಗಿದ್ದೆ ಅದು ಮದುವೆ ಅಲ್ಲಿ ಆ ಊರಿನಲ್ಲಿ ಶೌಚಾಲಯವೇ ಇಲ್ಲಾ ಎಲ್ಲರೂ ಬಯಲಿಗೆ ಹೋಗುತ್ತಿದ್ದರು. ಮದುವೆಗೆ ಬಂದಿದ್ದ ಎಲ್ಲಾ ಹೆಂಗಸರು ಒಂದೇ ಸಲ ಎಲ್ಲಿ ಅಂತ ಹೋಗುವುದು ಅದು ಹೊಸ ಸ್ಥಳ ಬೇರೆ ಸುತ್ತಲೂ ಗದ್ದೆ, ತೋಟಗಳು ಓಡಾಡುವ ಜನರು ಎಲ್ಲಿ ನಾವು ಕೂರಬೇಕೋ ಯಾರು ಬರುತ್ತಾರೋ ಎಂಬ ಚಿಂತೆಯಾಗಿತ್ತು. ನಾನು ಅಲ್ಲಿದ್ದ ೨ ದಿನ ಎರಡು ಬಾರಿ ಮಾತ್ರ ಊಟ ಮಾಡಿದ್ದೇನೆ. ಅಂದರೆ ದಿನಕ್ಕೆ ಒಂದು ಬಾರಿ ಏಕೆಂದರೆ ಎಲ್ಲಿ ಊಟ ಮಾಡಿದರೆ ಶೌಚಾಲಯಕ್ಕೆ ಹೋಗಬೇಕೋ ಎನ್ನುವ ಭಯ ನಾನೇ ಅಲ್ಲಾ ವಿಶೇಷವೆಂದರೆ ಮದುವೆಯ ಮಧುಮಗಳಿಗೂ ಊಟ ಕಡಿಮೆ ನೀಡಲಾಗತ್ತಿತ್ತು. ಕಾರಣ ನಮ್ಮ ಸಂಪ್ರಾದಯದಂತೆ ಮದುವೆ ಹೆಣ್ಣು ಮದುವೆಯಲ್ಲಿ ಕಡಿಮೆ ಊಟ

## (4) CASE STUDY

## Savithri

ನನ್ನ ಹೆಸರು ಸಾವಿತ್ರಿ ನಾವು ನಾಗೇನಹಳ್ಳಿಯಲ್ಲಿ ವಾಸವಾಗಿರುತ್ತೆವೆ. ನಮ್ಮ ಮನೆಯೆಲ್ಲಿ ಶೌಚಾಲಯ ಇರುವುದಿಲ್ಲಕಾರಣ ನಾನು ದಿನಾವು ಬಯಲಿಗೆ ಹೋಗುತ್ತೆನೆ.

ನಮ್ಮ ಊರಿನ ಸುತ್ತಮುತ್ತಲಿನ ಜಮೀನಿನ ಮಾಲಿಕರು ತಮ್ಮ ತಮ್ಮ ಜಮೀನಿನ ಸುತ್ತಲು ಮುಳ್ಳು ಬೇಲಿಯನ್ನು ಹಾಕಿಸಿಕೊಂಡಿದ್ದಾರೆ ಕಾರಣ ಹೆಚ್ಚುತ್ತಿರುವ ನಗರೀಕರಣ ಅವರ ಜಮೀನಿನಲ್ಲಿ ಯಾರುಕೂಡ ಮಲ,ಮೂತ್ರವಿಸರ್ಜನೆ ಮಾಡುವಂತಿಲ್ಲ ಹಾಗೆ ಮಾಡಿದರೆ ಗಲಾಟೆಮಾಡಿ ರಗಳೆ ತೆಗೆಯುತ್ತಾರೆ

ಈ ವಿಷಯವು ನನಗು ಗೊತ್ತಿತ್ತು ಆದರೆ ನಾನು ಒಂದು ದಿನ ರಾತ್ರಿಯಲ್ಲಿ ನಾನು ಶೌಚಾಲಯಕ್ಕೆ ಹೋಗಬೇಕಾಗಿ ಬಂತು ಆಗ ನಾನು ಒಂದು ಖಾಲಿ ಜಾಗದಲ್ಲಿ ಹೋಗಿ ಕುಳಿತಿದ್ದೆ, ನಾನು ಕಾಣದಂತೆ ಒಬ್ಬ ಹುಡುಗ ನನ್ನ ಫೋಟೊ ತೆಗೆದುಬಿಟ್ಟ ನನಗೆ ವಿಪರೀತ ಅವಮಾನ,ಸಿಟ್ಟು ಬಂತು ನಾನು ಅಲ್ಲೆ ಅವನನ್ನು ಬೈದೆ ಅದಕ್ಕೆ ಅವನು ಈ ಫೋಟೋವನ್ನು ಹಾಕಿ ನಾವು ಕಂಪ್ಲೆಂಟ ಕೊಡುತ್ತಿವಿ ಅಂದ

ನಂತರ ನಾನು ಮನೆಗೆ ಬಂದೆ. ಬಂದು ತಾಯಿಗೆ ಹೇಳಿದೆ ಆದರೆ ನಮ್ಮ ತಾಯಿ ಸುಮ್ಮನಿರು ಏನು ಮಾಡ್ತಾನೊ ನೋಡೋಣ ಎಂದು ನನ್ನ ಬಾಯಿ ಮುಚ್ಚಿಸಿಬಿಟ್ಟಳು. ಆದರೆ ನನಗೆ ತುಂಬಾ ಅವಮಾನವಾಗಿತ್ತು ಆವತ್ತಿನಿಂದ ಐದು ತಿಂಗಳು ಸರಿಯಾಗಿ ಊರಲ್ಲಿ ತಲೆಯೆತ್ತಿ ನಡೆದಿಲ್ಲ.

ಏಕೆಂದರೆ ಎಂದು ಆ ವ್ಯಕ್ತಿ ನನ್ನ ಎದುರು ಬರುವನೋ ಮತ್ತು ನನ್ನನ್ನು ಅವಮಾನಿಸುವನೇನೋ ಎಂಬ ನಾಚಿಕೆ ಮತ್ತು ದುಃಖ ಮನೆಮಾಡಿತ್ತು ಕೊನೆಗೆ ಅದನ್ನು ನಾನು ನಮ್ಮ ಅಣ್ಣನ ಬಳಿ ಈ ವಿಷಯವನ್ನು ಹೇಳಿದೆ ಅವನು ನೀನು ಆ ಟೈಂಮಲ್ಲಿ ಹೋಗಬೆಡ ಮತ್ತು ಈ ಬಾರಿ ಹೋದಾಗ ಯಾರನ್ನಾದರು ಜೊತೆಗೆ ಕರೆದುಕೊಂಡು ಹೋಗು ಎಂದು ಸಲಹೆ ಕೊಟ್ಟನು.

ಆದರೆ ನನಗೆ ಈಗಲು ರಾತ್ರಿಹೊತ್ತು ಮತ್ತು ಹಗಲಲ್ಲಿ ಶೌಚಾಲಯಕ್ಕೆ ಹೊಗಬೇಕಾದರೆ ಭಯ ಮತ್ತು ಅವಮಾನ ಆಗುತ್ತದೆ.

ಆವತ್ತಿನಿಂದ ನಾನು ಯಾವ ಹುಡುಗನಿಗೂ ನನ್ನ ಮುಕ ತ್ತೋರಿಸುತ್ತಿಲ್ಲ ಮತ್ತು ಮಾತಾಡಿಸುವುದಿಲ್ಲ, ಇತ್ತೀಚಿಗೆ ನಾನು ಕಾಲೇಜು ಕೊಡ ಬಿಟ್ಟು ಬಿಟ್ಟು ಮನೆಲಿ ಇದ್ದೇನೆ.

# (5) CASE STUDY

## Roopavathi

ನನ್ನ ಹೆಸರು ರೂಪವತಿ ನಾನು ಡಾಣಾಪುರದಲ್ಲಿ ವಾಸವಾಗಿರುತ್ತೇವೆ. ನಾನು ಶೌಚಲಯದ ಸಮಸ್ಯೆಯನ್ನು ತುಂಬಾ ದಿನಗಳಿಂದ ಅನುಭವಿಸುತ್ತಿದ್ದೇನೆ.

ನಮ್ಮ ಮನೆಯಲ್ಲಿ ಶೌಚಾಲಯ ಇಲ್ಲದ ಕಾರಣ ನಮ್ಮೂರಿನಲ್ಲಿ ಒಂದು ಸಮುದಾಯ ಶೌಚಾಲಯವಿದೆ. ಆದರೆ ಅದಕ್ಕೆ ಸರಿಯಾದ ಡೋರ್ ಮತ್ತು ಗೋಡೆಗಳಿಲ್ಲ ಆದರು ಸಹ ಅನೇಕ ಹೆಂಗಸರು ನಮ್ಮೂರಲ್ಲಿ ಅದನ್ನೆ ಬಳಸುತ್ತಿದ್ದಾರೆ.

ಕಾರಣ ಸುತ್ತಲೂ ರೋಡ್ ಮತ್ತು ಕೆಲಸ ಮಾಡುವ ಕಾರ್ಮಿಕರು ಇರುವ ಕಾರಣ ನಾನು ಒಂದು ದಿನ ಮದ್ಯಹ್ನದ ಹೊತ್ತಿನಲ್ಲಿ ಶೌಚಾಲಯಕ್ಕೆ ಎಂದು ಅಲ್ಲಿಗೆ ಹೋದೆ ಕುಳಿತ್ತಿದ್ದೆ

ಎಲ್ಲಿಂದ ಬಂದವೊ ಗೊತ್ತಿಲ್ಲ ಹಂದಿಗಳು ಒಂದೇಸಮನೆ ಕೆಳಗಿನಿಂದ ಬಂದುಬಿಟ್ಟವು ಬಂದು ಗುರುಗುಟ್ಟುತ್ತಿದ್ದವು ಎಕೆಂದರೆ ಅದು ಡ್ರೈ ಟಾಯ್ಲೆಟ್ ಆದ್ದರಿಂದ ಹಂದಿಗಳು ಸಲೀಸಾಗಿ ಹೋಗಿ ಬರುತ್ತಿರುತ್ತವೆ ಈ ರೀತಿ ಬಂದಾಗ ನಾನು ತಕ್ಷಣ ಎದ್ದುನಿಂತೆ ಆದರೆ ನನಗೆ ಅದು ಹಂದಿ ಎಂದು ಗೊತ್ತಿರಲಿಲ್ಲ

ಬದಲಿಗೆ ಇನ್ನೇನೊ ಇರಬಹುದೆಂದು ಭಯವಾಗಿ ಅಲಿಂದ ಬಂದುಬಿಟ್ಟೆ ಮತ್ತೆಲ್ಲೂ ಕೂರಲಿಲ್ಲ ಕಾರಣ ಕೂರಲು ಆಗುವುದಿಲ್ಲ ಖಾಲಿ ಜಾಗ ಇದ್ದರು ಸುತ್ತಲೂ ಜನರಿರುವ ಕಾರಣ ಆಗುವುದಿಲ್ಲ

ಅಂದಿನಿಂದ ನಾನು ಆ ಡ್ರೈ ಟಾಯ್ಲೆಟ್‌ನು ಬಳಸುವುದನ್ನು ಬಿಟ್ಟಿದ್ದೇನೆ ಮತ್ತು ಆಕಡೆ ಹೊದರೆ ಭಯ ಆಗುತ್ತದೆ ಎಕೆಂದರೆ ಅದು ರಸ್ತೆಯ ಬದಿಯಲ್ಲಿರುವ ಕಾರಣ ಜನರು ಓಡಾಡುವ ಮಾರ್ಗವಾಗಿರುತ್ತದೆ ಅಂದಿನಿಂದ ನಾನು ರಾತ್ರಿಯವರೆಗೆ ನಾನೆಲ್ಲು ಶೌಚಾಲಯಕ್ಕೆ ಹೋಗುತ್ತಿಲ್ಲ.

ಹೋದರೆ ರಾತ್ರಿಯಲ್ಲೇ ಹೋಗಿ ಬರಬೇಕಾಗಿ ಬರುತ್ತದೆ ಮತ್ತು ಹಗಲಲ್ಲಿ ಬಂದರು ಕೂಡ ಹಿಂಸೆ

ಅನುಭವಿಸುತ್ತಿರುವ ಸ್ಥಿತಿ ಎದುರಿಸುತ್ತಿದ್ದೇನೆ

ನಾನು ಯಾರ ಬಳಿಯು ಈ ವಿಷಯವನ್ನು ಹೇಳಿಕೊಂಡಿಲ್ಲ ಕಾರಣ ಇದು ನನಗೆ ಮುಜುಗರದ ವಿಷಯ ಮತ್ತು ಹೇಳಿದರುಕೊಡ ಪರಿಹಾರವೇ ಸಿಗುವುದಿಲ್ಲ ಬದಲಿಗೆ ನನಗೆ ನಾಚಿಕೆಯಾಗುತ್ತದೆ.

## (4) CASE STUDY

Sharadha

ನನ್ನ ಹೆಸರು ಶಾರದ ನಾವು ನಾಗೇನಹಳ್ಳಿಯಲ್ಲಿ ವಾಸವಾಗಿದ್ದೇವೆ. ನಾನು ಒಂದು ವರ್ಷದಿಂದ ಶೌಚಾಲಯದ ಸಮಸ್ಯೆಯನ್ನು ಅನುಭವಿಸುತ್ತಿದ್ದೇನೆ.

ನಾನು ಒಂದು ಬಾರಿ ಶೌಚಾಲಯಕ್ಕೆಂದು ಬಯಲಿಗೆ ಹೋಗಿದ್ದೆ, ಆದರೆ ಸುತ್ತಲೂ ಜನರು ಓಡಾಡಿತ್ತಿದ್ದರು, ಕಾರಣ ನಮ್ಮೂರಿನ ಸಮುದಾಯ ಶೌಚಾಲಯಕ್ಕೆ ಹೋದೆ ಆದರೆ ಅಲ್ಲಿ ಕುಳಿತ್ತಿದ್ದ ನನಗೆ ಕೋತಿಗಳು ಸದ್ದು ಕೇಳಿದೆ ಅದಕ್ಕೆ ಕಿವಿಗೊಡದ ನಾನು ಸುಮ್ಮನೆ ಕುಳಿತಿದ್ದಾಗ ಒಂದೇಸಮನೆ ಕೋತಿಗಳು ನನ್ನಡೆಗೆ ದಾವಿಸಿ ಬಂದವು,

ಇದರಿಂದ ಗಾಬರಿಗೊಂಡ ನಾನು ದಿಡೀರನೇ ಎದ್ದು ಬಂದು ಬಿಟ್ಟೆ, ಮತ್ತೆ ನಾನು ಆ ಕಡೆ ಹೋಗಲಿಕ್ಕೆ ಧೈರ್ಯಮಾಡಲಿಲ್ಲ.

ಕಾರಣ ಆ ಕೋತಿಗಳು ಪದೇ ಪದೇ ಅದೇ ರೀತಿ ಬರುತ್ತಿರುತ್ತವೆ, ಮತ್ತು ನಮಗೆ ಕಿರಿ ಕಿರಿ ಅನಿಸುತ್ತದೆ ಆದ್ದರಿಂದ ನನಗೆ ಬಯಲಿಗೆ ಹೋಗಬೇಕೆಂದರೆ ಭಯ ಆಗುತ್ತೆ ಇನ್ನು ರಾತ್ರಿಯಲ್ಲಿ ಹೋಗಬೇಕೆಂದರೆ ತುಂಬಾನೇ ಭಯ ಆಗುತ್ತೆ ಯಾಕೆಂದರೆ ಬೀದಿನಾಯಿಗಳು ಮತ್ತು ಹಲವು ರೀತಿಯ ತೊಂದರೆಗಳು ಆದಿನ ದಿನಪೂರ್ತಿ ಶೌಚಾಲಯಕ್ಕೆ ಹೋಗೆ ಇಲ.
್ಲ ಕಾರಣ ನನಗೆ ತೀವ್ರರೀತಿಯ ಹೊಟ್ಟೆನೋವು  ಕಾಣಿಸಿಕೊಂಡು ನಾನು ಮೂರು ಹೊತ್ತು ಕೂಡ ಊಟ ಮಾಡಿರಲಿಲ್ಲ.

ಈ ರೀತಿಯ ಚಿತ್ರಹಿಂಸೆಯನ್ನು ಅನುಬವಿಸುತ್ತಿದ್ದೆನೆ ಮತ್ತು ಇದನ್ನು ನಮ್ಮ ತಾಯಿ ಮತ್ತು ಅಕ್ಕನ ಬಳಿ ಹೇಳಿದೆ ಆದರೆ ಅವರು ಇರುವುದು ರಾತ್ರಿಯಲ್ಲಿ ಮಾತ್ರ ಏಕೆಂದರೆ ಕೆಲಸಕ್ಕೆ ಹೊಗುವ ಅವರು ರಾತ್ರಿ ಮನೆಗೆ ಬಂದರೆ ಆಗ ಮಾತ್ರ ನಾನು ಅವರ ಜೋತೆಗೆ ಹೋಗುತ್ತಿದ್ದೆ.ಒಂದು ವೇಳೆ ದಿನದಲ್ಲಿ ಹೋಗಬೇಕಾದರೆ ನಾನು ಹೋಗುತ್ತಿರಲಿಲ್ಲ ಈ ಭಯಕ್ಕೆ .

ಈ ಸಮಸ್ಯೆಯು ಕಳೆದ ಹಲವು ತಿಂಗಳಿಂದ ನಾನು ಅನುಬವಿಸುತ್ತಿದ್ದೇನೆ,ಆದರೆ ವಿಧಿಯಿಲ್ಲದ ಕಾರಣ ನಾನು ಈವರೆಗೂ ಬಯಲಿಗೆ ಹೊಗಬೇಕಾಗಿದೆ ಆದರೆ ತುಂಬ ಭಯ ಆಗುತ್ತದೆ ನಾವು ಆ ಕೋತಿಗಳನ್ನು ಓಡಿಸಲು ಹೋದರೆ ಕಚ್ಚುವ ರೀತಿಯಲ್ಲಿ ನಮ್ಮ ಮೇಲೆ ಬರುತ್ತವೆ ಆದರಿಂದ ದಿಡೀರನೆ ಎದ್ದು ಬರುವ ನಮಗೆ ಇನ್ನೆಲ್ಲೂ ಕೂರುವ ನೆಮ್ಮದಿ ಇರುವುದಿಲ್ಲ ಮತ್ತು ಕೂರಲಾಗುವುದಿಲ್ಲ

ಮಾಡಬೇಕೆಂಬುದು ವಾಡಿಕೆ ಆದರೆ ನಿಜವಾದ ಸಂಗತಿಯೆಂದರೆ ಆಕೆ ಒಂಟಿಯಾಗಿ ಆಚೆಗೆ ಹೋಗಬಾರದು ಮತ್ತು ಎಲ್ಲಿ ತಂಗಬಾರದು ಆದ್ದರಿಂದ ಒಂದು ವೇಳೆ ಆಕೆ ಹೆಚ್ಚಾಗಿ ಊಟ ಮಾಡಿದರೆ ಶೌಚಾಲಯಕ್ಕೆ ಹೋಗಬೇಕಾಗುತ್ತದೆ., ಶೌಚಾಲಯದ ಕೊರತೆಯ ಕಾರಣವಾಗಿ ಆಕೆಯನ್ನು ಬಯಲಿಗೆ ಕರೆದುಕೊಂಡು ಹೋಗಬೇಕಾಗುತ್ತದೆ ಇದು ಸಂಪ್ರಾಯವಲ್ಲವೆಂದು ಸಂಪ್ರದಾಯದ ಹೆಸರಿನಲ್ಲಿ ಸಮಸ್ಯೆಯನ್ನು ಮುಚ್ಚಿಸುತ್ತಿದ್ದಾರೆ ಎಂಬುದು ಸತ್ಯ ಸಂಗತಿ.

ನಾನೇ ಅಲ್ಲ ಅಲ್ಲಿದ್ದ ಸುಮಾರು ಜನ ಮಹಿಳೆಯರು ಸರಿಯಾಗಿ ಊಟ ಮಾಡುತ್ತಿರಲಿಲ್ಲ. ಕಾರಣವೇನೆಂದರೆ ಎಲ್ಲರೂ ಎನ್ನುತ್ತಾರೆ (ಗಂಡಸರು) ಮಹಿಳೆಯರು ಕೆಲಸಗಳಲ್ಲಿ ತುಂಬಾ ಕಾರ್ಯನಿರತರಾಗಿದ್ದಾರೆ. ಆದ್ದರಿಂದ ಅವರು ಹೆಚ್ಚಾಗಿ ಊಟ ಮತ್ತು ನೀರು ಕುಡಿಯುತ್ತಿಲ್ಲ ಎಂದು ಆದರೆ ಅದರರ್ಥನೇ ಬೇರೆಯಾಗಿದೆ. ನಾವು ಊಟ ಮತ್ತು ನೀರು ಹೆಚ್ಚಾಗಿ ಕುಡಿದರೆ ಶೌಚಾಲಕಯಕ್ಕೆ ಹೋಗಬೇಕಾದೀತು. ಆ ತೊಂದರೆಗೋಸ್ಕರ ನಾವು ಊಟ ಮಾಡುತ್ತಿಲ್ಲಾ ಆದರೆ ಈ ವಿಷಯವನ್ನು ಹೇಳು ನಮಗೆ ಮುಜುಗರವಾಗುತ್ತದೆ. ಈ ರೀತಿ ನಾವು ಹೇಳದೆ ನಾವು ಅನುಭವಿಸಲಾಗದ ನಮ್ಮ ನೋವನ್ನು ನಾವೇ ಅಡಗಿಸಿಕೊಳ್ಳುತ್ತಿದ್ದೇವೆ. ಮತ್ತು ಸದಾ ಮನೋವೇದನೆಗೆ ಒಳಗಾಗುತ್ತಿದ್ದೇವೆ. ಆದರೆ ನೋಡುರ ಕಣ್ಣಿಗೆ ಅದು ತಿಳಿಯುವುದು ಬೇರೆ ರೀತಿಯಲ್ಲಿ ಈ ರೀತಿಯ ಹಿಂಸೆಗೆ ನಮ್ಮಂಥ ಹೆಂಗಸರು ಬಲಿಯಾಗುತ್ತಿದ್ದಾರೆ.

ಈ ರೀತಿಯ ಸಮಸ್ಯೆಗಳನ್ನು ಗಂಡಂದಿರ ಅಥವಾ ಮನೆ ಮಂದಿಯ ಬಳಿ ಚರ್ಚೆ ಮಾಡುವುದು ಅವಮಾನಕಾರವಾಗುತ್ತದೆ. ಒಂದು ವೇಳೆ ಚರ್ಚೆ ಮಾಡಿದರೂ ಕೂಡ ಅದಕ್ಕೆ ತಕ್ಕ ಉತ್ತರ ಸಿಗುವುದಿಲ್ಲ ಅವರ ಕಡೆಯಿಂದ ಬದಲಿಗೆ ನಮ್ಮನ್ನೇ ದೋಷಿಸುತ್ತಾರೆ. ನನಗೆ ಗಂಡ ಇಲ್ಲಾ (ದೇವದಾಸಿ) ಆದ ಕಾರಣ ನಾನೇ ದುಡಿದು ಸಂಪಾದಿಸಿದ್ದೆ. ಅದಕ್ಕೆ ನಾನೇ ಅದನ್ನು ಮಾರಿದೆ (ಎಮ್ಮೆ) ಶೌಚಾಲಯ ಕಟ್ಟಿಸಿಕೊಂಡೆ ಏಕೆಂದರೆ ನಾನು ಪಡುತ್ತಿದ್ದ ಹಿಂಸೆ, ಕಷ್ಟ ನನ್ನ ಮಗಳಿಗೆ ಬೇಡ ಎನ್ನುವ ಒಂದು ಪರಿಕರದ ಮೇಲೆ ಈ ರೀತಿ ಮಾಡಿದೆ. ಆದರೆ ಒಂದಂತೂ ನಿಜ ಸಾರ್ ನಮ್ಮಂಥ ಹೆಂಗಸರಿಗೆ ಶೌಚಾಲಯದ ಅವಶ್ಯ ಇದೆ. ಆದ್ರೆ ಮನೆಯಲ್ಲಿ ಅದನ್ನು ಒಪ್ಪಿಒಕೊಳ್ಳುವುದಿಲ್ಲ. ಹೆಂಗಸರ ಬೇಡಿಕೆಗಳಿಗೆ ಸ್ಪಂದನೆ ಸಿಗುವುದಿಲ್ಲಾ ಸಾರ್ ಯಾಕೆಂದರೆ ಸುಮಾರು ನನ್ನ ಸ್ನೇಹಿತರು ನನ್ನ ಬಳಿ ಹೇಳಿದ್ದಾರೆ. ಅವರೂ ಕೂಡ ಈ ಹಿಂಸೆನ ಅನುಭವಿಸುತ್ತಿದ್ದಾರೆ. ಮತ್ತು ಹಲವು ಸಲ ಅವರು ಅವರವರ ಮನೆಗಳಲ್ಲಿ ಚರ್ಚೆ ಕೂಡ ಮಾಡಿದ್ದಾರೆ. ಆದರೆ ಪರಿಹಾರ ಸಿಕ್ಕಿಲ್ಲಾ ಈಗಲೂ ಸುಮಾರು ನಮ್ಮ ಅಕ್ಕ ಪಕ್ಕದ ಹೆಣ್ಣು ಮಕ್ಕಳು ನಮ್ಮ ಶೌಚಾಲಯವನ್ನು ಬಳಸುತ್ತಿದ್ದಾರೆ. ಯಾಕೆಂದರೆ ಅವರಿಗೆ ಬಯಲಿನ ಸಮಸ್ಯೆ ಅಷ್ಟು ತೀವ್ರರೀತಿಯಲ್ಲಿದೆ ಮತ್ತು ನಾನು ಅದನ್ನು ಅನುಭವಿಸಿದ್ದೇನೆ. ಆದ್ದರಿಂದ ನಾನೇನು ಅವರನ್ನು ಅನ್ನುವುದಿಲ್ಲಾ ಸಾರ್.